soldiers. What other State can possibly provide such ideal conditions for those 'holiday homes' while our countryside provides the very conditions required for the schools for his children, even if it has to be be in hutments. Sir a day may come when the exigencies of war may require the families of our soldiers to be evacuated from those exposed areas, and on that day I pray that this State has already laid down a progamme to welcome these people to our State, Mr. Speaker, may also, in its own programme, provide for the families and dependents of our soldiers, their mothers, their parents, sisters and brothers, who are dependent on them. We appear to limit our Charity, when it is possible that our returning soldiers may be incapacitated and have to be cared for by their dependents. To that extent I plead that the State programme should immediately lay down training schemes so that their wives and dependent may acquire the means to earn a living. Sir, as I remarked Wars have a habit of altering men's minds, and it will be a very serious tragedy if our leaders did not appriciate the extent to which the jawans or the solder's mind will have changed by the time he returns. I hope my colleagues in this House will bear with me when I express the hope that our leaders be they in Government or otherwise will not take too seriously the recent resolution passed by the Central Committee of the Communist Party of India. Sir, if an ex-serviceman were to read that resolution you will find that he will read in it no more than that Moscow Radio broadcasted the day previous. Sir, the Indian people have changed, and it is this change that I plead recognition for. We all stand foursquare behind the Prime Minister, with your permission, I quote the words of our Prime Minister, "resisting the aggressor will cost us dearly but I am sure that this high cost must be paid to maintain our indepenence and territorial integrity". I say on behalf of the ex-service men, whose minds I know, that this is precisely how every ex-serviceman feels. In conclusion may I quote the words of that great and grand old Indian statesman Sir C. P. Ramaswami Iyer. Speaking a few days ago at the Convocation of the Delhi University, he summed up the change in the mind of the Indian people, as "the warrior in India has been aroused". Thank you.

ಶ್ರೀಮತಿ ನಾಗರತ್ನಮ್ಮ ಹಿರೇಮಠ (ಗಾಂಧೀ ನಗರ).—ಮಾನ್ಯ ಅಧ್ಯಕ್ಷರೇ ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಮಂಡಿಸಿರತಕ್ಕ ನಿರ್ಣಯವನ್ನು ಸಮರ್ಥಿಸುತ್ತಾ ನಾನು ಒಂದೆರಡು ವಿಷಯಗಳನ್ನು ಹೇಳಬೇಕೆಂದಿದ್ದೇನೆ. ಇಂಥ ಒಂದು ಸಮಯದಲ್ಲಿ ನಮ್ಮ ಕರ್ತವ್ಯ, "ಯಾರಿಗೆ ನಿನ್ನಯ ಶ್ಲಾಘನೆಯುಂಟು, ದೇಶದ ರಕ್ಷಕ ಯೋಧನಿಗುಂಟು" ಎಂದು ಹೇಳುವುದು ಇಂದಿನ ನಮ್ಮ ಮಂತ್ರವಾಗಿದೆ. ದುರ್ಗಮವಾದ ಹಿಮಾಲಯದ ಎತ್ತರ ಸ್ಥಳಗಳಲ್ಲಿ ದಟ್ಟವಾದ ಮಂಜು ಪ್ರದೇಶದಲ್ಲಿ ಶತ್ರುಗಳ ಚಕ್ರಬಿಂಬ ಕೋಟೆಯಲ್ಲಿ ಹೋರಾಡಿ ವೀರ ಸ್ವರ್ಗ ಪಡೆದಿರುವ ಅಭಿನವ ಅಭಿಮನ್ಯುಗಳಾದ ವೀರ ಯೋಧರಿಗೆ ನನ್ನ ಬಾಷ್ಪಾಂಜಲಿಯನ್ನರ್ಪಿಸುತ್ತೇನೆ. ಭಾರತದ ಸ್ವಾತಂತ್ರ ಮತ್ತು ಘನತೆ ಗೌರವಗಳ ರಕ್ಷಣೆಗಾಗಿ ಪ್ರಾಣವನ್ನರ್ಪಿಸಲು ಸಿದ್ಧರಾಗಿ ಹೋರಾಡುತ್ತಿರುವ ವೀರಯೋಧರಿಗೆಲ್ಲಾ ಪ್ರಣಾಮಗಳನ್ನರ್ಪಿಸುತ್ತೇನೆ.

"ಸುಖ ಬಂದರೆ ಪುಣ್ಯದ ಫಲವೆನ್ನದಿರಿ, ದುಃಖ ಬಂದರೆ ಪಾಪದ ಫಲವೆನ್ನದಿರಿ ಅವಶ್ಯ ಮನು ಭೋಕ್ತವ್ಯಂ ಎಂದೆನ್ನಿರಿ. ಉದಾಶೀನ ವೈರಿಗೆ ಶರಣೆಂದಂತೆ, ಫಲದಂಕ ಮಲ್ಲ ಮಲ್ಲೆಯಾಗಿ ಚೀಣೀಯರಿಗೆ ಸಿಂಹ ಪ್ರಾಯರಾದಲ್ಲಿ ಜಯ ಶತಸ್ಸಿದ್ಧ" ಎಂದಿದ್ದಾರೆ ಒಬ್ಬ ಲೇಖಕರು. ಈ ರೀತಿ ಧೃಡ ಪ್ರತಿಜ್ಞೆಯಿಂದ ಇಂದು ನಮಗೆ ಚೀಣೀಯರಿಂದ ಬಂದಿರುವ ರಾಷ್ಟ್ರೀಯ ಗಂಡಾಂತರವನ್ನು ಎದುರಿಸಬೇಕಾಗಿದೆ. ಅಹಿಂಸಾ ಹೋರಾಟದಿಂದ ತ್ಯಾಗ ಬಲಿದಾನಗಳಿಂದ ಸ್ವಾತಂತ್ರ್ಯಗಳಿಸಿದ 14 ವರ್ಷಗಳಲ್ಲಿಯೇ ಇಂತಹ ದೊಡ್ಡ ರಾಷ್ಟ್ರೀಯ ಗಂಡಾಂತರವನ್ನು ಎದುರಿಸಬೇಕಾದೀತೆಂದು ಯಾರೂ ನಿರೀಕ್ಷಿಸಿರಲಿಲ್ಲ. "ಪಂಚಶೀಲ ಪಾಲಿಸೋಣ. ಚೀನಿ, ಹಿಂದಿ, ಭಾಯಿ, ಭಾಯಿ, ಎಂದು ಹೇಳುತ್ತಿದ್ದ ನಮ್ಮ ನೆರೆರಾಷ್ಟ್ರ ಚೈನಾ-ಪಂಚಶೀಲ ಬಿಟ್ಟು ಠಕ್ಕ ಶೀಲತೆಯಿಂದ ನಮ್ಮ ಮೇಲೆ ಆಕ್ರಮಣ ನಡೆಸಿರುವುದು ಅನ್ಯಾಯದ ಪರಮಾವಧಿ. ದ್ವೇಷಾಸೂಯೆಗಳಿಂದ ಕೂಡಿರುವ ಒಂದೆರಡು ರಾಷ್ಟ್ರಗಳ ವಿನಹ ಜಗತ್ತಿನ ಎಲ್ಲಾ ಪ್ರಜಾ ಪ್ರಭುತ್ವ ರಾಷ್ಟ್ರಗಳು ಚೀನೀಯರ ಈ ರಾಕ್ಷಸೀ ಕೃತ್ಯವನ್ನು ಖಂಡಿಸಿದ್ದಾರೆ. ಇದು ನಮ್ಮ ರಾಷ್ಟ್ರದ ಶೀಲತೆ, ಘನತೆಗಳಿಗೆ ಸಾಕ್ಷಿಯಾಗಿದೆ. ಇತಿಹಾಸ ಓದಿದವರಿಗೆಲ್ಲಾ ಗೊತ್ತಿದೆ. "ವಿಸ್ತರಣಾಕಾಂಕ್ಷಿಗಳು ಎನಿತೋ ಜವರು" ಕಾಲಚಕ್ರಕ್ಕೆ ಸಿಲುಕಿ ಹುಡಿಯಾಗಿ ಹೋಗಿಹರು "ಅವರ ದಾರಿಯ ಹಿಡಿದು ನಡೆಯುತಿದೆ ಚೀನ" ಅಳಿವು ದೈ ನಮ್ಮೊಡನೆ ನಡೆಸಿದರೆ ಸಂಧಾನ ಈರೀತಿ ಆಗದಿದ್ದಲ್ಲಿ ಚೈನಾದವರು ಹಿಮಾಲಯದ ಮಂಜು ಮುಕ್ಕಿ ಹೋಗುವುದರಲ್ಲಿ ಸಂಶಯವಿಲ್ಲ. "ಶ್ರೇಯಾಂಸಿ ಬಹು ವಿಘ್ನಾನಿ" ಎಂಬಂತೆ ಮುಂದುವರಿಯುತಿದ್ದ ನಮ್ಮ ಬೃಹತ್ ರಾಷ್ಟ್ರವನ್ನು ನೋಡಿ ಅಸೂಯೆಯಿಂದ ಚೈನಾ ನಮ್ಮ ಮೇಲೆ ದುಂಡಾವೃತ್ತಿಯನ್ನು ಕೈಕೊಂಡಿದೆ. ತಮ್ಮ 60 ಕೋಟಿ ಜನಕ್ಕೆ ಆಹಾರ, ವಸತಿ, ಉದ್ಯೋಗ, ನ್ಯಾಯಪೂರ್ವಕ ಒದಗಿಸಲಾಗದೆ ಠಕ್ಕ ಶೀಲತೆಯಿಂದ ಒದಗಿಸಲು ಪ್ರಯತ್ನಿಸಿದೆ. "ಕುರಿ ತೋಳ ನ್ಯಾಯದಿಂದ" ನಮ್ಮ ಮೇಲೆ ಅಕ್ರಮಣ ನಡೆಸಿದೆ. ಜನಸಂಖ್ಯೆಯಲ್ಲಿ 10 ಕೋಟಿ ಸತ್ತರೂ ಪೀಡೆ ತೊಲಗಿತೆಂಬ ಸ್ವಜನ ದ್ರೋಹಕ್ಕೂ ಅವರು ಸಿದ್ಧರಿದ್ದಾರೆ. ಈ ಆಕ್ರಮಣ

(ಶ್ರೀಮತಿ ನಾಗರತ್ನಮ್ಮ ಹಿರೇಮಠ್)

ನಡೆಸಿ ಚೀನಾದವರು ನಮಗೆ ಉಪಕಾರ ಮಾಡಿದ್ದಾರೆ ಹೇಗೆಂದರೆ, ಇಂದು ನಮ್ಮಲ್ಲಿ "ಜಾತೀಯತೆಗೆ ಕೂಡಿದ್ದವು. ಹಲವು ವಾದಗಳು ಭಾಷಾವಾದ ಭಾಷಾವಾದ ಗಡಿವಾದ-ಕ್ರಾಂತಿವಾದ ಸಮತಾವಾದ, ಮೇಣ್ ಪ್ರಜಾ ಪ್ರಭುತ್ವವಾದ" ಒಂದೆತ್ತು ಎಳೆದೊಡೆ ಒಂದಿತ್ತು ಎಳೆದಿತ್ತು ಎತ್ತು ಎರಿಗೆ, ಕೋಣ ಕೆರೆಗೆ ಎಳೆದಂತೆ ಆಗಿತ್ತು ಇದರಿಂದ ಬೇಸತ್ತು ರಾಷ್ಟ್ರ ಕಳಮಳಿಸಿತ್ತು ಜನತೆ ಭ್ರಮೆಗೊಳಗಾಗಿತ್ತು ಈ ಭ್ರಮೆಯಲ್ಲದೆ ಬಡವ ಬಲ್ಲಿದವದಲ್ಲಿ ನಿತ್ಯ ಹೋರಾಟ ಜಾತಿ ಜಾತಿಗಳಲ್ಲಿ ನಿತ್ಯ ಕಚ್ಚಾಟ, ನನ್ನ ನುಡಿ, ನಿನ್ನ ನುಡಿ ಎಂಬ ಕೂಗಾಟ, ಪ್ರಾಂತ ಗಡಿಗಳಿಗಾಗಿ ಮತ್ತೆ ಕಾದಾಟ, ಸ್ಥಾನ ಮಾನಗಳಿಗಾಗಿ ಕಚ್ಚಾಟ, ಇಂತು ರಾಷ್ಟ್ರದಿ ಬೇರೆ ಬೇರೆ ವಿಷ ತುಂಬಿತ್ತು ಈ ವಿಷವನುಣಬಲ್ಲ ವಿಷ ಕಂಠ ಬೇಕಿತ್ತು ಪರಮಾತ್ಮ ಕೃಪೆ ಮಾಡಿ ಕಳಿಸಿರ್ಪ ಚೈನವನು ಆಕ್ರಮಣ ಕೆಚ್ಚಿತ್ತು ಭಿನ್ನ ಭೇದವ ಮರೆತು ಜನತೆ ಒಂದಾಗಿಹದು ತ್ಯಾಗ ಬಲಿದಾನಗಳಿಗೆ ದೇಶ ಅಣಿಯಾಗಿಹುದು ಇದು ನಮ್ಮ ಪುಣ್ಯ. ಈಪುಣ್ಯನೀಡಿರ್ಪಚೌಎನ್‌ಗೆ ಶರಣು ಶರಣಾರ್ತಿ ಶರಣಾರ್ತಿ ನೂರಾರು ವರ್ಷಗಳು ಸಾಧಿಸಲಾದ ಒಗ್ಗಟ್ಟುಭಾವೈಕ್ಯ-ರಾಷ್ಟ್ರಾಭಿಮಾನ ಕೆಲವು ತಿಂಗಳಲ್ಲೆ ಬಂದದ್ದು ಒಂದು ಅದ್ಭುತ ಪವಾಡವೆಂದೇ ಹೇಳಬೇಕಾಗಿದೆ. ನಮ್ಮ ನುಡಿ ಭಾರತ, ನಮ್ಮ ನಡೆ ಭಾರತ, ನಮ್ಮಜಾತಿ ಭಾರತ, ನಮ್ಮ ಧರ್ಮ ಭಾರತ ಎಂಬ ಮನೋಭಾವನೆ, ಒಗ್ಗಟ್ಟು, ಬಲಿದಾನ, ತ್ಯಾಗ ಬುದ್ಧಿ ಬಂತಿರುವುದು ನಮ್ಮ ಸೌಭಾಗ್ಯ. "ನಾಳೆ ಒಪ್ಪುದು ನಮಗಿಂದೇ ಬರಲಿ, ಇಂದು ಒಪ್ಪುದು ಈಗಲೇ ಬರಲಿ, ಇದಕಾರಂಜುವರು ಇದಕಾರಳುಕುವರು, ಜಾತಸ್ಯ ಮರಣಂ ಧ್ರುವಂ-ಮರಣವೇ ಮಹಾನವಮಿ" ಎಂಬ ಬಸವಣ್ಣನವರ ನುಡಿ ಇಂದು ಭಾರತದ ನುಡಿಯಾಗಿದೆ. ಇಂತಹ ಒಂದು ಚೈತನ್ಯ ಶಕ್ತಿಯನ್ನು ಚೈನಾದವರು ಕೆಣಕಿದ್ದಾರೆ, ಕೆಣಕಲಿ. ಚೀನಾದೇಶದ ರಾಜ್ಯದಾಹದ ಕಾಳಿ, ಭಾರತದ ಗಡಿಯಲ್ಲಿ ನಡೆಸಿಹಳು ಧಾಳಿ, ನಾವೆಲ್ಲ ಭೈರವನ ರೂಪವನ ತಾಳಿ, ಸಮರಗೈದರೆ ಆಗ ಓಡುವಳು ಕಾಳಿ. "ಇದು ಚೈನಾದವರಿಗೆ ನಾವು ಮಾಡಬೇಕಾಗಿರುವ ಪ್ರತೀಕಾರ. ಈಗ ನಮ್ಮ ಮುಂದಿರುವುದು ಒಂದೇ ಪ್ರಶ್ನೆ. ಈ ರಾಷ್ಟ್ರೀಯ ಗಂಡಾಂತರವನ್ನು ಹೇಗೆ ಎದುರಿಸಬೇಕು? ಹೇಗೆ ಜಯಶಾಲಿಗಳಾಗಬೇಕೆಂಬ ಪ್ರಶ್ನೆಗಳನ್ನು ಉಪಯೋಗಿಸಬೇಕಾಗಿವೆ. ಯುಕ್ತಿ ಶಕ್ತಿಗಳನ್ನು ಉಪಯೋಗಿಸಬೇಕಾಗಿದೆ. ನಮ್ಮ ರಾಷ್ಟ್ರ ಮುಖಂಡರು ಹಾಗೆ ಮಾಡಿದರು. ಹಾಗೆ ಮಾಡಬಾರದಾಗಿತ್ತು ಎಂಬ ತರ್ಕವಿತರ್ಕಗಳಿಗೆ ತಿಲಾಂಜಲಿ ಬಿಡಬೇಕು. ಹೀಗೆ ತರ್ಕ ಮಾಡುವುದೂ ಒಂದೇ ನಮ್ಮ ಚಿಕ್ಕಮ್ಮನಿಗೆ ಮೀಸೆ ಬಂದಿದ್ದರೆ, ಚಿಕ್ಕಪ್ಪಾ ಎನ್ನಬಹುದಾಗಿತ್ತು ಎನ್ನುವುದೂ ಒಂದೇ ಕಾರಣ ಭೂತಕಾಲವನ್ನು ಮರೆತು, ವರ್ತಮಾನ, ಭವಿಷ್ಯತ್ ಕಾಲಗಳಿಗೆ ಗಮನ ಕೊಡೋಣ. ನಮ್ಮ ರಾಷ್ಟ್ರ ನಾಯಕ ನೆಹರೂರವರಲ್ಲಿ ಸಂಪೂರ್ಣ ನಂಬಿಕೆಯಿಟ್ಟು ಆಕ್ರಮಣಕಾರರನ್ನ ಹೊಡೆದೊಡಿಸೋಣ. "ಮನೆ ಮಠಗಳ ನಾಶ ಮಾಡಿ ವೈರಿ ಕೋಲಾಹಲಗೈಲಿ. ನಮ್ಮ ಜನರನ್ನು ನವಖಂಡ ಮಾಡಿ ತುಂಡರಿಸಲಿ, ನಮ್ಮನ್ನು ಗುಂಡುಗಳಿಂದ ಸುಡಲಿ, ಆಗಬಾರದ್ದು ಆಗಲಿ, ಭಾರತದ ಗೆಲುಮೆಗೆ ದುಡಿಯುವೆ. ಮಡಿಯುವೆ" ಎಂಬ ತ್ಯಾಗ ಬಲಿದಾನಕ್ಕೆ ಸಿದ್ಧರಾಗೋಣ. ಇದು ನಮಗೇನೂ ಹೊಸದಲ್ಲ. ಈ ಹಿಂದೆ ಮಾಡಿದ್ದೇವೆ ಮತ್ತೆ ಇಂದು ಮಾಡಬೇಕಾಗಿದೆ. "ಆಯುಷ್ಯ ತೀರಿದಲ್ಲದೆ ಮರಣವಿಲ್ಲ, ಶೀಲ ತಪ್ಪಿದಲ್ಲದೆ ಕೆಡುಕಿಲ್ಲ. ಅಂಜಲೇಕೋ ಚೀನಾ ವಿಗರ್ಭಣೆಗೆ, ಅಳುಕಲೇಕೋ ಭಾರತೀಯನಾಗಿ" ಎಂಬ ಕೆಚ್ಚುನೆಚ್ಚುಗಳಿಂದ ಹೊರಾಟ ನಡೆಸೋಣ. ಸರಿಯಬಹುದು ಒಂದು ವೇಳೆ ಅಚಲಗಿರಿ ಹಿಮಾಲಯ ತೊರಯಲಾರೆ ಚೀನವನ್ನು ಸೋಲಿಸುವ ಧ್ಯೇಯ, ಎಂಬ ನಿಷ್ಠೆಯಿಂದ ದುಡಿಯೋಣ. ಅದಕ್ಕಾಗಿ ದುಡಿಯೋಣ.

ಈ ರಾಷ್ಟ್ರೀಯ ಗಂಡಾಂತರದಲ್ಲಿ ಹೆಣ್ಣು ಗಂಡೆನ್ನದೆ, ಹುಡುಗರು ಮುದುಕರೆನ್ನದೆ ಎಲ್ಲರೂ ಅವರವರ ಕರ್ತವ್ಯವನ್ನು ನಿಷ್ಠೆಯಿಂದ ಪ್ರಾಮಾಣಿಕತೆಯಿಂದ ಮಾಡಬೇಕಾಗಿದೆ. ಸೈನ್ಯದಳ, ವಿಮಾನದಳ, ನಾವಿಕದಳ, ನಗರ ಮತ್ತು ಗ್ರಾಮ ರಕ್ಷಕ ದಳಗಳಿಗೆ ಸೇರುವವರು ಸೇರಬೇಕು. ರಕ್ತದಾನ ಮಾಡುವವರು ಮಾಡಬೇಕು. ಕಾರ್ಖಾನೆಗಳಲ್ಲಿ ತಯಾರಿಸುವವರು ಹೆಚ್ಚು ಹೆಚ್ಚು ತಯಾರಿಸಬೇಕು. ಆಹಾರೋತ್ಪನ್ನ ಹೆಚ್ಚಿಸುವವರು ಹೆಚ್ಚಿಸಬೇಕು. ಕೈಲಾಗದವರು ಜನರಿಗೆ ಮಾರ್ಗದರ್ಶನ ಮಾಡಲು ಪತ್ರಿಕೆಗಳ, ಪ್ರಕಟನೆಗಳ, ಕವನಗಳ ಮೂಲಕ ಸೇವೆಸಲ್ಲಿಸಬಹುದು. ಉದಾಶೀನತೆಯುಳ್ಳವರು ಕೊನೆಯಪಕ್ಷ ಜೀವನದ ಖರ್ಚು ವೆಚ್ಚಗಳಲ್ಲಿ ಉಳಿತಾಯ ಮಾಡಬೇಕು. ಹೀಗೆ ಅವರವರ ಶಕ್ತಿ, ಯುಕ್ತಿ ಸ್ವಭಾವಗಳಿಗನುಸಾರ ಸೇವೆ ಸಲ್ಲಿಸಬೇಕಾಗಿದೆ. ಇದಕ್ಕೆಲ್ಲಾ ಅಪಾರ ಹಣ ಬೇಕಾಗಿದೆ. ಸುವರ್ಣ ವೃಷ್ಟಿಯೇ ಬೇಕಾಗಿದೆ. ರಾಷ್ಟ್ರ ಮುಖಂಡರ ವಾಣಿಗೆ ಮಾನ್ಯತೆ ಕೊಟ್ಟು ದೇಶಾದ್ಯಂತ ಹಣ, ಭಂಗಾರ ವಸ್ತುಗಳು ನಿರೀಕ್ಷೆ ಮೀರಿ ಸಂದಾಯವಾಗುತ್ತಿರುವುದು ಶುಭ ಚಿನ್ಹೆ. ಆದರೆ ಕೆಲವು ರಾಜರುಗಳು, ಕೆಲವ ಶ್ರೀಮಂತರು, ಕೆಲವು ದೇವಸ್ಥಾನಗಳು, ಕೆಲವು ಮಠಾಧಿಪತಿಗಳು ಎಷ್ಟು ಉದಾರತೆಯಿಂದ ಕೊಡಬಹುದೋ ಅಷ್ಟನ್ನು ಕೊಟ್ಟಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ.

"ಕೊಟ್ಟದ್ದು ತನಗೆ, ಬಚ್ಚಿಟ್ಟದ್ದು ಪರರಿಗೆ। ಕೊಟ್ಟದ್ದು ಕೆಟ್ಟಿತೆನಬೇಡ। ಅದು ಮುಂದೆ ಕಟ್ಟಿದ ಬುತ್ತಿ" ಎಂದಿದ್ದಾನೆ ಸರ್ವಜ್ಞ. ಇದನ್ನರಿತು ಕೊಡತಕ್ಕವರೆಲ್ಲಾ ಉದಾರತೆಯಿಂದ ಕೊಡಬೇಕು. "ಉಣ್ಣದೊಡವೆಯಗಳಿಸಿ। ಮಣ್ಣಿನಲಿ ಬಚ್ಚಿಟ್ಟು। ಚೆನ್ನಾಗಿ ನೆಲದ ಸಾರಿಸಿದವರ ಬಾಯಲ್ಲಿ। ಮಣ್ಣು ಕಾಣಯ್ಯ॥" ಎಂದಿದ್ದಾನೆ ಧರ್ಮವೀರ ಸರ್ವಜ್ಞ. ಈ ವಾಣಿಗೆ ನಾವು ತಲೆಬಾಗಿ ನಮ್ಮಲ್ಲಿರುವ ಭಂಗಾರ ಎಷ್ಟು ಉದಾರತೆಯಿಂದ ಕೊಡಬಹುದೋ ಅಷ್ಟನ್ನೂ ಕೊಡೋಣ ಹೆಚ್ಚಾಗಿದ್ದರೆ ಸುವರ್ಣ ಬಾಂಡುಗಳನ್ನು ಕೊಳ್ಳೋಣ. "ಪಾಪಿಯ ಧನ ಪ್ರಾಯಶ್ಚಿತ್ತಕ್ಕಲ್ಲದೆ ಸತ್ ಪಾತ್ರಕ್ಕೆ ಸಲ್ಲದಯ್ಯಾ। ನಾಯಿಯ ಹಾಲು ನಾಯಿಗಲ್ಲದೆ ಪಂಚಾಮೃತಕ್ಕೆ ಸಲ್ಲದಯ್ಯಾ। ನಾಡಿನ ಆಪತ್ತಿನಲ್ಲಿ ನೆರವಾಗದ ಹಣ ಹೆಣಕ್ಕಿಂತ ಕಡೆ ಕಾಣಯ್ಯ॥" ಎಂದಿದ್ದಾರೆ ಒಬ್ಬ ವಚನಕಾರರು. ಇಂತಹ ಅಪವಾದಕ್ಕೆ ನಾವು ಗುರಿಯಾಗದೆ ದೇಶದ ಆಪತ್ತಿನಲ್ಲಿ ಎಲ್ಲಾ ವಿಧಗಳಿಂದಲೂ ನೆರವಾಗುವ ಸದ್ ಬುದ್ಧಿಯನ್ನು ಜಗದೀಶನು ನಮಗೆ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇನೆ.

ಇನ್ನೊಂದು ಮಹತ್ವದ ವಿಚಾರವಿದೆ. ಇಂತಹ ಪ್ರಸಂಗಗಳಲ್ಲಿ ಸ್ವಾರ್ಥಿಗಳು ಅಧರ್ಮದಿಂದ ಹಣಗಳಿಸಲು ಪ್ರಯತ್ನಿಸುತ್ತಾರೆ. ಅನೇಕ ವ್ಯಾಪಾರಿಗಳು ಕಾಳಸಂತೆ ವ್ಯಾಪಾರಿಗಳಾಗುತ್ತಾರೆ. ಇದರಂತಹ ನೀಚವೃತ್ತಿ ಜಗತ್ತಿನಲ್ಲಿ ಬೇರೆ ಯಾವುದೂ ಇಲ್ಲ:

'ಎಲ್ಲರಿಗೂ ಬಂದ ಕಷ್ಟವನ್ನು ತಾನೂ ಸ್ವಾಗತಿಸುವುದು ನೇಮ । ಇದ್ದುದ ಬಚ್ಚಿಡದೆ ಬಂಧುಗಳಿಗೆ ಹಂಚುವುದು ನೇಮ । ನುಡಿದಂತೆ ನಡೆಯುವುದು ನೇಮ । ಸ್ವಾರ್ಥಿಗಳಾಗದೆ ರಾಷ್ಟ್ರೋನ್ನತಿಗೆ ನೆರವಾಗುವುದು ನೇಮ ।' ಈ ನೇಮದಂತೆ ನಡೆದವರು ಭಾರತೀಯರು. ನಡೆಯದವರು, ಅಭಾರತೀಯ ದೇಶ ದ್ರೋಹಿಗಳಾಗುತ್ತಾರೆ. "ಹರಿವ ಹಾವಿಗೆ ಅಂಜೆ । ಉರಿಯ ನಾಲಗೆಗಂಜೆ । ಶೂಲದ ಮೊನೆಗಂಜೆ । ಒಂದಕ್ಕಂಜುವೆ । ಒಂದಕ್ಕಳುಕುವೆ—ದೇಶ ದ್ರೋಹವೆಂಬ ಮಹಾ ಪಾತಕಕ್ಕಂಜುವೆ ॥" ಎಂಬ ನುಡಿಗೆ ಇಡೀ ರಾಷ್ಟ್ರ ತಲೆಬಾಗದಲ್ಲಿ ಆ ದೇಶವನ್ನು ಯಾವ ಶಕ್ತಿಯೂ ಎದುರಿಸದು, ಯಾವ ಶಕ್ತಿಯೂ ಗೆಲ್ಲದು. "ಸ್ವರ್ಗ ದೊರೆಯದು, ನರಕ ತಪ್ಪದು ದೇಶ ದ್ರೋಹಿಯ ಜನ್ಮಕ್ಕೆ । ಪಾಪ ತೊಲಗದು ಪುಣ್ಯ ಬಾರದು ರಾಷ್ಟ್ರ ದ್ರೋಹಿಯ ಆತ್ಮಕ್ಕೆ" ಎಂದಿರುವುದರಿಂದ ದೇಶ ದ್ರೋಹಕ್ಕೆಳಸಿದರೆ ತಲೆದಂಡ ಎಂಬ ನಿಷ್ಠೆಯಿಂದ ಭಾರತದ ಶ್ರೇಷ್ಠತೆಯನ್ನು ಕಾಯುವುದು ಎಲ್ಲರ ಕರ್ತವ್ಯವಾಗಿದೆ.

ನಾವು ಮಹಿಳೆಯರು ಹುಟ್ಟಿದಂದಿನಿಂದ ಸಾಯುವ ತನಕ ಸೇವಾಧಾರಿಗಳಾಗಿದ್ದೇವೆ, ತ್ಯಾಗ ಜೀವಿಗಳಾಗಿದ್ದೇವೆ. ಈಗ ಹೆಚ್ಚಿನ ಹೊಣೆಗಾರಿಕೆ ನಮ್ಮ ಮೇಲಿದೆ. "ವಿಮೆನ್ ಹ್ಯಾವ್ ಪ್ರಫೌಂಡ್ ಸೆನ್ಸ್ ಆಫ್ ಟ್ರೂತ್ ಅಂಡ್ ಹಾನೆಸ್ಟಿ ವಿಚ್ ಸಮ್ ಮೆನ್ ಲ್ಯಾಕ್" ಎಂದು ತಿಳಿದವರು ಹೇಳಿದ್ದಾರೆ. ನಾವು ಈಗ ವಿಶ್ವರೂಪಿಗಳಾಗಿ ವಿಶ್ವರೀತಿಯಲ್ಲಿ ಸೇವೆ ಸಲ್ಲಿಸಬೇಕಾಗಿದೆ. "ನಾರಿ ಪರ ಉಪಕಾರಿ । ನಾರಿ ಸ್ವರ್ಗಕೆ ದಾರಿ । ನಾರಿ ಸಕಲರಿಗೆ ಹಿತಕಾರಿ ! ಮುನಿದರೆ ನಾರಿಯೆ ಮಾರಿ" ಎಂದಿದ್ದಾನೆ ಸರ್ವಜ್ಞ. ಈಗಿನ ಗಂಡಾಂತರದಲ್ಲಿ ಇದನ್ನು ನಾವು ಅಕ್ಷರಶಃ ಪಾಲಿಸಿ ನಮ್ಮ ಭಾಗದ ಸೇವೆಯನ್ನು ಸಲ್ಲಿಸೋಣ, ಮಹಿಳೆಯರ ಪ್ರತಿಭೆಯನ್ನು ಬೆಳೆಸೋಣ.

ಈ ಪ್ರಸಂಗದಲ್ಲಿ ಒಂದು ಗಂಭೀರ ಸೂಚನೆಯನ್ನು ನಮ್ಮ ಸರ್ಕಾರಕ್ಕೆ ಮಾಡಬೇಕೆಂದಿದ್ದೇನೆ. ನಮ್ಮ ಮಂತ್ರಿಗಳು ಉಪಮಂತ್ರಿಗಳಿಂದ ಹೆಚ್ಚಿನ ತ್ಯಾಗ ಮತ್ತು ಸೇವೆಯನ್ನು ಜನತೆ ಅಪೇಕ್ಷಿಸುತ್ತಿದೆ. ಸರ್ಕಾರ ಆದರ್ಶವಾದರೆ ಪ್ರಜೆಗಳು ಆದರ್ಶವಾಗುತ್ತಾರೆ. ಇಲ್ಲವಾದರೆ "ತತ್ವ ಹೇಳುತ ಬಾಯಿತುಂಬ ಭತ್ಯ ಪಡೆಯುತೆ ಕೈಯಿ ತುಂಬಾ । ಮಂತ್ರಿಯಾಗಿ ಹುದಿಂದು ಸ್ವಾರ್ಥ ಬಿಂಬ ॥" ಎಂದು ಯಾರಾದರೂ ಹೇಳಬಹುದು. ದುರ್ಭಿಕ್ಷದಲ್ಲಿ ಅಧಿಕ ಮಂತ್ರಿಗಳು ಏಕೆ ಎಂದು ಯಾರಾದರೂ ಕೇಳಬಹುದು. ೨೫ ದೀಪಗಳಲ್ಲಿ ೧೫ನ್ನು ಕಡಿಮೆ ಮಾಡಿ ಏಕೆ ವಿದ್ಯುಚ್ಛಕ್ತಿ ಉಳಿಸಬಾರದು ಎಂದು ಯಾರಾದರೂ ಸಲಹೆ ಕೊಡಬಹುದು. ಈ ಹೇಳಿಕೆ, ಕೇಳಿಕೆ, ಸಲಹೆಗಳು ಈ ಪ್ರಸಂಗದಲ್ಲಿ ಯುಕ್ತ, ನ್ಯಾಯ ಪೂರ್ವಕವಾದವುಗಳೆಂಬುದನ್ನು ಯಾರೂ ಅಲ್ಲಗಳೆಯಲಾರರು, ಕಾರಣ ಸಂಬಂಧಪಟ್ಟವರು ಆತ್ಮ ಸಂತೋಷದಿಂದ ತ್ಯಾಗ ಮಾಡಿ ಮಾರ್ಗದರ್ಶಕವಾಗುವುದನ್ನು ಗಂಭೀರತೆಯಿಂದ ಯೋಚಿಸಲೆಂದು ವಿನಂತಿಸುತ್ತೇನೆ. ಹಾಗೆಯೇ ವಿಧಾನ ಸಭಾ ಸದಸ್ಯರಾದ ನಮಗೆಲ್ಲಾ ಸೇವೆ ಸಲ್ಲಿಸುವ ಅಂದರೆ ಮಂತ್ರಿ ಉಪಮಂತ್ರಿ ಆಗಿ ಅಲ್ಲ, ರಾಷ್ಟ್ರ ರಕ್ಷಣಾ ಕಾರ್ಯದಲ್ಲಿ ಜವಾಬ್ದಾರಿಯಿಂದ ಕೆಲಸ ಮಾಡುವ ಅವಕಾಶ ಒದಗಿಸಿ ಕೊಡಲೆಂದು ವಿನಂತಿಸುತ್ತೇನೆ.

ಈಗಿನ ಗಂಡಾಂತರದಲ್ಲಿ ಸರ್ಕಾರದಿಂದ ನಿರೀಕ್ಷಣೆ ಮೀರಿದ ಮಿತವ್ಯಯವನ್ನು ಜನತೆ ಅಪೇಕ್ಷಿಸುವುದು ಸ್ವಾಭಾವಿಕ. ಕಾಗದ ಕಡಮೆ ಮಾಡುವುದು, ಪ್ರವಾಸ ಕಡಮೆ ಮಾಡುವುದು, ಸರ್ಕಾರ ಸಮಾರಂಭಗಳನ್ನು ತ್ಯಜಿಸುವುದು, ಈ ಮಿತವ್ಯಯಗಳತ್ತ ಸರ್ಕಾರ ಗಮನ ಕೊಟ್ಟಿರುವುದು ಶ್ಲಾಘನೀಯ, ಇದರಂತೆ ಮಂತ್ರಿ ಉಪಮಂತ್ರಿಗಳು ವಾಸಕೊಡುವ ಗೃಹಗಳಿಗೆ ತಿಂಗಳಿಗೆ ೫೦೦ ರಿಂದ ೮೦೦ ರೂಪಾಯಿಗಳ ವರೆಗಿನ ಬಾಡಿಗೆ ಕೊಡುವುದು ಈ ದುರ್ಧರ ಪ್ರಸಂಗದಲ್ಲಿ ಹೆಚ್ಚೆಂದು ಕಾಣುತ್ತದೆ. ಈ ಕಡೆಯೂ ಮಿತವ್ಯಯ ಸಾಧಿಸಬೇಕೆಂದು ಸಂಬಂಧಪಟ್ಟವರಿಗೆ ವಿನಂತಿಸುತ್ತೇನೆ.

ಪಾನನಿರೋಧ ನೀತಿಯನ್ನು ತುರ್ತು ಪರಿಸ್ಥಿತಿಯ ದೆಸೆಯಿಂದ ವಿಮರ್ಶಿಸುವ ಕಾಲ ಬಂದಿದೆ. ಯಶಸ್ವಿಯಾಗದೇ ಇರುವ ಈ ನೀತಿಯನ್ನು ಕೈಬಿಟ್ಟಲ್ಲಿ ಕೋಟ್ಯಂತರ ರೂಪಾಯಿಗಳ ಆದಾಯ ಬರುವುದರಿಂದ ಸರ್ಕಾರದವರು ಈ ಬಗ್ಗೆ ಯೋಚಿಸುವುದು ಉತ್ತಮವೆಂದು ಸಲಹೆ ಮಾಡುತ್ತೇವೆ.

ಸೋಷಿಯಲ್ ವೆಲ್‌ಫೇರ್ ಬೋರ್ಡಿನಲ್ಲಿ ಅಪವ್ಯಯ ತುಂಬಿ ತುಳುಕುತ್ತಿದೆ. ಹೆಸರು ಗಂಗಾಧರ ಕುಡಿಯಲು ನೀರಿಲ್ಲ ಎಂಬಂತಿದೆ ಈ ಖಾತೆಯ ವ್ಯವಹಾರ, ರಾಷ್ಟ್ರದ ತುರ್ತು ಪರಿಸ್ಥಿತಿಯಲ್ಲಿ ಈ ಖಾತೆಯನ್ನು ಮನ್ನಾ ಮಾಡಿದಲ್ಲಿ ಅದರ ಬಾಬ್ತು ಹಣ, ಜೀಪುಗಳು ವಗೈರೆ ಬೇರೆ ಉಪಯುಕ್ತ ಕಾರ್ಯಕ್ಕೆ ಒದಗುತ್ತವೆ. ದೇಶದಲ್ಲಿ ಯುದ್ಧ ಪರಿಸ್ಥಿತಿಯ ಬಗ್ಗೆ ಜಾಗೃತಿಯನ್ನುಂಟು ಮಾಡುವ ಕಾರ್ಯಕ್ರಮಗಳ ಬಗ್ಗೆ ಸರ್ಕಾರ ತುಂಬಾ ನಿಗಾ ಕೊಡಬೇಕಾಗಿದೆ. ಸರ್ಕಾರದ ಪ್ರಕಟನಾ ಇಲಾಖೆ ಜನ ಸಾಮಾನ್ಯದ ಮೆಚ್ಚಿಗೆಯ ಇಲಾಖೆಯಾಗಬೇಕು. ಪ್ರಚಾರ ದೃಷ್ಟಿಯಿಂದ ನಮ್ಮ ಆಕಾಶವಾಣಿಯಲ್ಲಿ ತುಂಬಾ ಪರಿವರ್ತನೆ ಆಗಬೇಕಾಗಿದೆ. ಅಲ್ಲಿ ನಿಷ್ಪಕ್ಷಪಾತಿಗಳಾದ ಬಲ್ಲಿದರಾದ ತಜ್ಞರುಗಳ ಆವಶ್ಯಕತೆ ಇದೆ. ಸ್ವಪ್ರತಿಷ್ಠೆ, ಪಕ್ಷಪಾತ ಮನೋಭಾವದವರಿಗೆ ಅಲ್ಲಿ ಸ್ಥಳ ವಿರಬಾರದು, ರಾಷ್ಟ್ರೀಯ ಗಂಡಾಂತರದಲ್ಲಿ ಆಕಾಶವಾಣಿ ಒಂದು ಪ್ರಬಲ ಅಂಗವಾದುದರಿಂದ, ಅದರ ಪೂರ್ಣ ಉಪಯೋಗ ಇಂದು ರಾಷ್ಟ್ರಕ್ಕೆ ಬೇಕಾಗಿರುವುದರಿಂದ ಸುವ್ಯವಸ್ಥಿತ ಕಾರ್ಯಕ್ರಮ ನಡೆಯಲು ಸರ್ಕಾರ ಹೆಚ್ಚಿನ ನಿಗಾ ಕೊಡುವುದೆಂದು ನಂಬಿದ್ದೇನೆ.

ಕೊನೆಯದಾಗಿ "ವೈರ ಮತ್ಸರ ಸ್ವಾರ್ಥ ವಂಚನೆ ಜಾಡಿ ಪಕ್ಷದ ತುಳಿಯಿರಿ" ಎಂಬುದು ರಾಷ್ಟ್ರ ನಾಯಕರ ಸಂದೇಶ. ಈ ಸಂದೇಶಕ್ಕೆ ನಾವೆಲ್ಲರೂ ತಲೆಬಾಗೋಣ, "ನಮ್ಮ ಶಕ್ತಿಗೆ, ದೇಶ ಭಕ್ತಿಗೆ ಚೈನಾ ಸೋಲ್ವುದು ನಿಶ್ಚಿತ । ಧರ್ಮ ದೇವತೆ ಭರತ ಮಾತೆಗೆ ಗೆಲುವು ದೊರೆವುದು ಖಂಡಿತ ॥" ಎಂದು ಸೂಚಿಸಿ ನಮ್ಮ ಮುಂದಿರುವ ನಿರ್ಣಯವನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ.

Sri VIDYADHAR GURUJI (Gurmitkal).—[Spoke in Hindi].

Mr SPEAKER.—The House will now rise for recess and meet after half an hour.

The House adjourned for recess at Three of the Clock and re-assembled at Thirty Minutes past Three of the Clock.

[MR. DEPUTY SPEAKER in the Chair.]

Sri VIDYADHAR GURUJI [Concluded his Hindi speech].

† ಶ್ರೀ ಎ. ಪಿ. ಅಪ್ಪಣ್ಣ (ವಿರಾಜಪೇಟೆ).—ಮಾನ್ಯ ಸಭಾಧ್ಯಕ್ಷರೇ, ಇವತ್ತು ಮಂಡಿಸಿರುವಂತಹ ನಿರ್ಣಯವನ್ನ ನಾನು ಅನುಮೋದಿಸುತ್ತಾ ಚೀಣಾದವರು ನಮ್ಮ ದೇಶಕ್ಕೆ ಮಾಡಿದಂತಹ ಆಕ್ರಮಣದ ವಿಚಾರವಾಗಿ ಯಾರಿಗೂ ಭಿನ್ನಾಭಿಪ್ರಾಯವಿಲ್ಲ. ಅದರ ವಿಚಾರವಾಗಿ ಉದ್ರೇಕದಿಂದಾಗಲೀ ಯಾವ ರೀತಿಯಿಂದಾಗಲೀ ಮಾತನಾಡಿದ್ದರಿಂದ ಚೀಣಾದವರನ್ನು ಹೊರದೂಡಿಸಬಹುದೆಂಬ ಅಭಿಪ್ರಾಯದಲ್ಲಿ ನಾವು ಇರದೆ ಇವತ್ತಿನ ದಿವಸ ಬಂದಿರುವ ಈ ಕಷ್ಟ ಪರಿಸ್ಥಿತಿಯಲ್ಲಿ ನಾವು ಯಾವ ರೀತಿ ವರ್ತಿಸಬೇಕು, ನಮ್ಮಪಾತ್ರ ಎಷ್ಟಿರಬೇಕು, ನಾವು ಈ ಮೈಸೂರು ಸಂಸ್ಥಾನದಲ್ಲಿ ಯಾವರೀತಿ ಸಹಕಾರವನ್ನು ಕೇಂದ್ರ ಸರ್ಕಾರದವರಿಗೆ ಚೀನೀಯರನ್ನು ಹೊರದೂಡಿಸುವುದಕ್ಕೆ ನೀಡಬಹುದು ಎಂಬ ವಿಚಾರವನ್ನು ಜಾಗ್ರತೆಯಾಗಿ ಪರಿಶೀಲಿಸುವುದು ಬಹಳ ಉತ್ತಮ. ನಮ್ಮ ದೇಶಲ್ಲಿ ಸ್ವಾತಂತ್ರ್ಯವನ್ನು ಅಹಿಂಸೆಯ ಮೂಲಕ ಗಳಿಸಿದ್ದೇವೆ. ಆದರೆ ಇವತ್ತು ಆ ಸ್ವಾತಂತ್ರ್ಯವನ್ನು ಹಿಂಸೆಯಿಂದ ಉಳಿಸಬೇಕಾಗಿದೆ. ಅನೇಕ ಜನರು ಜೈಲಿಗೆ ಹೋಗಿ ಆಗ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟಿದ್ದಾರೆ. ಆದರೆ ಇವತ್ತು ಯಾರು ಜೈಲಿಗೆ ಹೋಗುತ್ತಿದ್ದಾರೆ ಎನ್ನುವುದು ನಮಗೆ ಗೊತ್ತಿದೆ. ಇವತ್ತು ನಾವು ಪಡೆದಿರತಕ್ಕ ಸ್ವಾತಂತ್ರ್ಯವನ್ನು ಉಳಿಸಬೇಕು. ಅದು ಬಹಳ ಪವಿತ್ರವಾದ ಕಾರ್ಯ. ಯಾರೇ ಆಗಲೀ ಸುಮ್ಮನೆ ಜೈಲಿಗೆ ಹೋಗುವುದರಿಂದ ಏನೂ ಆಗುವುದಿಲ್ಲ. ನಮಗಾಗಿ, ನಮ್ಮ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ಸೈನಿಕರಿಗೆ ಹೆಚ್ಚಿಗೆ ಬೆಂಬಲ ಕೊಡುವುದರಿಂದ ಮಾತ್ರ ಹೆಚ್ಚಿನ ಪ್ರಯೋಜನವುಂಟು. ಸ್ವಾತಂತ್ರ್ಯವನ್ನು ಗಳಿಸುವುದಕ್ಕೆ ಎಷ್ಟರಮಟ್ಟಿಗೆ ಕಾರ್ಯಕ್ರಮಗಳನ್ನು ಕೈಗೊಂಡಿದ್ದೆವೋ ಅದೇರೀತಿಯಾಗಿ ಸ್ವಾತಂತ್ರ್ಯವನ್ನು ಈಗ ಉಳಿಸುವುದಕ್ಕೂ ತಕ್ಕ ಕಾರ್ಯಕ್ರಮಗಳನ್ನು ಕೈಗೊಳ್ಳಬೇಕು. ಆದರೆ ಸುಮ್ಮನೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎಂಬ ಭಾವನೆಯಿಂದ ಮಾತನಾಡುವುದರಿಂದಾಗಲೀ ಕಾರ್ಯಕ್ರಮಗಳನ್ನು ಕೈಗೊಳ್ಳುವುದರಿಂದಾಗಲೀ ಇಂತಹ ಸಂಧಿಗ್ಧ ಪರಿಸ್ಥಿತಿಯನ್ನು ನೀಗಿಸುವುದು ಅಸಾಧ್ಯವಾದೀತು. ನಿಜವಾಗಿ ಅದರಿಂದ ಎಂದಿಗೂ ಫಲಕಾರಿಯಾಗುವಂತಿಲ್ಲ. ಅದಕ್ಕೆ ಆರ್ಥಿಕ ದೃಷ್ಟಿಯಿಂದ ಸೈನಿಕರಿಗೆ ಯಾವರೀತಿ ಬೆಂಬಲವನ್ನು ಕೊಡಬೇಕು ಅದಕ್ಕಾಗಿ ಯಾವರೀತಿ ತ್ಯಾಗವಮಾಡಬೇಕು, ಈ ಸಂದರ್ಭದಲ್ಲಿ ಯಾವರೀತಿ ಸರ್ಕಾರ ಜಾಗರೂಕತೆ, ಎಚ್ಚರಿಕೆಯಿಂದಿರಬೇಕು ಎಂಬ ಸಲಹೆಗಳ ಮೂಲಕ ನಮ್ಮ ಕಾರ್ಯಕ್ರಮಗಳನ್ನು ಮಾಡಬೇಕು ಎಂಬುದನ್ನು ನಾವು ಈ ಸಂದರ್ಭದಲ್ಲಿ ಯೋಚಿಸಬೇಕು. ನಾವು ಇತ್ತೀಚೆಗೆ ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ಅನೇಕ ಜನರು I am prepared to go to the War front ಎಂಬುದಾಗಿ ಹೇಳುತ್ತಿರುವುದನ್ನು ಅನೇಕ ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಅಂತಹ ಹೇಳಿಕೆಗಳಿಂದ ಏನೂ ಆಗುವುದಿಲ್ಲ. ಸಾಮಾನ್ಯವಾಗಿ ನನಗೆ ವಿಧಾನ ಸೌಧದ ಮೆಟ್ಟಲನ್ನು ಹತ್ತುವುದಕ್ಕಾಗುವುದಿಲ್ಲ. ಅಂದಮೇಲೆ ನನ್ನಂತಹವನು I am prepared to go to the front ಎಂದು ಹೇಳಿದರೆ ಏನಾಗುತ್ತದೆ ? ಇವತ್ತು ದೇಶಕ್ಕೆ ಬಂಧಿರುವ ಗಂಡಾಂತರವನ್ನು ನಾವು ಸಣ್ಣರೀತಿಯಲ್ಲಿ ತಮಾಷೆ ರೀತಿಯಲ್ಲಿ ಉಪಯೋಗಿಸುತ್ತಿದ್ದೇವೆಯೇ ವಿನಾ ಈ ಗಂಡಾಂತರವನ್ನು ಯಾವರೀತಿ ಎದುರಿಸಬೇಕು, ಯಾವರೀತಿಯಲ್ಲಿ ನಾವೂಸಹ ಸಹಕರಿಸಬಹುದು ಎಂಬೀ ವಿಚಾರಗಳನ್ನು ನಾವು ಆಲೋಚಿಸಬೇಕು. ಆ ಗಂಡಾಂತರವನ್ನು ಯಾವರೀತಿಯಲ್ಲಿ ನಮ್ಮ ಗಮನಕ್ಕೆ ತೆಗೆದುಕೊಂಡಿದ್ದೇವೆಂಬುದನ್ನು ನಾವು ಅರಿತು ಮಾಡಿದಂತಾಗಿಲ್ಲ. ನಮ್ಮ ಸಹಕಾರ ಯಾವರೀತಿಯಿಂದ ಇರಬೇಕು ಎನ್ನುವುದನ್ನು ಕಾರ್ಯತಃ ಆಲೋಚನೆ ಮಾಡುವ ಸಂದಿಗ್ಧ ಸಮಯ ಇವತ್ತು ಬಂದಿದೆ. ಇಂತಹ ಸಂದಿಗ್ಧ ಸಮಯದಲ್ಲಿ ನಮ್ಮ ಮೈಸೂರು ರಾಜ್ಯದಲ್ಲಿ ತೆಗೆದುಕೊಂಡಿರತಕ್ಕ ಕಾರ್ಯಕ್ರಮಗಳಲ್ಲಿ ನಾವು ಎಷ್ಟು ಮುಂದೆ ಹೋಗಿದ್ದೇವೆ, ಒಂದುವೇಳೆ ಆರೀತಿ ಮುಂದೆಹೋಗದಿದ್ದರೆ ಯಾವ ಯಾವಮುಂಜಾಗರೂಕತೆ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂಬುದನ್ನು ಪರ್ಯಾಲೋಚಿಸಬೇಕು. ಇವತ್ತು ನಮ್ಮ ಇಡೀ ದೇಶದಲ್ಲಿ ಜನರೆಲ್ಲರೂ ಒಂದಾಗಿದ್ದಾರೆ. ಬಹಳವಾಗಿ ಹಣ ಕೊಡುತ್ತಿದ್ದಾರೆ, ಬಹಳವಾಗಿ ಚಿನ್ನ ಕೊಡುತ್ತಿದ್ದಾರೆ, ಅದು ನಿಜ. ಆದರೆ ಎಷ್ಟು ಕೊಡಬೇಕೋ ಅಷ್ಟನ್ನು ಕೊಡುತ್ತಿಲ್ಲ. ಅವರು ಏನು ಕೊಡಲು ಸಾಧ್ಯತೆ ಇದೆಯೋ, ಎಷ್ಟು ಕೊಡಬೇಕೆಂಬ ಉದ್ದೇಶವಿದೆಯೋ ಅಷ್ಟು ಹಣ, ಚಿನ್ನ ಇನ್ನೂ ಬರಲಿಲ್ಲ ಎನ್ನುವುದನ್ನು ನಾವು ಈಗ ಆಲೋಚನೆ ಮಾಡಬೇಕು. ನಮ್ಮ ದೇಶದಲ್ಲಿರತಕ್ಕ 45 ಕೋಟಿ ಜನತೆಯಲ್ಲಿ ಒಬ್ಬೊಬ್ಬರೂ ಎರಡು ರೂಪಾಯಿಗಳಂತೆ ತಲಾ ಹಣಕೊಟ್ಟರೆ ಇವತ್ತಿಗೆ 90 ಕೋಟಿ ರೂಪಾಯಿಗಳು ಆಗುತ್ತಿತ್ತು. ಆದರೆ ನಮ್ಮ ಕೇಂದ್ರ ಸರ್ಕಾರದಲ್ಲಿ ಇದುವರೆಗೆ ಶೇಖರಣೆಯಾಗಿರತಕ್ಕ ಹಣ ಕೇವಲ 12 ಕೋಟಿ ರೂಪಾಯಿಗಳು. ಹಣ ಶೇಖರಣೆ ಬಗ್ಗೆ ಯಾವರೀತಿ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಅದನ್ನು ವಿವಿಧ ರೂಪದಲ್ಲಿ ನಾವು ಮಾಡುವುದು ಬಹಳ ಉತ್ತಮ. ಇವತ್ತು ರಕ್ಷಣಾ ನಿಧಿಗೆ ಸಾಧಾರಣವಾಗಿ ಬಡಜನರಿಂದ ಹಣ ಅಧಿಕವಾಗಿ ಬರುತ್ತಿದೆಯೇ ವಿನಾ ದೊಡ್ಡ ದೊಡ್ಡ ಮನುಷ್ಯರಿಂದ ಅಥವಾ ಶ್ರೀಮಂತರಿಂದ ಬರುತ್ತಿದೆಯೆಂದು ನಾನೇನೋ ನಂಬುವುದಿಲ್ಲ. ಇದು ಯಾವರೀತಿ ಬರಬೇಕು, ಆ ರೀತಿ ಹಣ ಶೇಖರಿಸುವಾಗ ಬರತಕ್ಕ ಸಾಧಕ ಭಾದಕಗಳೇನು ಎಂಬುದನ್ನು ಸರ್ಕಾರ ಬಹಳವಾಗಿ ಆಲೋಚನೆ ಮಾಡುವ ಪರಿಸ್ಥಿತಿ ಈಗ ಬಂದಿದೆ. ಅಲ್ಲದೆ ಈ ಹಣವನ್ನು ಶೇಖರಣೆ ಮಾಡುವ ಕಾರ್ಯಕ್ರಮ ವಿವಿಧ ರೂಪದಲ್ಲಿ ಆಗಬೇಕೇ ವಿನಾ ಅದು ನೀರೆಲ್ಲಾ ಹರಿದುಬಂದು ಒಂದೇ ಸಮುದ್ರಕ್ಕೆ ಸೇರುವ ರೀತಿಯಲ್ಲಿ ಇರಬೇಕೇ ವಿನಾ ಅದು ಬೇರೆಬೇರೆ ಸಮುದ್ರಕ್ಕೆ ಸೇರುವ ರೀತಿ ಆದರೆ ಅದರಿಂದ ದೋಷ ಬಂದೀತು ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇದಕ್ಕೆ ಒಂದು ನಿದರ್ಶನವನ್ನು ಈ ಸಭೆಯ ಮುಂದೆ ಸಭಾಧ್ಯಕ್ಷರ ಮೂಲಕ ಇಡಬೇಕೆಂದು ನಾನು ಇಚ್ಛೆಪಡುತ್ತೇನೆ. ಈ ಚೈನಾಕ್ರಮಣವಾದ ಕೆಲವು ದಿನಗಳಲ್ಲಿ ನಮ್ಮ ಕೊಡಗಿನ ಒಂದು ಜಿಲ್ಲೆಯಲ್ಲಿ ಕೆಲವು ಅಧಿಕಾರಿಗಳು ರಸೀದಿ ಪುಸ್ತಕವಿಲ್ಲದೆಯೇ ಅಂಗಡಿಯಿಂದ ಅಂಗಡಿಗೆ ಹೋಗಿ ಹಣವನ್ನು ಶೇಖರಣೆ ಮಾಡಿದ್ದಾರೆ. ಉದಾಹರಣೆಗೆ ಹೇಳುವುದಾದರೆ ಕಮರ್ಶಿಯಲ್ ಡಿಪಾರ್ಟ್‌ಮೆಂಟಿನ ಒಬ್ಬ ಸೇಲ್ಸ್‌ಟ್ಯಾಕ್ಸ್ ಆಫೀಸರ್ ಒಂದು ಅಂಗಡಿಯಲ್ಲಿ ಸುಮಾರು 25-30 ರೂಪಾಯಿಗಳನ್ನು ವಸೂಲುಮಾಡಿ ರಸೀದಿಯನ್ನು ಕೊಡದೆಯೇ ನಾನು ಆ ಹಣವನ್ನು ರಕ್ಷಣಾನಿಧಿಗೆ ಕಳುಹಿಸುತ್ತೇನೆಂದು ಹೇಳಿದರೆ, ಅದರಲ್ಲಿ ಎಷ್ಟರಮಟ್ಟಿಗೆ ನಿಜಾಂಶವಿರುತ್ತದೆ ? ಆ ಹಣದಬಗ್ಗೆ ಯಾವ ಲೆಕ್ಕವೂ ಇಲ್ಲ, ರಶೀದಿ ಇಲ್ಲ, ಹಣ ಕಳಿಸಿದ್ದಕ್ಕೆ ರುಜುವಾತು ಇಲ್ಲ, ಇದು ಎಷ್ಟು ಮೋಸವೆಂಬುದನ್ನು ನಾವು ಆಲೋಚಿಸಬೇಕು. ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಇಂತಹ ಕೆಲಸಗಳನ್ನು ಇತ್ತೀಚೆಗೆ ಈ

ಸಂದರ್ಭವನ್ನು ಉಪಯೋಗಿಸಿಕೊಂಡು ಅನೇಕ ಜನ ಮಾಡುತ್ತಿದ್ದಾರೆ. ಆದರೆ ಅಂತಹ ಜನರು ನಮ್ಮ ದೇಶದಲ್ಲಿ ಇದ್ದಾರೆಯೇ ಎಂದು ಯಾರಾದರೂ ಪ್ರಶ್ನೆ ಹಾಕಬಹುದು. ಅಂತಹವರೂ ಕೆಲವರು ಇದ್ದಾರೆ. ನಮ್ಮ ಸಮಾಜದಲ್ಲಿ ಇಂತಹ ಒಂದು ಸಂದರ್ಭವನ್ನು ದುರುಪಯೋಗಪಡಿಸುತ್ತಿದ್ದಾರೆಂಬ ಅಂಶಗಳು ಸರ್ಕಾರದ ಗಮನಕ್ಕೆ ಬಂದಿರುವುದರಿಂದ ಅದಕ್ಕೆ ಸರಿಯಾದ ಜಾಗರೂಕತೆಯನ್ನು ಈಗಲೇ ಸರ್ಕಾರದವರು ಕೈಗೊಳ್ಳಬೇಕು. ವಿವಿಧ ರೂಪಗಳಲ್ಲಿ ಶೇಖರಿಸತಕ್ಕ ಪ್ರತಿಯೊಂದು ನಯಾಪೈಸೆಯೂ ರಕ್ಷಣಾನಿಧಿಗೆ ತಲುಪುವುದರ ವ್ಯವಸ್ಥೆ ಮಾಡುವುದು ಸರ್ಕಾರದ ಆದ್ಯ ಕರ್ತವ್ಯವಾಗಿದೆ. ಈ ದೃಷ್ಟಿಯಿಂದ ಸರ್ಕಾರ ಆಲೋಚನೆಮಾಡಬೇಕು. ಆರೀತಿಯಲ್ಲಿ ಮಾಡದೆ ಒಂದುಕಡೆ ತಾಲ್ಲೂಕ್ ಬೋರ್ಡಿನವರು ಹಣವನ್ನು ವಸೂಲುಮಾಡುವುದು, ಮತ್ತೊಂದು ಕಡೆ ಮುನಿಸಿಪಾಲಿಟಿಯವರು ಹಣ ವಸೂಲುಮಾಡುವುದು, ಇನ್ನು ಕೆಲವುಕಡೆಗಳಲ್ಲಿ ಬೇರೆ ಬೇರೆ ಸಂಸ್ಥೆಗಳು ಮತ್ತೆ ಹಣವನ್ನು ವಸೂಲುಮಾಡುವುದು – ಹೀಗಾಗಿ ಅನೇಕ ಸಂಸ್ಥೆಗಳು ಸರಿಯಾಗಿ ರಶೀದಿಗಳನ್ನು ಕೊಡದೆಯೇ ಹಣ ಶೇಖರಣೆಮಾಡಿ ದುರುಪಯೋಗಪಡಿಸುವ ಒಂದು ಸಂದರ್ಭ ಬಂದೀತು ಎಂಬುದಾಗಿ ನಾನು ಸರ್ಕಾರಕ್ಕೆ ಸೂಚನೆ ಮಾಡುತ್ತೇನೆ. ಈಗಾಗಲೇ ನಾನು ಅನೇಕ ಪತ್ರಿಕೆಗಳಲ್ಲಿ ನೋಡಿದ್ದೇನೆ. ಇಂತಹ ಮುನಿಸಿಪಾಲಿಟಿ ಒಂದು ಲಕ್ಷ, ಇಂತಹ ತಾಲ್ಲೂಕ್ ಬೋರ್ಡ್ ಒಂದುಸಾವಿರ-ಹೀಗೆ ರಕ್ಷಣಾನಿಧಿಗೆ ಕೊಟ್ಟಿದೆ ಎಂದು ಪತ್ರಿಕೆಗಳ ಮೂಲಕ ತಿಳಿಯುತ್ತಿದ್ದೇವೆ. ಆದರೆ ಸರ್ಕಾರ ಗ್ರ್ಯಾಂಟು ಕೊಟ್ಟ ಹಣ, ಜನರು ತೆರಿಗೆಕೊಟ್ಟ ಹಣ–ಇದರಿಂದ ರಕ್ಷಣಾನಿಧಿಗೆ ಕೊಟ್ಟಿದೆ ಎಂಬುದಾಗಿ ಮುನಿಸಿಪಾಲಿಟಿ ಅಥವಾ ತಾಲ್ಲೂಕ್ ಬೋರ್ಡುಗಳು ಹೇಳುವುದು ಸರಿಯಲ್ಲ. ತಮ್ಮ ಬೊಕ್ಕಸಕ್ಕೆ ತೆರಿಗೆಯ ಮೂಲಕ ಬಂದಂಥ ಹಣದಲ್ಲಿ ಮತ್ತು ಸರ್ಕಾರದಿಂದ ಗ್ರ್ಯಾಂಟು ಮೂಲಕ ಕೊಟ್ಟ ಹಣದಲ್ಲಿ ರಕ್ಷಣಾ ನಿಧಿಗಾಗಿ ಸ್ವಲ್ಪಭಾಗವನ್ನು ಕೊಟ್ಟಿದ್ದೇವೆಂದು ಜನತೆಯ ಮುಂದೆ ಹೇಳುವ ಪ್ರಸಂಗವಾಗಬಾರದು. ಯಾವ ಮುನಿಸಿಪಾಲಿಟಿಯೇ ಆಗಲೀ ತಾಲ್ಲೂಕ್ ಬೋರ್ಡ್ ಯಾವುದೇ ಆಗಲೀ ರಕ್ಷಣಾನಿಧಿಗೆ ನಿಜವಾಗಿ ಹಣವನ್ನು ಜನತೆಯಿಂದ ಪ್ರತ್ಯೇಕವಾಗಿ ಶೇಖರಣೆ ಮಾಡಿದ್ದಾರೆಯೇ ಇಲ್ಲವೇ ಎನ್ನುವುದನ್ನು ಸರ್ಕಾರದವರು ಪರಿಶೀಲನೆ ಮಾಡಬೇಕು. ನಿಜವಾಗಿ ಜನರಿಂದ ಶೇಖರಣೆಮಾಡಿದಂತಹ ಹಣ ಮುನಿಸಿಪಾಲಿಟಿ ಅಥವಾ ತಾಲ್ಲೂಕ್‌ಬೋರ್ಡಿನಿಂದ ಬಂದಿದೆಯೇ ಅಥವಾ ಸರ್ಕಾರದ ಗ್ರ್ಯಾಂಟು ಅಥವಾ ಜನತೆಯಿಂದ ವಸೂಲಾದ ತೆರಿಗೆಹಣ ರಕ್ಷಣಾನಿಧಿಗಾಗಿ ಕೊಟ್ಟಿದ್ದಾರೆಯೇ ಎಂಬುದನ್ನು ಸರ್ಕಾರ ವಿಚಾರ ಮಾಡಬೇಕು. ಇದರಿಂದ ಅವರುಗಳಿಗೆ ಸರ್ಕಾರ ಪೂರ್ತಿಯಾಗಿ ಕೊಡತಕ್ಕ ಹಣವನ್ನು ನಿಲ್ಲಿಸುವಹಾಗೆ ಆಗುತ್ತದೆಯೇ ವಿನಾ ಮತ್ತೇನೂ ಆಗುವುದಿಲ್ಲ.

ಆದ್ದರಿಂದ ಕೆಲವು ಸಮಯದಲ್ಲಿ ಸಿಬ್ಬಂದಿಗೆ ಸಂಬಳ ಕೊಡಲಿಕ್ಕೆ ಹಣಬೇಕೆಂದು ಅವರು ಸರ್ಕಾರಕ್ಕೆ ಬರುತ್ತಾರೆ. ಆ ದೃಷ್ಟಿಕೋಣದಿಂದ ನೋಡವೇ ಜನರಿಂದ, ನಿಜವಾದಂಥ ಪ್ರೋತ್ಸಾಹ ಬರುವಂಥ ಹಣವನ್ನು ಶೇಖರಣೆ ಮಾಡಲಿಕ್ಕೆ ಕ್ರಮ ಕೈಕೊಳ್ಳಬೇಕು. ನಮ್ಮ ಉತ್ಪನ್ನವನ್ನು ಹೆಚ್ಚುಮಾಡುವಂಥಹ ಅಭಿಪ್ರಾಯವನ್ನು ಯೋಚನೆಮಾಡುವುದರ ಜೊತೆಗೆ ನಮ್ಮಲ್ಲಿರುವಂಥ ಪಾನನಿರೋಧ ಕಾನೂನನ್ನು ಪುನರಾಲೋಚನೆ ಮಾಡುವುದು ಬಹಳ ಮುಖ್ಯ. ಏಕೆಂದರೆ ಈಗಾಗಲೇ ಉತ್ತರ ಪ್ರದೇಶದಲ್ಲಿ ಯಾವ ಒಂದು ನಿರ್ಣಯವನ್ನು ಕೈಕೊಂಡಿದ್ದಾರೆ ಎಂಬುದು ನಿಮಗೆಲ್ಲಾ ತಿಳಿದು ಬಂದಿದೆ. ಇದರಲ್ಲಿ ಆರ್ಥಿಕ ದೃಷ್ಟಿಯಿಂದ ನೋಡದಿದ್ದರೂ ಸಹ ಒಂದು ದೃಷ್ಟಿಯನ್ನು ಸಭಾಪತಿಗಳ ಮೂಲಕ ತಮ್ಮ ಮುಂದೆ ಇಡಬೇಕಾದ್ದು ನನ್ನ ಕರ್ತವ್ಯ. ಕೊಡಗು ಜಿಲ್ಲೆಯಲ್ಲಿ ಮೊದಲಿಗೆ ರಿಕ್ರೂಟಿಂಗ್ ಆಫೀಸರು ಬಂದಂಥಾ ಸಂದರ್ಭದಲ್ಲಿ 100 ಯುವಕರು ಸೈನ್ಯಕ್ಕೆ ಸೇರಲಿಕ್ಕೆ ಮುಂದೆ ಬಂದರೆ ಒಬ್ಬ ಯುವಕನೂ ರಿಜೆಕ್ಟ್ ಆಗುವಂಥ ಸಂದರ್ಭವಿರಲಿಲ್ಲ. ಇವತ್ತು ಏನಾಗಿದೆ 100 ಜನರು ಬಂದರೆ 25 ಜನರು ರಿಜೆಕ್ಟ್ ಆಗುತ್ತಾ ಇದ್ದಾರೆ. ಇದಕ್ಕೆ ಕಾರಣವೇನೆಂದರೆ ನಮ್ಮ ದೇಶದ ಪಾನನಿರೋಧದ ಕಾನೂನಿನಿಂದ, ಇಲಿಸಿಟ್ ಡಿಸ್ಟಿಲೇಷನ್ನಿಂದ ಆಗುವಂಥ ಒಂದು ದುಷ್ಪರಿಣಾಮ ಎಂದು ತಿಳಿದು ಬಂದಿದೆ. ಬಹುಶಃ ಈ ಕೆಟ್ಟ ಪದಾರ್ಥಗಳಿಂದ ಮಾಡಿದಂಥಾ ಪಾನವನ್ನು ಅದರಲ್ಲೂ ಕೆಲವು ಕಡೆಯಲ್ಲಿ ಕಾಪರ್ ಸಲ್ಫೇಟ್, ನವಾಸಾಗರ ಉಪಯೋಗಿಸಿ ಮಾಡಿದಂಥಾ ಪಾನವನ್ನು ನಮ್ಮ ಯುವಕರು ಸೇವಿಸಿದರೆ ಇನ್ನು ಹತ್ತು ವರ್ಷದಲ್ಲಿ ಆಗ್ಯೆ ರೆಕ್ರೂಟಿಂಗ್ ಆಫೀಸರು ಬಂದದ್ದೇ ಆದರೆ 100 ಕ್ಕೆ 100 ಜನರೂ ನಮ್ಮ ಜಿಲ್ಲೆಯಲ್ಲಿ ರಿಜೆಕ್ಟ್ ಆಗುವಂಥ ಪರಿಸ್ಥಿತಿ ಬಂದೀತು. ನಮ್ಮ ಯುವಕರು ನಿರ್ವೀರ್ಯರಾದಾರು, ಅಂಥಾ ಪರಿಸ್ಥಿತಿ ಉಂಟಾದರೆ ಏನಾದೀತು ಎಂದು ಯೋಚನೆ ಮಾಡುವಂಥಾ ಪರಿಸ್ಥಿತಿ ಬಂದೀತು. ಆ ದೃಷ್ಟಿಯಿಂದ ಮತ್ತು ನಮ್ಮ ಆರ್ಥಿಕ ದೃಷ್ಟಿಯಿಂದ ಇದನ್ನು ಆಲೋಚನೆ ಮಾಡುವುದು ಒಳ್ಳೆಯದು.

ಇವತ್ತು ನಮ್ಮ ದೇಶದಲ್ಲಿ ಆಗುವಂಥ ಅಭಿವೃದ್ಧಿ ಕಾರ್ಯಗಳನ್ನು ನೇರವಾಗಿ ಮಾಡಿ, ಮಾಡುತ್ತಾ ಇದ್ದು, ಚೈನಾದವರನ್ನು ಓಡಿಸುವಂಥಾ ಸಾಮರ್ಥ್ಯ ಇದ್ದರೆ ಅದನ್ನು ಏಕೆ ಮಾಡಬಾರದು ಎಂದು ಪ್ರಶ್ನೆಯನ್ನು ಕೇಳಬೇಕಾಗಿದೆ. ಚೈನಾ ಆಕ್ರಮಣದಿಂದ ಬಂದಿರುವಂಥ ಒಂದು ಆರ್ಥಿಕ ಮುಗ್ಗಟ್ಟನ್ನು ತಡೆಗಟ್ಟುವಂಥ ಅವಕಾಶ ಅದರಿಂದ ಬರಬಹುದು. ಆ ದೃಷ್ಟಿಯಿಂದ ಪಾನನಿರೋಧವನ್ನು ಆಲೋಚನೆ ಮಾಡುವುದು ಉಚಿತ. ಆ ದೃಷ್ಟಿಯಿಂದ ನಾವು ಉತ್ತರ ಪ್ರದೇಶದಲ್ಲಿ ಕೈಕೊಂಡ ನಿರ್ಣಯವನ್ನು ಮಾದರಿಯಾಗಿ ತೆಗೆದುಕೊಳ್ಳುವುದಕ್ಕೆ ಅರ್ಹವಾಗಿದೆ ಎಂದು ಸರ್ಕಾರದವರಿಗೆ ಸೂಚಿಸಬಯಸಲು ಇಚ್ಛಿಸುತ್ತೇನೆ. ಅಲ್ಲದೆ ನಮ್ಮ ಮೈಸೂರು ರಾಜ್ಯದಲ್ಲಿ ಸೈನ್ಯಕ್ಕೆ ಸೇರುವಂಥ ಜನರು ಬಹಳ ಕಡಿಮೆ ಎಂಬುದು ಈಗಾಗಲೇ ತಿಳಿದು ಬಂದಿದೆ. ಬೆಂಗಳೂರಿನಲ್ಲಿರುವ ರಿಕ್ರೂಟಿಂಗ್ ಆಫೀಸಿನಲ್ಲಿ ಅತ್ಯಧಿಕ ಜನರು ಸೈನ್ಯಕ್ಕೆ ಸೇರಲಿಕ್ಕೆ ಮುಂದೆ ಬಂದಿದ್ದರೂ ಸಹ ಅವರಲ್ಲಿ ಮದರಾಸಿನಿಂದ ಬಂದವರು, ಕೇರಳದಿಂದ ಬಂದವರು ಹೆಚ್ಚಾಗಿದ್ದಾರೆಯೇ ವಿನಹ ಮೈಸೂರು ಸಂಸ್ಥಾನದವರು ಬಹಳ ಕಡಿಮೆ ಆಗಿ ಇದ್ದಾರೆ. ಆ ದೃಷ್ಟಿಯಿಂದ ನಮ್ಮ ಕಾಲೇಜು ಮತ್ತು ಹೈಸ್ಕೂಲುಗಳಲ್ಲಿ ಎನ್. ಸಿ. ಸಿ. ಕಡ್ಡಾಯ ಮಾಡುವುದು ಒಳ್ಳೆಯದಾದೀತು. ಎನ್. ಸಿ. ಸಿ. ಕಡ್ಡಾಯ ಮಾಡುವಂಥ ಸಂದರ್ಭದಲ್ಲಿ ಅವರಿಗೆ ಸರಿಯಾದ ಶಿಕ್ಷಣವನ್ನು ಕೊಡಲಿಕ್ಕೆ ಯಾವ ರೀತಿಯ ಸಲಕರಣೆಗಳು ಬೇಕೋ ಅವನ್ನು ಕೊಟ್ಟೇಕೊಡಬೇಕು. ಕೆಲವು ಶಾಲೆಗಳಲ್ಲಿ ಎನ್. ಸಿ. ಸಿ. ಟ್ರೈನಿಂಗ್ ಯಾವ ರೀತಿ ಆಗುತ್ತಾ ಇದೆ ಎಂದರೆ ಮರದ ಕೋಲುಗಳನ್ನು ಕೊಟ್ಟು ಟ್ರೈನಿಂಗ್ ಕೊಡುತ್ತಾ ಇದ್ದಾರೆ. ಈ ರೀತಿ ಟ್ರೈನಿಂಗ್ ಕೊಟ್ಟರೆ ಪ್ರಯೋಜನವಾಗುವುದಕ್ಕೆ ಸಾಧ್ಯವಿಲ್ಲ. ಅವರಿಗೆ ಕೊಡುವಂಥ ಶಿಕ್ಷಣದಲ್ಲಿ ಕೋವಿಯನ್ನು ಉಪಯೋಗಿಸುವಂಥ ತರಬೇತು ಕೊಡಬೇಕಾದರೆ ನಿಜವಾದ ಕೋವಿ ಇದ್ದೇಇರಬೇಕು. ಆ ದೃಷ್ಟಿ

(ಶ್ರೀ ಎ. ಪಿ. ಅಪ್ಪಣ್ಣ)

ಯಿಂದ ಬೇಕಾದ ಸಲಕರಣೆಗಳನ್ನು ಕೊಟ್ಟು ನಮ್ಮ ಯುವಕರಲ್ಲಿ ಅತ್ಯಧಿಕವಾಗಿ ಸೈನ್ಯಕ್ಕೆ ಸೇರುವಂಥ ಒಂದು ಅಭಿರುಚಿಯನ್ನು ಉಂಟುಮಾಡಬೇಕು. ಈ ರೀತಿ ಶಿಕ್ಷಣವನ್ನು ಕಡ್ಡಾಯವಾಗಿ ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಮಾಡಿದರೆ ಮುಂದೆ ನಮ್ಮ ದೇಶದಲ್ಲಿ ಯುವಕರು ಸೈನ್ಯಕ್ಕೆ ಸೇರುವಂಥ ಅಭಿರುಚಿಯನ್ನು ಹೊಂದಿಯಾರು ಎಂದು ನನ್ನ ಅಭಿಪ್ರಾಯ.

ಶ್ರೀ ಬಿ. ಡಿ. ಜತ್ತಿ (ಹಣಕಾಸಿನ ಶಾಖೆಯ ಮಂತ್ರಿಗಳು).—ಎನ್. ಸಿ. ಸಿ. ಟ್ರೈನಿಂಗ್ ಕೊಡಬೇಕಾದರೆ ಗವರ್ನ್‌ಮೆಂಟ್ ಆಫ್ ಇಂಡಿಯಾದವರು ಅಮೆಂಡ್‌ಮೆಂಟ್ ಮಾಡಬೇಕು, ಅದಕ್ಕೆ ಸರ್ಕಾರದವರು ಅವರಿಗೆ ಬರೆದಿದ್ದಾರೆ.

ಶ್ರೀ ಎ. ಪಿ. ಅಪ್ಪಣ್ಣ.—ಆ ರೀತಿ ಕಾರ್ಯಾಚರಣೆ ಮಾಡಲು ಸರ್ಕಾರದವರು ಬರೆದಿದ್ದರೆ ನಿಜವಾಗಿಯೂ ಅದಕ್ಕೆ ಸರ್ಕಾರದವರನ್ನು ಪ್ರಶಂಶಿಸಬೇಕು. ಇದನ್ನು ಏಕೆ ಹೇಳುತ್ತೇನೆ ಎಂದರೆ ಅವರು ನಿಜವಾದಂಥ ಕೋವಿಯನ್ನು ಉಪಯೋಗಿಸಲು ತಕ್ಕ ಸಲಕರಣೆ ಕೊಡಬೇಕು. ಒಂದು ನಿದರ್ಶನ ತಮ್ಮ ಗಮನಕ್ಕೆ ತರಬೇಕೆಂದರೆ ಕೊಡಗಿನಲ್ಲಿ ಕೋವಿಯನ್ನು ಹಿಡಿಯುವಂತಹ ಒಂದು ವಿನಾಯಿತಿ ಬಹಳ ಕಾಲದಿಂದ ಇದ್ದುದರಿಂದ ಇವತ್ತು ಸೈನ್ಯದಲ್ಲಿ ಕೊಡಗಿನ ಜನರು ಅತ್ಯಧಿಕವಾಗಿ ಇದ್ದಾರೆ ಮತ್ತು ಅದರಲ್ಲಿ ಪ್ರವೀಣರಾಗಿ ಕೆಲ ಮಾಡಿದ್ದಾರೆ. ಈ ಕೋವಿಯನ್ನು ಅವರು ದುರುಪಯೋಗಪಡಿಸಿದ್ದಾರೆ ಅಥವಾ ದುರುಪಯೋಗ ಪಡಿಸಿಯಾರು ಎಂಬ ಭಾವನೆ ಇಟ್ಟುಕೊಳ್ಳದೇ ಎನ್. ಸಿ. ಸಿ. ಯಲ್ಲಿ ಕೋವಿಯನ್ನು ನಿಜವಾದ ರೀತಿಯಲ್ಲಿ ಉಪಯೋಗಿಸುವಂಥ ಒಂದು ತರಬೇತನ್ನು ಕೊಡದಿದ್ದರೆ ಅದರಿಂದ ಪ್ರಯೋಜನವಾಗವುದಿಲ್ಲ. ಈಗ ಅವರಿಗೆ ಬರೀ ಮರದ ಕೋವಿಯನ್ನು ಕೊಡುತ್ತಾ ಇದ್ದಾರೆ ಅದರಿಂದ ನಿಜವಾದ ಶಿಕ್ಷಣ ಕೊಟ್ಟಂತೆ ಆಗುವುದಿಲ್ಲ. ಆದ್ದರಿಂದ ನಿಜವಾದ ಉಪಕರಣಗಳನ್ನು ಕೊಡುವ ಕ್ರಮ ಕಾರ್ಯಗತವಾಗಬೇಕು. ಅದೂ ಅಲ್ಲದೇ ಸೈನ್ಯಕ್ಕೆ ನಮ್ಮ ಸಂಸ್ಥಾನದಿಂದ ಯುವಕರು ಜಾಸ್ತಿಯಾಗಿ ಸೇರಲಿಕ್ಕಾಗಿ ಯಾವುದಾದರೂ ಒಂದು ರೀತಿಯ ಕಾರ್ಯಕ್ರಮವನ್ನು ನಮ್ಮ ಸರ್ಕಾರದವರು ಕೈಕೊಳ್ಳಬೇಕು. ಅದಕ್ಕೆ ಸರಿಯಾದಂಥ ಉತ್ತೇಜನವನ್ನು ಕೊಡಲಿಕ್ಕಾಗಿ ಒಂದು ಕಾರ್ಯಕ್ರಮವನ್ನು ಕೈಕೊಳ್ಳದಿದ್ದರೆ ನಮ್ಮಲ್ಲಿರತಕ್ಕ ಯುವಕರು ಅತ್ಯಧಿಕವಾಗಿ ಸೈನ್ಯಕ್ಕೆ ಸೇರದಿದ್ದರೆ ಇವತ್ತು ಬಂದಿರುವ ಸಂದಿಗ್ಧ ಪರಿಸ್ಥಿತಿ ಅಥವಾ ನಾಳೆ ಬರುವಂಥ ಒಂದು ಪರಿಸ್ಥಿತಿಯನ್ನು ಕೂಡಲೇ ತಡೆಗಟ್ಟಲಿಕ್ಕೆ ಬಹಳ ಕಷ್ಟವಾಗುತ್ತದೆ. ಆ ದೃಷ್ಟಿಯಿಂದ ಈ ದಿವಸ ಯುವಕರು ಅತ್ಯಧಿಕವಾಗಿ ಸೈನ್ಯಕ್ಕೆ ಸೇರುವಂಥ ಒಂದು ಉತ್ತೇಜನವನ್ನು ನಾವು ಕೊಡಬೇಕು. ಅಲ್ಲದೆ ಇವತ್ತು ಆರ್ಥಿಕ ದೃಷ್ಟಿಯಿಂದ ಯಾವ ರೀತಿ ಉಳಿತಾಯಮಾಡಬೇಕು, ಯಾವ ರೀತಿ ರಕ್ಷಣಾನಿಧಿಗೆ ಕೊಡಬೇಕು ಎಂಬ ದೃಷ್ಟಿಯಿಂದ ಹೇಳುವುದಾದರೆ ಒಂದನೇ ಮಾದರಿಯಾಗಿ ನಮ್ಮ ಈ ಸಭೆಯ ಸದಸ್ಯರು ಪ್ರತಿಯೊಬ್ಬರೂ ಒಂದೊಂದು ತಿಂಗಳ ಸಂಬಳವನ್ನು ಮೊದಲನೆಯದಾಗಿ ಕೊಟ್ಟು ಅಲ್ಲಿಂದ ನಾವು ಜನರನ್ನು ಹಣ ಕೊಡಿ ಎಂಬುದಾಗಿ ಕೇಳಲಿಕ್ಕೆ ಹೋದರೆ ಹಣ ಹುಟ್ಟುತ್ತದೆಯೇ ವಿನಾ ನಾವು ಯಾವ ರೀತಿಯಲ್ಲೂ ಹಣ ಕೊಡದೇ ಗ್ರಾಮ ಗ್ರಾಮಗಳನ್ನು ಸುತ್ತಿ ಜನರು ಸಹಾಯಮಾಡಬೇಕೆಂದು ಕೇಳಿದ್ದೇ ಆದರೆ ಅದರಿಂದ ಪ್ರಯೋಜನವಾಗಲಾರದು. ನಮ್ಮ ಮಾತಿಗೆ ಜನರು ಬೆಲೆ ಕೊಡಲಾರರು. ಆ ದೃಷ್ಟಿಯಿಂದ ಈ ಸಭೆಯ ಪ್ರತಿಯೊಬ್ಬ ಸದಸ್ಯರೂ ಒಂದು ತಿಂಗಳ ಸಂಬಳವನ್ನು ಈಗ ಮೊದಲನೆಯದಾಗಿ ಕೊಟ್ಟು ಅನಂತರ ಜನರ ಹತ್ತಿರ ಹೋಗಿ ಉತ್ತೇಜನಕೊಡಬೇಕು, ಹಣ ಕೊಡಬೇಕು ಎಂದು ಹೇಳಿದರೆ ಆ ಮಾತಿಗೆ ಜನ ಬೆಲೆ ಕೊಡುತ್ತಾರೆಯೇ ಹೊರತು ಬರೇ ನೀವು ಕೊಡಿ ನಾವು ಆಲೋಚನೆ ಮಾಡುತ್ತೇವೆ ಎಂಬ ದೃಷ್ಟಿಯಿಂದ ಕೇಳಿದ್ದೇ ಆದರೆ ಅದಕ್ಕೆ ಸರಿಯಾದ ಪ್ರೋತ್ಸಾಹ ಸಿಕ್ಕಲಿಕ್ಕಿಲ್ಲ ಎಂದು ನನ್ನ ಅಭಿಪ್ರಾಯ.

ಇಂಥಾ ಒಂದು ಸಂದರ್ಭದಲ್ಲಿ ನಾವು ಸಾಧ್ಯವಾದಷ್ಟು ಮಟ್ಟಿಗೆ ಕಾರ್ಯತಃ ಒಂದು ವ್ಯವಸ್ಥಾಪಕ ರೀತಿಯಿಂದ ಇವೊತ್ತು ನಮಗೆ ಯಾವ ರೀತಿ ಆರ್ಥಿಕ ಮತ್ತು ಸೈನ್ಯಕ್ಕೆ ಯುವಕರು ಸೇರುವಂಥಾ ರೀತಿಯಲ್ಲಿ ಈ ಮುಗ್ಗಟ್ಟಿನ ಪರಿಸ್ಥಿತಿಯನ್ನು ಎದುರಿಸಲು ಸಾಧ್ಯವೋ ಆ ದೃಷ್ಟಿಯಿಂದ ಕಾರ್ಯಕ್ರಮವನ್ನು ಕೈಗೊಳ್ಳಬೇಕೇ ವಿನಾ ಚೈನಾ ನಮ್ಮ ದೇಶಕ್ಕೆ ನುಗ್ಗಿತು, ದ್ರೋಹ ಮಾಡಿತು, ಆಕ್ರಮಣ ಮಾಡಿತು ಎಂದು ರಾಮಾಯಣ, ಭಾರತವನ್ನು ಹೇಳಿದರೆ ನಮಗೆ ಈಗ ಬಂದಿರುವಂಥಾ ಪರಿಸ್ಥಿತಿಯನ್ನು ಬಗೆಹರಿಸಲು ಸಾಧ್ಯವಿಲ್ಲ.

4·00 P.M.

ಶ್ರೀ ಸಿ. ಜೆ ಮುಕ್ಕಣ್ಣಪ್ಪ (ಸಿರಾ).. ಅದರಿಂದ ನಮಗೆ ಸ್ಫೂರ್ತಿ ಬರುತ್ತದ.

ಶ್ರೀ ಎ. ಪಿ. ಅಪ್ಪಣ್ಣ.—ಜಾಸ್ತಿ ಹೇಳಿದರೆ ಸ್ಫೂರ್ತಿ ಬರುತ್ತದೆಯೋ, ಜಿಗುಪ್ಸೆ ಬರುತ್ತದೆಯೋ ? ಹೇಳುವಷ್ಟು ಹೇಳಿ ನಾವು ಮಾಡುವಂಥಾ ಕರ್ತವದಲ್ಲಿ ಕಾರ್ಯೋನ್ಮುಖರಾದರೆ ಅದರಿಂದ ಸಾಧ್ಯವಾಗುತ್ತದೆಯೇ ವಿನಾ ಬರೀ ಮಾತುಗಳಿಂದ ಅವರು ಮಾಡಿದ್ದು ತಪ್ಪು, ಇವರು ಮಾಡಿದ್ದು ಹೀಗೆ ಎಂದು ಹೇಳಿದರೆ ಅದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಈ ಚೀಣೀಯರ ವಿಷಯ ಎಲ್ಲರಿಗೂ ಗೊತ್ತಿದೆ. ಮೊನ್ನೆ ಮೊನ್ನೆ ಪತ್ರಿಕೆಗಳಲ್ಲಿ ಕೂಡ ನಾವು ನೋಡಿದ್ದೇವೆ. ಸ್ಕೂಲುಗಳಲ್ಲಿ ಓದತಕ್ಕ ಸಣ್ಣ ಮಕ್ಕಳು ಚೈನಾ ವಿಚಾರವಾಗಿ ಬರೆದಂಥಾ ಪಠ್ಯ ಪುಸ್ತಕಗಳನ್ನು ಹರಿದು ಹಾಕಿದ್ದಾರೆಂದು. ಚೀಣೀಯರು ನಮ್ಮ ಮಿತ್ರರು ಎಂದು ಬರೆದಂಥಾ ಪಠ್ಯ ಪುಸ್ತಕಗಳನ್ನು ಹರಿದು ಹಾಕುವಂಥಾ ಜಾಗೃತಿ ಬಂದಿರುವಾಗ ಚೀಣೀಯರು ಮಾಡಿದ್ದು ಸರಿಯಲ್ಲವೆಂದು ಒಂದು ಭಾಷಣವನ್ನು ಮಾಡುವ ಕಾಲ ಹೋಯಿತು. ಇವೊತ್ತು ನಿಜವಾಗಿ ಯಾವ ರೀತಿ ಜನರು ಉದ್ರೇಕರಾಗಿದ್ದಾರೆ. ಯಾವ ರೀತಿ ಮುಂದೆ ಬಂದಿದ್ದಾರೆ, ಅವರ ನೆರವನ್ನು ವ್ಯವಸ್ಥಾ ರೀತಿಯಿಂದ ಸರ್ಕಾರ ಪಡೆಯುವಂಥಾ ಕಾರ್ಯದಲ್ಲಿ ತೊಡಗಬೇಕೇ ವಿನಾ ವ್ಯವಸ್ಥೆಯಿಲ್ಲದೆ ಎಲ್ಲೋ ಹಣವನ್ನು ವಸೂಲು ಮಾಡುವುದು, ಯಾರೋ ಮಾಡುವುದು ಹೀಗೆ ಕಾಲವನ್ನು ಕಳೆದರೆ ಈ ಸಂದರ್ಭದಲ್ಲಿ ನಾವು ಮಾಡುವಂಥಾ ಕರ್ತವ್ಯವನ್ನು ಮಾಡಿದಂತಾಗುವುದಿಲ್ಲ. ಆ ದೃಷ್ಟಿಯಿಂದ ನಮ್ಮ ಸರ್ಕಾರ ನಿಜವಾಗಿ ಒಂದು ಕಾರ್ಯಕ್ರಮವನ್ನು ಮುಂದಿಟ್ಟು ಸರ್ಕಾರ ಇವೊತ್ತು ಮುಂದೆ ಬಂದರೆ ಜನತೆಯ ನೆರವನ್ನು ವ್ಯವಸ್ಥಿತ ರೀತಿಯಲ್ಲಿ ಪಡೆದುಕೊಂಡು ಇವೊತ್ತು ಚೀಣೀಯರನ್ನು ಹೊಡೆದೋಡಿಸಲು ನಾವು ಭಾಗಿಗಳಾಗುವಂತೆ ಮಾಡುತ್ತಾರೆಂದು ನಂಬಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಟಿ. ಮಾದಯ್ಯ ಗೌಡ (ರಾಮನಗರ).— ಮಾನ್ಯ ಅಧ್ಯಕ್ಷರೇ, ಈ ದಿನ ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ಮಂಡಿಸಿರತಕ್ಕ ನಿರ್ಣಯವನ್ನು ನಾನು ಸ್ವಾಗಿಸುತ್ತಾ ಒಂದೆರಡು ವಿಷಯಗಳನು ಹೇಳ ಬೇಕೆಂದು ಅಭಿಪ್ರಾಯಪಡುತ್ತೇನೆ. ಚೀಣಾಯರು ನಮಗೆ ಮಿತ್ರರು ಎಂದು ಎಣಿಸಿದ್ದರೂ ಅವರು ಕಪಟತನದಿಂದ ಮೋಸದಿಂದ ನಮ್ಮ ದೇಶದ ಮೇಲೆ ಧಾಳಿಯನ್ನು ಎಬ್ಬಿಸಿದ್ದಾರೆ. ಅವರು ಎಷ್ಟೇ ವಿಧವಾಗಿ ತಮ್ಮ ಸತ್ಯತೆಯ ಪ್ರಮಾಣವನ್ನು ಇಡೀ ಪ್ರಪಂಚಕ್ಕೇ ಸಾರಿದರೂ ಕೂಡ, ಈ ಇಡೀ ಪ್ರಪಂಚವೂ ಸಹ ಈ ದಿನ ಅವರ ಕುಟಿಲತೆಯನ್ನು ಅರ್ಥ ಮಾಡಿಕೊಂಡಿವೆ ಎನ್ನತಕ್ಕದ್ದರ ಏನೂಲ್ಲ ಸಂದೇಹವಿಲ್ಲ. ಚೀಣೀಯರು ದುರುದ್ದೇಶದಿಂದ ನಮ್ಮ ಮೇಲೆ ದಾಳಿಯನ್ನೆಬ್ಬಿಸಿದ್ದಾರೆ. ಆ ಉದ್ದೇಶ ಬಹುಶಃ ಆ ದೇಶದಲ್ಲಿ ಬೆಳೆಯುತ್ತಾ ಇರತಕ್ಕ 70-75 ಕೋಟಿ ಜನಗಳಿಗೆ ಅನ್ನವನ್ನು ಒದಗಿಸಲಕ್ಕೆ ದೇಶವನ್ನು ವಿಸ್ತರಿಸ ಬೇಕು ಎನ್ನ ತಕ್ಕಂಥ ದುರಭಿಪ್ರಾಯದಿಂದ ಮತ್ತು ತಮ್ಮ ಕುಟಿಲ ನೀತಿ ಏನಿವೆಯೋ ಅದನ್ನು ಹೆಚ್ಚಿಗೆ ಕೊಳ್ಳಬೇಕು ಮತ್ತು ತಾವು ಈ ಪ್ರಪಂಚದಲ್ಲಿ ಅಲ್ಲದೆ ಇದ್ದರೂ ಕೂಡ ಏಷ್ಯಾ ಖಂಡದಲ್ಲಿ ಪೂರ್ತಿ ಎಲ್ಲಾ ಕಡೆಯಲ್ಲೂ ತಮ್ಮ ಸಾರ್ವಭೌಮತ್ವವನ್ನು ಸ್ಥಾಪಿಸಬೇಕು ಎಂದು ಉದ್ದೇಶ ಪಟ್ಟಿದ್ದಾರೆಂದು ಅರ್ಥವಾಗುತ್ತದೆ. ಸಾಲದಕ್ಕೆ ನಮ್ಮ ಭಾರತೀಯರು ಸ್ವಾತಂತ್ರ್ಯವನ್ನುಗಳಿಸಿದ ಮೇಲೆ ಪಂಚವಾರ್ಷಿಕ ಯೋಜನೆಗಳನ್ನು ಹಾಕಿಕೊಂಡು ಜಾಗ್ರತೆಯಾಗಿ ದೇಶವನ್ನು ಮುಂದುವರಿಸಬೇಕು, ಈ ದೇಶಕ್ಕೆ ಉಂಟಾಗಿರತಕ್ಕ ಬಡತನ, ನಿರಕ್ಷರತೆ ಇತ್ಯಾದಿ ಕುಂದು ಕೊರತೆಗಳನ್ನು ಜಾಗ್ರತೆಯಾಗಿ ನೀಗಿಸ ಬೇಕು ಎಂದು ಅಭಿವೃದ್ಧಿ ಕಾರ್ಯಗಳನ್ನ ಮಾಡತಕ್ಕ ಈ ಯೋಜನೆಗಳನ್ನು ನೋಡಿ ಅವರು ಈರ್ಷ್ಯಾಸೂಯೆಯಿಂದ ಈ ರೀತಿ ಉದ್ದೇಶಪಟ್ಟಿದ್ದಾರೆಂದು ನಮಗಾದರು ಅರ್ಥವಾಗುತ್ತದೆ. ಅವರ ದೇಶವನ್ನು ವಿಸ್ತರಿಸಬೇಕು ಎಂದು ಹೊರಟಿರತಕ್ಕ ಕಾಲದಲ್ಲಿ ಎಲ್ಲಿಯವರಿಗೆ ಅವರ ಗಡಿ ಇದೆಯೋ ಅಲ್ಲಿಯವರೆಗೆ ಬಹಳ ದಿವಸಗಳಿಂದಲೂ ಏನು ಒಂದು ಮಕ್ ಮಹೋನ್ ರೇಖೆ ಇದೆಯೋ ಅದನ್ನು ಉಲ್ಲಂಘಿಸಿ ಕುಂಟುನೆಪವನ್ನು ಹಾಕಿಕೊಂಡು ನಮ್ಮ ದೇಶ ಅಲ್ಲಿಯವರೆಗೂ ಇತ್ತು, ಇಲ್ಲಿಯವರೆಗೆ ಇತ್ತು ಎಂದು ಹೇಳುವುದು ತಪ್ಪಬೇಕು. ಕೇವಲ ಕುಂಟುನೆಪದಿಂದ ಈಗಾಗಲೇ ಮಾತನಾಡಿದ ಮಾನ್ಯ ಸದಸ್ಯರೊಬ್ಬರು ಹೇಳಿದ ಹಾಗೆ ಕುರಿಯಮರಿ ತೋಳದ ಕಥೆಯಂತೆ ಚೀಣೀಯರು ನಮ್ಮ ಭಾರತ ದೇಶಕ್ಕೆ ಪ್ರವೇಶ ಮಾಡಿದ್ದಾರೆ. ನಾವಾದರೂ ಕೂಡ ಚೀಣಿಯರು ಬಹಳ ಕಾಲದಿಂದಲೂ ಕೂಡ ತಟಸ್ಥರಾಗಿದ್ದಾರೆ, ಸ್ನೇಹಿತರರಾಗಿದ್ದಾರೆ, ಸಾಲದಕ್ಕೆ ಪರಮಗುರುವಾಂಥ ಬುದ್ಧನ ಪರಮ ಶಿಷ್ಯರಾಗಿದ್ದಾರೆ. ಕನ್‌ಫ್ಯಯಸ್ ಎನ್ನತಕ್ಕ ಮಹಾ ವ್ಯಕ್ತಿಯ ಅನುಯಾಯಿಗಳು, ನಮ್ಮನ್ನು ಅವರು ಏನು ಮಾಡಿಯಾರು ಎನ್ನುವ ಧೋರಣೆಯನ್ನು ಕೂಡ ನಾವು ತಿಳಿದಿದ್ದೆವು. ಆದರೆ ನಮ್ಮ ಅಭಿಪ್ರಾಯಗಳೆಲ್ಲಾ ಒಂದೇ ಸಲಕ್ಕೆ ಮೂಲೆಗೆ ಒತ್ತಲ್ಪಟ್ಟ ಹಟಾತ್ತಾಗಿ ಬಹಳ ದೊಡ್ಡ ಸೈನ್ಯದೊಡನೆ ಏಕಾ ಏಕೀ ನಮ್ಮ ದೇಶದೊಳಕ್ಕೆ ನುಗ್ಗಿ ದೊಡ್ಡ ದೇಶವನ್ನೇ ಆಕ್ರಮಿಸಿಕೊಂಡು ದೇಶದಲ್ಲೆಲ್ಲಾ ಒಂದು ಧಾಳಿಯನ್ನು ಎಬ್ಬಿಸಿದರು. ಆದರೆ ನಮ್ಮ ಸೈನಿಕರು ಅವರೊಡನೆ ಬಹುವಾಗಿ ಕಾದಾಡಿ ಇನ್ನೂ ಹೆಚ್ಚಿಗೆ ಪ್ರದೇಶಕ್ಕೆ ಅವರು ಬಾರದಂತೆ ಮಾಡಿ ತಮ್ಮ ಪ್ರಾಣಾರ್ಪಣೆಯನ್ನು ಮಾಡಿದ್ದಾರೆ. ಅವರೆಲ್ಲರಿಗೂ ಕೂಡ ಪ್ರತಿಯೊಬ್ಬ ಭಾರತೀಯರು ಕೂಡ ನಮ್ರತೆಯಿಂದ ಪ್ರಾರ್ಥನೆಯನ್ನು ಸಲ್ಲಿಸಿ ಅವರ ಆತ್ಮಕ್ಕೆ ದೇವರು ಶಾಂತಿಯನ್ನು ಕೊಡಲಿ ಎಂದು ಕೋರಬೇಕಾಗಿದೆ. ಈ ಒಂದು ವಿಷಯದಲ್ಲಿ ಬಹಳ ಒಳ್ಳೆಯದಾಯಿತು ಎಂದು ಕೆಲವರು ಅಭಿಪ್ರಾಯಪಡುತ್ತಾರೆ ಅದೇಎಂದರೆ ಭಾರತೀಯರು ನಮ್ಮ ನಮ್ಮಲ್ಲೇ ಎಷ್ಟೋ ಪಾರ್ಟಿ, ಗ್ರೂಪ್ಸ್, ಜಾತಿ ಮತ ಭೇದಗಳು ಇತ್ಯಾದಿ ಅನೇಕ ವಿಷಯಗಳನ್ನು ಮನಸ್ಸಿಗೆ ತೆಗೆದುಕೊಂಡು ಹೋರಾಡುತ್ತಾ ಇದ್ದರೂ ಕೂಡ ಈಗ ಒಬ್ಬ ಮನುಷ್ಯನ ಹಾಗೆ ಜೇನು ಗೂಡಿಗೆ ಕಲ್ಲು ಎಸೆದರೆ ಹೇಗೆ ಜೇನು ಹುಳಗಳು ಎದ್ದು ಮುನ್ನುಗ್ಗುತ್ತವೆಯೋ ಅದೇ ರೀತಿ ಎಲ್ಲಾ ಭಾರತೀಯರೂ ಕೂಡ ಒಂದೇ ಮನಸ್ಸಿನಿಂದ ಮುನ್ನುಗ್ಗಿ ನಮ್ಮ ದೇಶದ ಸ್ವಾತಂತ್ರ್ಯವನ್ನು ಉಳಿಸಿ ಕೊಳ್ಳಬೇಕು. ನಾವೆಲ್ಲಾ ಭಾರತೀಯರು. ನಮ್ಮ ಮಾನ ಪ್ರಾಣ ಇವೆಲ್ಲಕ್ಕಿಂತಲೂ ನಮ್ಮ ದೇಶ ಇದ್ದರೆ ನಾವೆಲ್ಲಾ ಬದುಕುತ್ತೇವೆ ಎನ್ನುವ ಮನೋಭಾವದಿಂದ ಜನ ಮುಂದೆ ಬಂದಿದ್ದಾರೆ. ತಮ್ಮ ಉತ್ಸಾಹವನ್ನು ತೋರಿಸುತ್ತಿದ್ದಾರೆ. ತಮ್ಮ ತನುಮನ ಧನಗಳನ್ನು ಅರ್ಪಿಸುವುದಕ್ಕೆ ಸಿದ್ಧರಾಗಿ ಜನ ಮುಂದೆ ಬಂದಿದ್ದಾರೆಂದು ನಾನಾದರೂ ಹೇಳುವುದಕ್ಕೆ ಬಹಳ ಸಂತೋಷಪಡುತ್ತೇನೆ. ಈ ಸಂಧರ್ಭದಲ್ಲಿ ಇತರೆ ಜನಾಂಗದ ಸರ್ಕಾರದವರು ಬಂದು ಭಾರತೀಯರು ಒಂದು ಕ್ರಮ, ನಿಷ್ಠೆ ಮತ್ತು ಒಂದು ನೀತಿ ಇವುಗಳನ್ನು ಮೆಚ್ಚಿ ಭಾರತೀಯರಿಗೆ ನಾವು ಸಹಾಯ ಮಾಡಬೇಕೆಂದು ಮುಂದೆ ಬಂದಿರತಕ್ಕ ಈ ಸಂಧರ್ಭದಲ್ಲಿ ನಾವು ಅವರಿಗೆ ನಮ್ಮ ಹೃತ್ಪೂರ್ವಕವಾದ ಕೃತಜ್ಞತೆಯನ್ನು ತೋರಿಸ ಬೇಕಾಗಿದೆ. ಯುನೈಟೆಡ್ ಕಿಂಗ್‌ಡಂ ಅಮೆರಿಕಾ, ಕೆನಡಾ, ಆಸ್ಟ್ರೇಲಿಯಾ ಮುಂತಾದ ದೇಶಗಳು ತೋರಿಸುತ್ತಾ ಇರತಕ್ಕ ಒಂದು ಉತ್ಸಾಹ ಒಂದು ಉತ್ತೇಜನ, ಸಹಕಾರ ಇವುಗಳೆಲ್ಲಕ್ಕೂ ಕೂಡ ಭಾರತೀಯರು ಮೆಚ್ಚತಕ್ಕದ್ದೇ ಆಗಿದೆ. ಮತ್ತು ನಾವೆಲ್ಲರೂ ಅವರಿಗೆ ವಿಶೇಷವಾಗಿ ಋಣಿಗಳಾಗ ಬೇಕಾಗಿದೆ. ಸಾಧ್ಯವಾದಷ್ಟು ನೆನಪಿನಿಂದ ಮತ್ತು ಉತ್ಸಾಹ ಮತ್ತು ದೇಶ ಪ್ರೇಮದಿಂದ ದೇಶವನ್ನು ರಕ್ಷಣೆ ಮಾಡಿಕೊಂಡು ದುರಾಕ್ರಮಣ ಮಾಡಿರುವ ಚೀಣಿಯರನ್ನು ಸಾಧ್ಯವಾದಷ್ಟು ಜಾಗ್ರತೆ ಬಡಿದಟ್ಟಲು ನಮ್ಮ ನಾಯಕರಿಗೆ ಜನರು ಸಹಾಯಕರಾಗುತ್ತಿದ್ದಾರೆ. ಇದು ನಮಗೆಲ್ಲರಿಗೂ ಕೂಡ ಉತ್ಸಾಹದಾಯಕವಾಗಿದೆ ಈಚೆಗೆ ಚೀಣೀಯರು ಯುದ್ಧಸ್ತಂಭನದ ಒಂದು ನೆಪವನ್ನು ಹೂಡಿ ಮೋಸ ಮಾಡಬೇಕು, ಭಾರತೀಯರನ್ನು ನಿಶ್ಯಕ್ತರನ್ನಾಗಿ ಮಾಡಬೇಕು, ಹಿಮ್ಮೆಟ್ಟುವಂತೆ ಮಾಡಬೇಕು ಎಂದು ಪ್ರಯತ್ನಪಟ್ಟಿದ್ದಾರೆ. ಆದರೆ ಇದು ಮಾಯಾ ಜಾಲ, ಮೋಸಮಾಡುವುದಕ್ಕೆ ಮಾಡಿರುವ ಒಂದು ತಂತು. ಇವನ್ನು ನಿಮ್ಮ ನಾಯಕರು ಮತ್ತು ಜನತೆ ಸ್ಪಷ್ಟವಾಗಿ ಅರ್ಥ ಮಾಡಿಕೊಂಡರೆ ಒಳ್ಳೆಯದು ನಾವೇನಾದರೂ ಯುದ್ಧಸ್ಥಂಬನವಾಯಿತು, ಹಿಂದಕ್ಕೆ ಸರಿಯುತ್ತಾರೆ ಎಂದು ಕೈಕಟ್ಟಿ ಕುಳಿತರೆ ಮೋಸ ಹೋಗುತ್ತೇವೆ ಎಂಬುದರಲ್ಲಿ ಏನೇನೂ ಸಂದೇಹವಿಲ್ಲ. ಈ ಸಂದರ್ಭದಲ್ಲಿ ನಾವಾದರೂ ನಮ್ಮ ದೇಶದಲ್ಲಿರತಕ್ಕ ದೇಶದ್ರೋಹಿಗಳ ವಿಚಾರದಲ್ಲಿ ಬಹಳ ಎಚ್ಚರಿಕೆಯಿಂದ ಇರಬೇಕಾದ್ದು ಅಗತ್ಯ, ನಮ್ಮಲ್ಲೂ ಕೂಡ ಅಲ್ಲಲ್ಲಿ ಪಂಚಮದಳದವರು ಕೆಲವರಿದ್ದಾರೆ, ಮತ್ತು ಚೀಣೀಯರ ವಿಚಾರದಲ್ಲಿ ಒಂದು ರೀತಿಯ ಸದಭಿಪ್ರಾಯವನ್ನಿಟ್ಟುಕೊಂಡಿರುವವರಿದ್ದಾರೆ. ಅವರ ಮೇಲೆ ಇಂಡಿಯಾ ಸರ್ಕಾರದ ಹಿತಚಿಂತಕರಂತೆ ಕಂಡರೂ, ಬಾಯಲ್ಲಿ ಒಳ್ಳೆಯ ಮಾತನ್ನಾಡಿದರೂ ಮನಸ್ಸಿನಲ್ಲಿ ಬೇರೆ ಅಭಿಪ್ರಾಯವನ್ನಿಟ್ಟುಕೊಂಡಿರುತ್ತಾರೆ. ನಮ್ಮಲ್ಲಿ ಅಂಥವರು ಕೆಲವರಿರುವಂತೆ ಕಾಣಬರುತ್ತದೆ. ಈ ವಿಚಾರ

(ಶ್ರೀ ಟಿ. ಮಾದಯ್ಯಗೌಡ)

ವನ್ನು ಅರಿತು ಭಾರತ ಸರ್ಕಾರದವರು ಮುನ್ನೆಚ್ಚರಿಕೆ ತೆಗೆದುಕೊಂಡು ಅವರ ವಿಚಾರದಲ್ಲಿ ಸೂಕ್ತ ಕ್ರಮ ಕೈಗೊಳ್ಳುತ್ತಿದ್ದಾರೆ. ಇದು ಬಹಳ ಒಳ್ಳೆಯ ಸಂಗತಿಯಾಗಿದೆ, ಈಚೆಗೆ ಭಾರತ ಸರ್ಕಾರದವರು ಮತ್ತು ರಾಜ್ಯ ಸರ್ಕಾರಗಳವರು ಡಿಫೆನ್ಸ್ ಕೌನ್ಸಿಲ್‌ಗಳನ್ನು ರಚಿಸಿ, ಬೇಕಾದ ಸಮಿತಿಗಳನ್ನುಮಾಡಿ ತನ್ಮೂಲಕ ದೇಶಸಂರಕ್ಷಣೆಗೆ ಸಹಾಯ ಕಲಾಗುವ ಅನುಕೂಲತೆಗಳನ್ನು ಜಾಗರೂಕತೆಯಿಂದ ಕಲ್ಪಿಸುತ್ತಿದ್ದಾರೆ. ನಮ್ಮ ಮೈಸೂರು ದೇಶದಲ್ಲೂ ಕೂಡ ನ್ಯಾಷನಲ್ ಡಿಫೆನ್ಸ್ ಕೌನ್ಸಿಲ್ ಎಂದು ಏರ್ಪಾಡು ಮಾಡಿದ್ದಾರೆ. ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಡಿಫೆನ್ಸ್ ಕೌನ್ಸಿಲ್ ಬಹಳ ಎಚ್ಚರಿಕೆಯಿಂದ ಕೆಲಸ ಮಾಡುತ್ತೀವೆ. ಇವು ಚೆನ್ನಾಗಿ ಹೆಚ್ಚುಹೆಚ್ಚಾಗಿ ತೀವ್ರತೆಯಿಂದ ಉತ್ತಮ ರೀತಿಯಲ್ಲಿ ಕೆಲಸ ಮಾಡಬೇಕಾದ್ದು ಅಗತ್ಯ ಯಾವ ರೀತಿ ಕೆಲಸ ಮಾಡಬೇಕೆಂಬುದನ್ನು ಕೂಡ ಸರ್ಕಾರದವರು ಆಗಾಗ್ಗೆ ಗೊತ್ತು ಮಾಡುತ್ತಿದ್ದಾರೆ. ಇವುಗಳೆಲ್ಲವೂ ಕೂಡ ಚೆನ್ನಾಗಿ ಕೆಲಸಮಾಡಿ ರಕ್ಷಣಾ ಕಾರ್ಯದಲ್ಲಿ ಯಾವ ವಿಧದಲ್ಲೂ ಹಿಂದೆ ಬೀಳದೆ ಒತ್ತಾಸೆಯಾಗಿ ನಿಲ್ಲುತ್ತವೆ, ಚೀಣೀಯರನ್ನು ಬಡಿದಟ್ಟಲು ಸಹಕಾರಿಯಾಗುತ್ತವೆ ಎಂಬುದರಲ್ಲಿ ನನಗಾದರೂ ಕೂಡ ಏನೇನೂ ಸಂಶಯವಿಲ್ಲ.

ಒಟ್ಟಿನಲ್ಲಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಅಪ್ಪಣೆ ಕೊಡಿಸಿದ ಹಾಗೆ ದುರಾಕ್ರಮಣವನ್ನೆದುರಿಸಲು ಹಳ್ಳಿಗಳಲ್ಲಿರುವ ಜನರೂ ಕೂಡ ಬೇಕಾದ ಸಹಾಯ ಮಾಡಲು ಮುಂದೆ ಬರುತ್ತಿದ್ದಾರೆ, ರಾಮನಗರ ತಾಲ್ಲೂಕಿನಲ್ಲಿ ಹಣ ವಸೂಲು ಮಾಡಲು ಗ್ರಾಮಾಂತರಗಳಿಗೆ ಹೋದಾಗ ಏನೂ ಇಲ್ಲದ ಬಡವರೂ ಸಹ ತಮ್ಮ ಕೈಲಾದ ಸೇವೆಸಲ್ಲಿಸಲು ಮುಂದೆ ಬಂದರು. ಈ ಸಭೆಯಲ್ಲಿ ಹೇಳುವುದಾದರೆ 70-80 ವರ್ಷದ ದರಿದ್ರರಾದ ಹೆಂಗಸರು ಸಹ ಮುಂದೆ ಬಂದು ತಮ್ಮ ಹತ್ತಿರ ಏನೂ ಇಲ್ಲದಿದ್ದಾಗ ತಮ್ಮ ಕೈಲಿದ್ದ ಬೆಳ್ಳಿ ಕಡಗವನ್ನು ತೆಗೆದುಕೊಳ್ಳುವಂತೆ ತಿಳಿಸಿದರು ಒಬ್ಬ ಮಹಿಳೆ ಕಣ್ಣಲ್ಲಿ ನೀರು ಹಾಕಿಕೊಂಡು ನಮ್ಮ ದೇಶಕ್ಕೆ ಬಂದಿರುವ ವಿಪತ್ತನ್ನು ಹೋಗಲಾಡಿಸಲು 200-300 ರೂಪಾಯಿಗಳಷ್ಟು ಬೆಲೆ ಬಾಳುವ ಆಕೆಯ ಅತ್ತೆಯು ಮನೆಯವರಿಟ್ಟಿದ್ದ ಓಲೆಗಳನ್ನು ಕಳಚಿ ಕೊಟ್ಟಳು. ಸುತ್ತಲಿದ್ದ ಜನರು ನೋಡಿ ಕಣ್ಣೀರು ಸುರಿಸಿದರು, ಅದನ್ನು ನೋಡಿ ಮತ್ತೊಬ್ಬ ಮಹಿಳೆಯು 200 ರೂಪಾಯಿ ಬಾಳುವ ಲೋಲಾಕುಗಳನ್ನು ಕೊಟ್ಟಳು ಹೀಗೆಯೇ ನೂರಾರು ಜನರು ಮುಂದೆ ಬಂದು ಚಿನ್ನ, ಬೆಳ್ಳಿ, ಹಣ ಮುಂತಾದವುನ್ನು ಕೊಡುತ್ತಿದ್ದಾರೆ, ವಿಧ್ಯಾರ್ಥಿಗಳೂ ಸಹ ಈ ಸಮಯದಲ್ಲಿ ಮಾಡುತ್ತಿರುವ ಸೇವೆ ಮೆಚ್ಚತಕ್ಕದ್ದಾಗಿದೆ. ಹೈಸ್ಕೂಲು ಮತ್ತು ಮಿಡ್ಲ್‌ಸ್ಕೂಲಿನ ವಿದ್ಯಾರ್ಥಿಗಳು ಮನೆಗಳಿಗೆ, ಅಂಗಡಿಗಳಿಗೆ ಹೋಗಿ ಭಿಕ್ಷೆಯತ್ತಿ ಒಂದೆರಡು ನೂರು ರೂಪಾಯಿಗಳನ್ನು ವಸೂಲು ಮಾಡಿಕೊಟ್ಟಿದ್ದಾರೆ. ಈಚೆಗೆ ರಾಮನಗರದಲ್ಲಿ ಸುಮಾರು ಏಳೆಂಟು ವಿದ್ಯಾರ್ಥಿಗಳು ದೇಶದ ರಕ್ಷಣೆಗಾಗಿ ಹಣ ಸಂಪಾದಿಸಬೇಕಾದ್ದು ತಮ್ಮ ಕರ್ತವ್ಯವೆಂದು ಬೂಟ್ ಪಾಲಿಷ್ ಮಾಡುವುದಾಗಿ ಹೇಳಿಕೊಂಡು ಮನೆಮನೆಗೆ ಹೋಗಿ ಕೊಟ್ಟ ಹಣವನ್ನು ಡಬ್ಬಿಗೆ ಹಾಕಿಸಿಕೊಂಡು ಸೀಲ್ ಮಾಡಿದ ಡಬ್ಬಿಯಲ್ಲಿ ಹಣ ಸೇಖರಿಸಿ ನೂರಾರು ರೂಪಾಯಿಗಳನ್ನು ರಕ್ಷಣೆಗಾಗಿ ತಂದುಕೊಟ್ಟರು. ಒಂದು ದಿನ ಈ ಮಕ್ಕಳು ಸುಮಾರು 600 ರೂಪಾಯಿಗಳನ್ನು ವಸೂಲು ಮಾಡಿದರು. ಹೀಗೆ ದೇಶದಲ್ಲಿ ಸಹಾಯ ಒದಗುತ್ತದೆ. ಹಳ್ಳಿಗಳಲ್ಲಿ ಹಣಕೊಡಲು ಶಕ್ತಿಯಿಲ್ಲದಿರುವ ಬಡವರು ಕೆಲವರು ದವಸ ಧಾನ್ಯ ಕೊಡಲು ಸಿದ್ಧರಿದ್ದಾರೆ. ಆದರೆ ಅದನ್ನೀಗ ವಸೂಲು ಮಾಡುತ್ತಿಲ್ಲ ಅದರಿಂದಲೂ ಸಹಾಯವಾಗ ಬಹುದು. ಇನ್ನು ಒಂದೆರೆಡು ತಿಂಗಳಲ್ಲಿ ಸುಗ್ಗಿ ಬರುತ್ತದೆ. ಆಗ ಚೀಲ ತೆಗೆದುಕೊಂಡು ಮನೆಗಳಿಗೆ ಹೋಗಿ ಕೇಳಿದರೆ ನೂರಾರು, ಸಾವಿರಾರು ಖಂಡಗ ಧಾನ್ಯ ವಸೂಲಾಗಬಹುದು, ಅದನ್ನು ಸೇವೆ ಸಲ್ಲಿಸುತ್ತಿರುವ ಸೈನಿಕರು ಮತ್ತು ಅವರ ಕುಟುಂಬಗಳವರಿಗೆ ಒದಗಿಸಿದರೆ ಅನುಕೂಲವಾಗಬಹುದೆಂದು ನಾನು ಭಾವಿಸುತ್ತೇನೆ. ದೇಶದಲ್ಲಿ ಆಹಾರವನ್ನು ಹೆಚ್ಚಾಗಿಯೂ, ಅತ್ಯಂತ ತ್ವರಿತವಾಗಿಯೂ ಉತ್ಪತ್ತಿಮಾಡಬೇಕಾದ್ದೂ ಕರ್ತವ್ಯವೆಂದು ಸರ್ಕಾರದವರು ಮನಗಂಡಿದ್ದಾರೆ, ಇದು ಬಹಳ ಸಂತೋಷಕರವಾದ ಸಂಗತಿ. ಇದಕ್ಕೆ ಸರ್ಕಾರದವರು ಪ್ರತಿಯೊಂದು ತಾಲ್ಲೂಕಿನಲ್ಲೂ ಕೂಡ 500 ಎಕರೆ ಜಮೀನನ್ನು ಹೆಚ್ಚು ಆಹಾರಪದಾರ್ಥ ಬೆಳೆಯಲು ಒದಗಿಸಿ ನೀರಾವರಿ ಸೌಕರ್ಯ ಹೆಚ್ಚಿಸಲು ಏರ್ಪಾಡು ಮಾಡುತ್ತಿದ್ದಾರೆ. ಇದು ನಿಜವಾಗಿಯು ಒಳ್ಳೆಯ ವಿಚಾರ, ಅತ್ಯುತ್ತಮವಾದ ಕೆಲಸ. ಒಂದು ವರ್ಷವಲ್ಲ, ಒಂದು ತಾಲ್ಲೂಕಿನಲ್ಲಿ 500 ಎಕರೆ ನೀರಾವರಿಯಾದರೆ ಹೆಚ್ಚಿನ ಉತ್ಪತ್ತಿ ದೇಶದಲ್ಲಾಗುತ್ತದೆ ಎಂದು ಹೇಳುವುದರಲ್ಲಿ ಸಂಶಯ ಏನೂ ಇಲ್ಲ. ಈಗಾಗಲೆ ಲೋಕೋಪಯೋಗಿ ಇಲಾಖೆ ತ್ವರಿತವಾಗಿ ಕಾರ್ಯಕ್ರಮ ಕೈಕೊಳ್ಳುತ್ತಿದೆ, ಎಲ್ಲೆಲ್ಲಿ ಕೆರೆ ದುರಸ್ತು ಮಾಡಬಹುದು, ಅಣೆಕಟ್ಟ ಬಹುದು, ಎಲ್ಲಿ ಹೆಚ್ಚು ಸೌಕರ್ಯ ಒದಗಬಹುದು ಎಂದು ಸರ್ವೆ ಮಾಡುತ್ತಿದೆ ಇದರಿಂದ ದೇಶದಲ್ಲಿ ಹೆಚ್ಚಿನ ಆಹಾರ ಉತ್ಪತ್ತಿಯಾಗಿ ರಕ್ಷಣಾ ಕಾರ್ಯಕ್ಕೆ ಹೆಚ್ಚು ನೆರವಾಗ ಬಹುದೆಂದು ಭಾವಿಸುತ್ತೇನೆ.

ಕೇವಲ ಇಂಜಿನಿಯರಿಂಗ್ ಇಲಾಖೆಗೆ ಒಂದು ಹುಕುಮನ್ನು ಕೊಟ್ಟು ಪ್ರತಿ ತಾಲ್ಲೂಕಿನಲ್ಲಿಯೂ 500 ಎಕರೆಯಷ್ಟು ಹೆಚ್ಚು ಬೆಳೆಯುವಂತೆ ಮಾಡಿ ಎಂದು ಹೇಳಿದ ಮಾತ್ರಕ್ಕೇ ಎಲ್ಲ ತಾಲ್ಲೂಕುಗಳಲ್ಲಿಯೂ ಸುಗಮವಾಗಿ ಈ ಕಾರ್ಯ ನಡೆಯುತ್ತದೆ ಎಂದು ನಾನಾದರೂ ಭಾವಿಸಿಲ್ಲ. ಏಕೆಂದರೆ, ಇದಕ್ಕೆ ಕೆಲವು ಅಡಚಣೆಗಳಿವೆ. ಮೊಟ್ಟ ಮೊದಲು, ಇದಕ್ಕೆ ಅಗತ್ಯವಾದಷ್ಟು ಸಿಮೆಂಟ್ ದೊರಕದೇಯಿರುವುದು. ಸರ್ಕಾರದವರು ಇದನ್ನು ನಿವಾರಿಸಲು ಯೋಚನೆ ಮಾಡುತ್ತಿದ್ದಾರೋ ಇಲ್ಲವೋ ಗೊತ್ತಿಲ್ಲ. ಯಾವ ಯಾವ ಕೆಲಸಗಳಿಗೆ ಮುಖ್ಯವಾಗಿ ಹೆಚ್ಚು ಉಪಯೋಗವಾಗಬೇಕೋ ಆ ಕೆಲಸಗಳಿಗೆ ಸಿಮೆಂಟ್ ದೊರಕುತ್ತಿದೆಯೋ ಇಲ್ಲವೊ ಎಂಬುದನ್ನು ಪರ್ಯಾಲೋಚನೆ ಮಾಡಿ, ಇಂಥ ಕೆಲಸಗಳಿಗೆ ಹೆಚ್ಚು ದೊರೆಯುವಂತೆ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಮನಃಪೂರ್ವಕವಾಗಿ ಸರ್ಕಾರದಲ್ಲಿ ಬಿನ್ನವಿಸಿಕೊಳ್ಳುತ್ತೇನೆ. ಮೈನರ್ ನೀರಾವರಿ ಕಾಮಗಾರಿಗಳಿಗೆ ಸಿಮೆಂಟ್ ಎಷ್ಟು ಮಟ್ಟಿಗೆ ದೊರಕಬೇಕೋ ಅಷ್ಟು ದೊರೆಯುತ್ತಿಲ್ಲವೆಂದು ನನ್ನ ಗಮನಕ್ಕೆ ಬಂದಿದೆ.

ಎರಡನೆಯದಾಗಿ, ಕೆಲವು ಡಿವಿಜನ್‌ಗಳಲ್ಲಿದ್ದ ಸೂಪರ್ ವೈಜರುಗಳ ಸಂಖ್ಯೆ ಹೆಚ್ಚೆಂದು ಅವರನ್ನು ಸರ್ಕಾರದವರು ವಾಪಸು ಪಡೆದಿದ್ದಾರೆ. ಅಲ್ಲಿ ಅನೇಕ ಕೆಲಸಗಳು ಆಗಬೇಕಾಗಿದ್ದು, ಅಲ್ಲಿನ work loadಗೆ ತಕ್ಕಷ್ಟು ಸಿಬ್ಬಂದಿಯಿಲ್ಲದೆ ಕೆಲಸಗಳು ತ್ವರಿತವಾಗಿ ನಡೆಯುತ್ತಿಲ್ಲ. ಎಷ್ಟು ವಿಚಕ್ಷಣೆಯಿಂದ ನಡೆಯಬೇಕೋ ಅಷ್ಟು ಮಟ್ಟಿಗೆ ನಡೆಯುತ್ತಿಲ್ಲ. ಸಿಬ್ಬಂದಿ ಸಾಲದೆಂದು ಕೆಲಸಗಳು ನಿಧಾನವಾಗಿವೆ. ಹೀಗೆ ಕುಂಠಿತವಾಗಿ ಹಿಂದೆ ಬಿದ್ದಿವೆ. ಅಲ್ಲದೆ ಸೂಪರ್

ವೈಜರುಗಳನ್ನು ವಾಪಸು ತೆಗೆದುಕೊಂಡಿದ್ದಾರೆ, ಅನೇಕ ಕಡೆ ಮೈನರ್ ನೀರಾವರಿ ಕೆಲಸಗಳು ಜಾಸ್ತಿಯಿವೆ. ಒಂದು ವೇಳೆ ರಸ್ತೆ ಮಾಡುವ ಮತ್ತು ಕಟ್ಟಡಗಳನ್ನು ಕಟ್ಟುವ ಕೆಲಸಗಳನ್ನು ನಿಲ್ಲಿಸಿದರೂ ಕೂಡ ವಿವಿಧ ತಾಲ್ಲೂಕುಗಳಲ್ಲಿರುವ ಮೈನರ್ ನೀರಾವರಿ ಕೆಲಸಗಳನ್ನು ನೋಡಿಕೊಳ್ಳುವುದಕ್ಕೆ ತಕ್ಕಷ್ಟು ಸಿಬ್ಬಂದಿಬೇಕು. ಒಂದೊಂದು ಹೋಬಳಿಗೆ ಒಬ್ಬೊಬ್ಬ ಸೂಪರ್ ವೈಜರಿದ್ದರೆ, ಅಲ್ಲಿ ನಡೆಯುವ ಕೆಲಸಗಳನ್ನು ನೋಡಿಕೊಳ್ಳುತ್ತಾರೆ. ಹಾಗಿಲ್ಲದೆ ಎರಡು ಮೂರು ಹೋಬಳಿಗಳಿಗೆ ಒಬ್ಬನನ್ನು ಹಾಕಿದರೆ ಹೇಗೆ ನೋಡಿಕೊಳ್ಳುವುದು ? ಈ ರೀತಿ ಸಿಬ್ಬಂದಿಯನ್ನು ಕಡಮೆ ಮಾಡಿದರೆ Penny wise, pound foolish ಎನ್ನುವ ಹಾಗಾಗುತ್ತದೆ.

ಶ್ರೀ ಆಲೂರು ಹನುಮಂತಪ್ಪ (ಸಣ್ಣ ನೀರಾವರಿ ಶಾಖೆಯ ಉಪಮಂತ್ರಿಗಳು).—ಹೆಚ್ಚು ಮಾಡಿದ್ದೇವೆಯೇ ಹೊರತು ಸಿಬ್ಬಂದಿಯನ್ನು ಕಡಮೆ ಮಾಡಿಲ್ಲ.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ (ತಿಪಟೂರು).—"foolish" ಎನ್ನುವ ಪದ parliamentary ಯೆ ಎಂಬುದನ್ನು ಹೇಳಬೇಕು.

ಉಪಾಧ್ಯಕ್ಷರು.—ಈ ಸಂದರ್ಭದಲ್ಲಿ ಅದು unparliamentary ಯಲ್ಲ.

ಶ್ರೀ ಟಿ. ಮಾದಯ್ಯಗೌಡ.—ನನಗೆ ಗೊತ್ತಿರುವ ಹಾಗೆ, ಬೆಂಗಳೂರು ಸರ್ಕಲ್‌ನಲ್ಲಿ ಅನೇಕ ಡಿವಿಜನ್‌ಗಳಿಂದ ಸೂಪರ್ ವೈಜರುಗಳನ್ನೂ, ಸಬ್ ಓವರ್ ಸಿಯರ್‌ಗಳನ್ನು ವಾಪಸು ಪಡೆದಿದ್ದಾರೆ. ರಾಮನಗರ ಡಿವಿಜನ್‌ನಿಂದ ಎಂಟು ಹತ್ತು ಸೂಪರ್ ವೈಜರುಗಳನ್ನು ಹಿಂದಕ್ಕೆ ಕರೆಸಿಕೊಂಡಿದ್ದಾರೆ. ಆದರಿಂದ ಅಲ್ಲಿ ನಡೆಯುವ ಕೆಲಸಗಳು ಕಡಮೆಯಾಗಿದೆ. ಮೈನರ್ ನೀರಾವರಿ ಕೆಲಸಗಳು ಅಚ್ಚುಗಟ್ಟಾಗಿ ನಡೆಯಬೇಕೆನ್ನುವ ಕಾಲದಲ್ಲಿ ಹೀಗೆ ನೌಕರರನ್ನು ಕಡಮೆ ಮಾಡುವುದರಿಂದ ಪ್ರಯೋಜನವಿಲ್ಲ. ಪಬ್ಲಿಕ್ ವರ್ಕ್ಸ್ ಮಂತ್ರಿಗಳು ನಮ್ಮ ತಾಲ್ಲೂಕಿಗೆ ಬಂದಾಗ ಹೀಗೆ ಅನ್ಯಾಯವಾಗುತ್ತಿದೆ ಎಂದು ಹೇಳಿದೆವು. ಆದರೆ ಹಣ ಕಾಸಿನ ಮಂತ್ರಿಗಳು ಏನು ಮಾಡಿದರೋ ಗೊತ್ತಿಲ್ಲ. ಹಿಂದೆ ಕರೆಸಿಕೊಂಡವರನ್ನು ದಯಯಿಟ್ಟು ಮತ್ತೆ ಅಲ್ಲಿಗೆ ಕಳುಹಿಸಿದರೆ ಬಹಳ ಅನುಕೂಲವಾಗುತ್ತದೆ, ಎಲ್ಲೆಲ್ಲಿ ಕೆಲಸಗಳಾಗಿಲ್ಲವೋ ಅಲ್ಲಿ ಆ ಕೆಲಸಗಳನ್ನು ಮಾಡಿಸಬಹುದು, ಈಗ ಮೈನರ್ ನೀರಾವರಿ ಕೆಲಸ ತ್ವರಿತವಾಗಿ, ಚೆನ್ನಾಗಿ ನಡೆಯಬೇಕು. ಇದಕ್ಕೆ ಬೇಕಾದ ಹೆಚ್ಚಿನ ಸಿಮೆಂಟ್ ಮತ್ತು ಸಿಬ್ಬಂದಿಯನ್ನು ಕೊಡಬೇಕು.

ಮೈನರ್ ನೀರಾವರಿ ಜಾಸ್ತಿ ಮಾಡಿ, ಹೆಚ್ಚು ಜಮೀನು ವ್ಯವಸಾಯಕ್ಕೆ ಬಂದು ಆ ಜಮೀನಿನಲ್ಲಿ ಚೆನ್ನಾಗಿ ಬೆಳೆಯಾಗಬೇಕಾದರೆ ಗೊಬ್ಬರಬೇಕು. ಇದನ್ನೊದಗಿಸಲು ತ್ವರಿತ ಕ್ರಮವನ್ನು ತೆಗೆದುಕೊಳ್ಳಬೇಕು.

Sri C. J. MUCKANNAPPA.—On a point of order Sir, Can a Deputy Minister sit in the Distinguished Visitors' Gallery ?

Mr. DEPUTY SPEAKER.—He cannot sit.

ಶ್ರೀ ಟಿ. ಮಾದಯ್ಯಗೌಡ.—ತಕ್ಕಷ್ಟು ಪ್ರಮಾಣದಲ್ಲಿ ಕೃತಕ ಗೊಬ್ಬರವನ್ನು ಜನರಿಗೆ ಒದಗಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಹೀಗೆಯೇ ಮತ್ತೊಂದು ಏರ್ಪಾಡು ಅತ್ಯಂತ ಆವಶ್ಯಕ. ಪಂಪ್ ಸೆಟ್‌ಗಳು ಮತ್ತು ಅವಕ್ಕೆ ಬೇಕಾದ ವಿದ್ಯುಚ್ಛಕ್ತಿಯನ್ನೊದಗಿಸಲು top priority ಕೊಡಬೇಕಾದುದು ಅನಿವಾರ್ಯವೆಂದು ಹೇಳುತ್ತೇನೆ. ರೈತರು ಸೈನಿಕರಲ್ಲದಿದ್ದರೂ ಕೂಡ ತಾವು ಮಾಡಬೇಕಾದ ಕೆಲಸವನ್ನು ಅವರು ದಕ್ಷತೆಯಿಂದ, ನಿಷ್ಠೆಯಿಂದ ಮಾಡಿದರೆ, ಇವರು ಸೈನಿಕರಷ್ಟೇ ದೇಶದ ರಕ್ಷಣೆಗೆ ಸಹಾಯವಾಗುತ್ತಾರೆಂಬುದು ನಿರ್ವಿವಾದವಾಗಿದೆ. ಹೀಗೆಯೇ ವ್ಯಾಪಾರಸ್ಥರು ಕಾಳಸಂತೆಗೆ ಮನಗೊಡದೆ ನಿಷ್ಠೆಯಿಂದಲೂ ಭಕ್ತಿಯಿಂದಲೂ ಸತ್ಯದಿಂದಲೂ ವ್ಯಾಪಾರವನ್ನು ನಡೆಸಿದರೆ ಈಗ ದೇಶಕ್ಕೆ ಬಂದಿರುವ ಒಂದು ದೊಡ್ಡ ಗಂಡಾಂತರವನ್ನು ಹೋಗಲಾಡಿಸುವುದಕ್ಕವಕಾಶವಾಗುತ್ತದೆ. ಆದುದರಿಂದ ಕಾಳಸಂತೆ ಮಾಡದಂತೆ ಎಚ್ಚರಿಕೆ ನೀಡಬೇಕಾದುದು ಅಗತ್ಯವೆಂದು ಹೇಳಬೇಕಾದುದು ಅಗತ್ಯವೆಂದು ಹೇಳಲಿಚ್ಛಿಸುತ್ತೇನೆ.

ಇನ್ನು ಯುವಕರು ಹೆಚ್ಚು ಸಂಖ್ಯೆಯಲ್ಲಿ ಮುಂದೆ ಬಂದು ಯುದ್ಧಕ್ಕೆ ಸೇರುವುದಕ್ಕೆ ತಕ್ಕಷ್ಟು ಪ್ರೋತ್ಸಾಹ ಕೊಟ್ಟು ಅವಕಾಶ ಕಲ್ಪಿಸಬೇಕು. ಮೈಸೂರು ದೇಶದಲ್ಲಿ ಹೆಚ್ಚಾಗಿ ಸೈನ್ಯಕ್ಕೆ ಸೇರಲು ಬರುವುದಿಲ್ಲವೆಂದು ಕೆಲವರು ಮಿತ್ರರು ಹೇಳಿದರು. ಸೈನ್ಯಕ್ಕೆ ಸೇರುವ ಜನ ಬೇಕಾದಷ್ಟಿದ್ದಾರೆ. ಆದರೆ ಅವರಿಗೆ ಯಾವ ರೀತಿ ವಿಷಯವನ್ನು ತಿಳಿಸಬೇಕು, ಯಾವ ರೀತಿ ಪ್ರೋತ್ಸಾಹ ಕೊಡಬೇಕು ಎಂಬ ಬಗ್ಗೆ ತಕ್ಕ ರೀತಿ ತಿಳಿವಳಿಕೆ ಕೊಡುತ್ತಿಲ್ಲವೆಂದು ನನ್ನ ಭಾವನೆ. ಈಗ ರಿಕ್ರೂಟ್ ಮಾಡುವುದಕ್ಕೆ ಮೈಸೂರು, ಬೆಂಗಳೂರಿನಲ್ಲಿ ಕೇಂದ್ರಗಳಿವೆ. ತಿಂಗಳ ಇಂಥಿಂಥ ದಿವಸ ಇಂಥಿಂಥ ಕಡೆ ಹೋಗುತ್ತೇವೆಂದು ಹೇಳಿ ತಾಲ್ಲೂಕು ಕಸಬೆಗಳಲ್ಲಿ ಏರ್ಪಾಡು ಮಾಡಿದರೆ ಬಹುಮಟ್ಟಿಗೆ ತಾಲ್ಲೂಕುಗಳಿಂದ ಜನರು ಯುದ್ಧಕ್ಕೆ ಸೇರಲವಕಾಶವಾಗುತ್ತದೆ. ರಿಕ್ರೂಟ್ ಮಾಡುವವರು ನಿರ್ದಿಷ್ಟ ಕಾರ್ಯಕ್ರಮವನ್ನು ಕೊಡಬೇಕು. ಹೀಗೆ ಕೊಟ್ಟರೆ, ತಾಲ್ಲೂಕಿನ ಬೇರೆ ಬೇರೆ ಊರುಗಳಲ್ಲಿ, ಇಂಥವರು ಬರುತ್ತಾರೆ, ಯುವಕರನ್ನು ಸೈನ್ಯಕ್ಕೆ ಸೇರಿಸಿಕೊಳ್ಳುತ್ತಾರೆ, ಇಷ್ಟವುಳ್ಳವರು ಬರಬಹುದೆಂದು ಪ್ರಕಟಿಸಿದರೆ, ಬಹುಜನರು ಸೇರಲು ಅವಕಾಶವಾಗುತ್ತದೆ. ಇದು ಬಿಟ್ಟು ಕೇವಲ ಮೈಸೂರು ಬೆಂಗಳೂರಿನಂಥ ದೊಡ್ಡ ಪಟ್ಟಣಗಳಲ್ಲಿ ಮಾತ್ರ ರಿಕ್ರೂಟಿಂಗ್ ಕೇಂದ್ರಗಳನ್ನಿಟ್ಟು, ಜನರು ಹಿಂದೆ ಬೀಳುತ್ತಾರೆಂದು ಹೇಳುವುದು ಸರಿಯಲ್ಲವೆಂದು ನನ್ನ ಅಭಿಪ್ರಾಯ.

4-30 P.M.

ಈಗ ಎನ್.ಸಿ.ಸಿ. ಮತ್ತು ಎ.ಸಿ.ಸಿ. ಟ್ರೈನಿಂಗನ್ನು ಹೆಚ್ಚಿಗೆ ಕೊಡಲಿಕ್ಕೆ ಸರ್ಕಾರದವರು ತೀವ್ರವಾದ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆಂಬುದನ್ನು ಕೇಳಿ ನನಗೆ ಬಹಳ ಸಂತೋಷವಾಗುತ್ತಿದೆ. ಇಂಥಾದ್ದನ್ನು ಮೊದಲೇ ಸರ್ಕಾರದವರು ಮಾಡಬೇಕಾಗಿತ್ತು. ಆದರೂ ಈಗಾಗಲೇ ಸಾವಿರಾರು ಯುವಕರನ್ನು ಆ ಟ್ರೈನಿಂಗ್‌ನಿಂದ ತಯಾರಾಗುತ್ತಿದ್ದಾರೆ ಮುಖ್ಯವಾಗಿ ಎಲ್ಲಾ ಯುವಕರನ್ನು ಎನ್.ಸಿ.ಸಿ, ಮತ್ತು ಎ.ಸಿ.ಸಿ.ಗೆ ಸೇರಿಸಲಿಕ್ಕೆ ಸರ್ಕಾರದವರು ಸರಿಯಾದ ರೀತಿಯಲ್ಲಿ ಕಾನೂನುಗಳನ್ನು ರಚನೆ ಮಾಡಬೇಕು ಎಂಬುದಾಗಿ ನಾನು ಅಭಿಪ್ರಾಯ ಪಡುತ್ತೇನೆ. ಅಲ್ಲದೆ ಎನ್.ಸಿ.ಸಿ. ಅಥವಾ ಎ.ಸಿ.ಸಿ. ಮತ್ತು ಸೇವಾದಳ ಮುಂತಾದ ಕಮಿಟಿಗಳಲ್ಲಿ ಭಾಗವಹಿಸದೆ ಇರತಕ್ಕ ವಿದ್ಯಾರ್ಥಿಗಳು ನಮ್ಮ ದೇಶದಲ್ಲಿಯೇ ಇರಬಾರದು

(ಶ್ರೀ ಟಿ. ಮಾದಯ್ಯಗೌಡ)

ಎಂಬುದಾಗಿ ನಾನು ಅಭಿಪ್ರಾಯಪಡುತ್ತೇನೆ. ಈ ಸಂದರ್ಭದಲ್ಲಿ ಮತ್ತೊಂದು ವಿಚಾರವನ್ನು ಸರ್ಕಾರದವರ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಅದೇನೆಂದರೆ ಜನ ಹೆಚ್ಚಿಗೆ ನರ್ಸಿಂಗ್ ಮತ್ತು ಫಸ್ಟ್-ಏಡ್ ಅಥವಾ ಪ್ರಥಮ ಚಿಕಿತ್ಸೆ ವಿಷಯಗಳಲ್ಲಿ ತರಪೇತನ್ನು ಹೊಂದಬೇಕು. ಅದಕ್ಕೆ ಸರ್ಕಾರದವರು ಕೂಡಲೆ ತಕ್ಕ ಕ್ರಮಗಳನ್ನು ಕೈಗೊಳ್ಳಬೇಕು ಮತ್ತು ತಕ್ಕ ವ್ಯವಸ್ಥೆಯನ್ನೂ ಸಹ ತ್ವರಿತವಾಗಿ ಮಾಡಬೇಕು. ಅದರಲ್ಲೂಕೂಡ ಹೆಂಗಸರಿಗೆ ನರ್ಸಿಂಗ್ ಮತ್ತು ಪ್ರಥಮ ಚಿಕಿತ್ಸೆ ಬಗ್ಗೆ ಹೆಚ್ಚಿನ ತರಪೇತನ್ನು ಕೊಡುವುದಕ್ಕೆ ತಕ್ಕ ಅವಕಾಶವನ್ನು ಸರ್ಕಾರದವರು ಕಲ್ಪಿಸಿಕೊಡಬೇಕು. ಕೆಲವು ವಿಷಯಗಳಲ್ಲಿ ಸರ್ಕಾರದವರು ತಡೆ ಮತ್ತು ನಿಧಾನ ಮಾಡುವುದು ಯೋಗ್ಯವಲ್ಲ. ಎಲ್ಲೆಲ್ಲಿ ಡಾಕ್ಟರುಗಳು ಸಿಗುತ್ತಾರೋ ಅಲ್ಲೆಲ್ಲಾ ಕೂಡಲೇ ಪ್ರಥಮ ಚಿಕಿತ್ಸೆ ಶಿಕ್ಷಣವನ್ನು ಕೊಡುವುದಕ್ಕೆ ತಕ್ಕ ಏರ್ಪಾಡುಗಳನ್ನು ಸರ್ಕಾರದವರು ಮಾಡುತ್ತಾರೆಂದು ನಾನು ಭರವಸೆಯನ್ನು ಇಟ್ಟು ಕೊಳ್ಳುತ್ತೇನೆ. ಆದರೆ ಇನ್ನೊಂದು ಒಳ್ಳೆಯ ಸಂಗತಿಯೆಂದರೆ ಅನೇಕ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಾ ಇರತಕ್ಕ ಕೂಲಿಯವರು ತಮ್ಮ ಇತರ ಎಲ್ಲಾ ಆಲೋಚನೆಗಳನ್ನೂ ಬದಿಗೊತ್ತಿ ಕಪಟಿಗಳ ಮಾತಿಗೆ ಮೋಸಹೋಗದೆ ನಾವೂ ಸಹ ಇನ್ನೂ ಹೆಚ್ಚು ಕಾಲ ಕೆಲಸ ಮಾಡುತ್ತೇವೆ, ನಮ್ಮ ವರಮಾನದಲ್ಲಿಯೂ ಕೂಡ ರಕ್ಷಣಾನಿಧಿಗೆ ಕೈಲಾದಷ್ಟು ಸಹಾಯಮಾಡುತ್ತೇವೆ ಎಂಬುದಾಗಿ ಮುಂದೆ ಮುಂದೆ ಬಂದಿರುವುದು ಬಹಳ ದೊಡ್ಡ ಮಾತು ಮತ್ತು ಅದು ಬಹಳ ಸಂತೋಷಕರವಾದ ವಿಚಾರವಾಗಿದೆಯೆಂದು ನಾನು ಹೇಳುತ್ತೇನೆ. ಅನೇಕ ಕಾರ್ಖಾನೆಗಳಲ್ಲಿ ಲೇಬರರ್ಸ್ ಎಂದರೆ ದೇಶಕ್ಕೇ ಒಂದು ವಿಧವಾದಂಥ ಭಯ. ಏತಕ್ಕೆಂದರೆ ಅವರ ಹಿಂದೆ ಇರತಕ್ಕ ಕೆಲವು ವ್ಯಕ್ತಿಗಳು ಇವರುಗಳನ್ನು ತಪ್ಪುದಾರಿಗೆ ಎಳೆದು ಅವರು ದೇಶಕ್ಕಾಗಿ ಸಲ್ಲಿಸುತ್ತಿರುವ ಸೇವೆಯನ್ನು ತಪ್ಪಿಸಿ ಅವರನ್ನು ಬಹಿರ್ಮುಖರನ್ನಾಗಿ ಮಾಡುತ್ತಿದ್ದಾರೆ. ಅಂತಹ ಪ್ರಸಂಗ ಎಂದಿಗೂ ಉಂಟಾಗದಂತೆ ಅವರನ್ನು ಸರ್ಕಾರದವರು ಬಹು ಜಾಗರೂಕತೆಯಿಂದ ನೋಡಿಕೊಂಡು ಹೋಗಬೇಕು. ಕೂಲಿಗಾರರು ಕಡು ಬಡವರಾಗಿದ್ದರೂ ಪ್ರಾಮುಖ್ಯ ಪಾತ್ರವನ್ನು ವಹಿಸಿ ಇಂತಹ ಸಂಧಿಗ್ಧ ಸಮಯದಲ್ಲಿ ಹೆಚ್ಚು ಹೆಚ್ಚು ಉತ್ಪತ್ತಿ ಮಾಡಲು ಮುಂದೆ ಬಂದಿರುವುದು ಬಹಳ ಶ್ಲಾಘನೀಯವಾದುದು. ಅಂತಹವರು ರಕ್ಷಣಾ ಕಾರ್ಯಕ್ಕೆ ನೆರವಾಗುವಂತೆ ಮಾಡತಕ್ಕ ಕೆಲಸ ಸರ್ಕಾರದ ಪಾಲಿಗೆ ಬಿದ್ದಿದೆ. ಅದು ಈ ಸಂದರ್ಭದಲ್ಲಿ ಅತ್ಯಗತ್ಯವಾದುದಾಗಿದೆ. ಹಾಗೆಯೇ ಇಂತಹ ಕ್ಲಿಷ್ಟ ಕಾಲದಲ್ಲಿ ಹೆಚ್ಚಿಗೆ ಡಾಕ್ಟರುಗಳು ಮತ್ತು ಇಂಜನಿಯರುಗಳ ನೆರವು ಬೇಕಾಗುತ್ತದೆಂದು ನಾನು ಹೇಳುತ್ತೇನೆ. ಅಂತಹವರಿಗೆ ಪ್ರೋತ್ಸಾಹ ಕೊಟ್ಟು ದೇಶದ ರಕ್ಷಣೆಗಾಗಿ ಅವರು ಹೆಚ್ಚಿಗೆ ತರಪೇತನ್ನು ಪಡೆಯುವುದು ಅತ್ಯಾವಶ್ಯಕವಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ.

ಇನ್ನೊಂದು ವಿಷಯ. ನಮ್ಮ ಅನೇಕ ಕಾರ್ಖಾನೆಗಳಲ್ಲಿ ಇನ್ನು ಮುಂದೆ ಹೆಚ್ಚಿಗೆ ಯುದ್ಧಕ್ಕೆ ಬೇಕಾದ ಸಾಮಗ್ರಿಗಳನ್ನು ಒದಗಿಸುವ ಕಾರ್ಯಗಳಿಗೆ ತಕ್ಕ ವ್ಯವಸ್ಥೆಯನ್ನು ಮಾಡಬೇಕು. ಆ ಕಾರ್ಖಾನೆಗಳನ್ನು ಆ ರೀತಿಯಾಗಿ ಪರಿವರ್ತಿಸಬೇಕು. ಈ ಕಾರ್ಯವನ್ನು ಸರ್ಕಾರದವರು ಬಹಳ ಜಾಗರೂಕತೆಯಿಂದ, ಎಚ್ಚರಿಕೆಯಿಂದ ಮಾಡಬೇಕಾಗಿದೆ. ಎಂಬುದಾಗಿ ನಾನು ಈ ಸಂದರ್ಭದಲ್ಲಿ ಸಲಹೆ ಮಾಡಲಿಚ್ಛಿಸುತ್ತೇನೆ. ಉದಾಹರಣೆಗೆ ಹೇಳುವುದಾದರೆ ಈಗ ನಮ್ಮಲ್ಲಿ ಸಿಲ್ಕ್ ಫ್ಯಾಕ್ಟರಿ ಇವೆ. ಸಿಲ್ಕ್ ಪ್ಯಾರಚೂಟ್ಸ್‌ಗೋಸ್ಕರ ಬಹಳ ಅಗತ್ಯವಾದ ವಸ್ತು. ಆದರೆ ಆ ವಸ್ತು ಬೇರೆ ಕಡೆಗೆ ಸಾಗಿ ಹೋಗದಹಾಗೆ ಈಗಲಿಂದಲೇ ಸರಿಯಾದ ರೀತಿಯಲ್ಲಿ ಅದನ್ನು ಕಾಪಾಡಿಕೊಂಡು ಬರಬೇಕಾಗಿದೆ. ಹಾಗೆಯೇ ಸೈನಿಕರಿಗೆ ಬೇಕಾದ ಬಟ್ಟೆ ಬರೆಗಳನ್ನು ಮತ್ತು ಕಂಬಳಿ ಮುಂತಾದ ವಸ್ತ್ರಗಳನ್ನು ತಯಾರು ಮಾಡುವ ಹಾಗೆ ಗಿರಣಿಗಳನ್ನು ತೆಗೆಯಲು ಕಾನೂನು ರೀತಿಯಲ್ಲಿ ಅವರಿಗೆ ಸಲಹೆಗಳನ್ನು ಕೊಡುವ ಏರ್ಪಾಡನ್ನು ಮಾಡಿಸುವುದು ಈ ಸಂದರ್ಭದಲ್ಲಿ ಅಗತ್ಯವಾಗಿದೆ. ಅಲ್ಲದೆ ಇಂಡಿಯಾ ಸರ್ಕಾರಕ್ಕೆ ಸೇರಿದ ಎಚ್.ಎಂ.ಟಿ. ಮುಂತಾದ ಇತರ ಕಾರ್ಖಾನೆಗಳಲ್ಲಿ ಆ ಯುಧಕ್ಕೆ ಬೇಕಾದ ಸಲಕರಣೆಗಳನ್ನು ತಯಾರುಮಾಡುವುದಕ್ಕೆ ಅವರಿಗೆ ಈಗಲೇ ಸಲಹೆಗಳನ್ನು ಸರ್ಕಾರದವರು ಕೊಡುವುದು ಅಗತ್ಯವೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಮತ್ತೊಂದು ವಿಚಾರ ಅದೇನೆಂದರೆ ನಮ್ಮ ಮೈಸೂರು ರಾಜ್ಯದಲ್ಲಿ ಹೋಂಗಾರ್ಡುಗಳನ್ನು ಏರ್ಪಾಡುಮಾಡುವ ವಿಷಯ. ಹೋಂಗಾರ್ಡ್ಸ್ ಈಗ ಹಳೆಯ ಮೈಸೂರಿನಲ್ಲಿ ಇಲ್ಲವೇ ಇಲ್ಲ. ಅಂತಹವರನ್ನು ಕೂಡಲೇ ನೇಮಿಸುವ ಕಾನೂನನ್ನು ಜಾರಿಗೆ ತರಬೇಕೆಂದು ನಾನು ಅಭಿಪ್ರಾಯಪಡುತ್ತೇನೆ. ಎಲ್ಲಾ ಕಡೆಗಳಲ್ಲೂ ಹೋಂಗಾರ್ಡುಗಳನ್ನು ಏರ್ಪಾಡು ಮಾಡುವುದು ಅಗತ್ಯವೆಂದು ನಾನು ತಿಳಿಸಬೇಕಾಗಿದೆ. ಇದೇ ಸಂದರ್ಭದಲ್ಲಿ ಪ್ರತಿಯೊಂದು ಕಡೆಯೂ ರೈಫಲ್ ಕ್ಲಬ್‌ಗಳನ್ನು ತೆರೆಯುವುದು ಬಹಳ ಅತ್ಯಾವಶ್ಯಕವಾಗಿದೆ. ಈಗಿನ ಸಂದರ್ಭದಲ್ಲಿ ಇದರ ಅವಶ್ಯಕತೆ ಬಹಳ ಹೆಚ್ಚಾಗಿದೆ. ಕಡೆಯ ಪಕ್ಷ ಒಂದೊಂದು ತಾಲ್ಲೂಕಿನ ಮುಖ್ಯ ಸ್ಥಳಗಳಲ್ಲಿ ರೈಫಲ್ ಕ್ಲಬ್‌ಗಳನ್ನು ಏರ್ಪಾಡು ಮಾಡಬೇಕು. ಆದರೆ ರೈಫಲ್ಸ್ ಇಲ್ಲವೆಂಬ ಪ್ರಶ್ನೆ ಬರಬಹುದು. ಅದಕ್ಕೆ ಸಂಬಂಧಪಟ್ಟ ಇಲಾಖೆಯವರು ಕೂಡಲೇ ಹೆಚ್ಚಿಗೆ ರೈಫಲ್‌ಗಳನ್ನು ತರಿಸಿ ಆ ಕ್ಲಬ್‌ಗಳಿಗೆ ಸರಬರಾಯಿ ಮಾಡುವ ವ್ಯವಸ್ಥೆಯನ್ನು ಸರ್ಕಾರದವರು ಮಾಡಬೇಕು. ಅನೇಕರು ಈ ಬಂದೂಕುಗಳನ್ನು ಅಲಂಕಾರಕ್ಕೋಸ್ಕರ ಇಟ್ಟುಕೊಂಡಿರುತ್ತಾರೆ. ಅವನ್ನು ಹೊರಕ್ಕೆ ತೆಗೆಸಿ ರೈಫಲ್ ಕ್ಲಬ್‌ಗಳಿಗೆ ಕೊಟ್ಟು ಅಲ್ಲಿ ಶಿಕ್ಷಣ ಹೊಂದಿದವರಿಂದ ಹೆಚ್ಚಿಗೆ ಅವರ ಸೇವೆ ಯಶಸ್ವಿಯಾಗಿ ನಡೆಯುವಂತೆ ಮಾಡಬೇಕು ಎಂಬುದಾಗಿ ನಾನು ಸಲಹೆ ಮಾಡುತ್ತೇನೆ.

ಕಡೆಯದಾಗಿ ಈ ಪ್ರಚಾರ ಕಾರ್ಯ ಬಹಳ ತ್ವರಿತವಾಗಿ ಅಚ್ಚುಕಟ್ಟಾಗಿ ನಡೆಯಬೇಕು. ನಮ್ಮ ದೇಶದಲ್ಲಿ ಪತ್ರಿಕಾ ಕರ್ತರು, ಪತ್ರಿಕಾ ಸಂಪಾದಕರುಗಳು ಬಹಳ ಅತ್ಯುತ್ತಮವಾದ ರೀತಿಯಲ್ಲಿ ಯುದ್ಧದ ವಿಷಯಗಳನ್ನು ಪ್ರಸ್ತಾಪಿಸಿ ಜನಗಳಲ್ಲಿ ಒಂದು ರೀತಿಯ ಉತ್ತೇಜನ ಮತ್ತು ಹುಮ್ಮಸ್ಸನ್ನುಂಟು ಮಾಡಿದ್ದಾರೆ. ಅವರುಗಳಿಗೆ ನಾವು ಹೆಚ್ಚಿನ ಕೃತಜ್ಞತೆಯನ್ನು ತೋರಿಸಬೇಕು. ಅವರು ತಮ್ಮ ಕೆಲಸ ಕಾರ್ಯಗಳನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಮೂಲೆ ಮೂಲೆಯಲ್ಲಿರತಕ್ಕ ವಿಚಾರಗಳನ್ನೆಲ್ಲಾ ಕ್ರೋಢೀಕರಿಸಿ ಯುದ್ಧದ ಮನೋಭಾವ ಜನಗಳಲ್ಲಿ ಬೆಳೆಯುವ ಹಾಗೆ ಏರ್ಪಾಡು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ನಮ್ಮ ದೇಶದಲ್ಲಿ ಗೂಢಚಾರರು ಮಾಡತಕ್ಕ ಸುಳ್ಳು ಪ್ರಚಾರಗಳಿಗೆ ಅವಕಾಶವಿಲ್ಲದೆ ಇರುವ ಹಾಗೆ ತಕ್ಕ ವ್ಯವಸ್ಥೆಯನ್ನು ಕೈಗೊಳ್ಳಬೇಕು. ಕಳ್ಳಸಂತೆ, ಕಳ್ಳತನದಿಂದ ಹಣಶೇಖರಣೆ, ಕಳ್ಳ ಸಾಗಾಣಿಕೆ

ಇವುಗಳಿಗೆ ಅವಕಾಶವಿಲ್ಲದೆ ಇರುವ ಹಾಗೆ ಕಾನೂನು ರೀತಿಯಲ್ಲಿ ಪ್ರಚಾರ ಕಾರ್ಯವನ್ನು ದೇಶದಲ್ಲಿ ಕೈಗೊಳ್ಳಲು ಸರ್ಕಾರದವರು ಈ ತುರ್ತಾದ ಸಮಯದಲ್ಲಿ ಬಹು ಜಾಗರೂಕರಾಗಿರಬೇಕು, ಪತ್ರಿಕಾ ಕರ್ತರೂ ಮತ್ತು ಖಾಸಗೀ ಜನಗಳು ಇಂತಹ ಒಂದು ಕಾರ್ಯಕ್ಕೆ ಬಹು ಜಾಗ್ರತೆಯಾಗಿ ನೆರವಾಗಬೇಕೆಂದು ನಾನು ಹೇಳುತ್ತೇನೆ. ಈ ಕೆಲಸ ಬಹಳ ಅಗತ್ಯವಾಗಿ ನಡೆಯಬೇಕಾಗಿದೆ. ಭರತ ಖಂಡದಲ್ಲಿ ನಾವು ಯಾವುದೋ ರೀತಿಯಲ್ಲಿ ಯುದ್ಧದಲ್ಲಿ ಗೆದ್ದರೆ ಸಾಕು ಎಂಬ ಮನೋಭಾವ ಪೂರ್ವದಿಂದ ನಡೆದು ಬಂದಿಲ್ಲ. ನಾವು ಧರ್ಮ ಯುದ್ಧವನ್ನು ಮಾಡಿ ಧರ್ಮ ರೀತಿಯಲ್ಲಿಯೇ ಜಯಿಸುತ್ತಿದ್ದೇವೆ ಎನ್ನುವ ಒಂದು ಸಂಪ್ರದಾಯ ಅಥವಾ ಆ ಒಂದು ತೀರ್ಮಾನದಿಂದ ನಡೆದುಕೊಂಡು ಬಂದಿರುವ ಜನ. ಅದನ್ನೇ ನಮ್ಮ ರಾಷ್ಟ್ರಾಧ್ಯಕ್ಷರು ಒತ್ತಿ ಒತ್ತಿ ಹೇಳಿದ್ದಾರೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಧರ್ಮ ಯುದ್ಧವೆಂದರೆ...

ಶ್ರೀ ಟಿ. ಮಾದಯ್ಯಗೌಡ.—ನಮ್ಮ ಶ್ರೇಷ್ಠ ಗ್ರಂಥಗಳಾದ ಭಗವದ್ಗೀತೆಯಲ್ಲಿ 'ಧರ್ಮಕ್ಷೇತ್ರೇ ಕುರುಕ್ಷೇತ್ರೇ' ಎಂದು ಹೇಳಿರುವುದು. ಆದ್ದರಿಂದ ನಾವು ಧರ್ಮದಿಂದ ಮತ್ತು ನ್ಯಾಯದಿಂದ ವರ್ತಿಸಿ ಗೆಲ್ಲಬೇಕು. ಯುದ್ಧ ಮಾಡಬೇಕು ; ಶತ್ರುಗಳನ್ನು ಓಡಿಸಬೇಕು. ಅದರಲ್ಲಿ ಧರ್ಮ ಮತ್ತು ನಿಷ್ಠೆ ಇರಬೇಕು. ಆದರೆ ಕೌಟಿಲ್ಯ ನೀತಿಯಿಂದ ಯುದ್ಧದಲ್ಲಿ ಜಯಿಸುತ್ತೇವೆಂದು ಹೋಗುವುದು ಯೋಗ್ಯವಲ್ಲ. ಅದರೊಳಗೆ ಧರ್ಮವೂ ಸೇರಿರಬೇಕೆಂದು ನಾನು ಪೂರ್ವದಿಂದಲೂ ಅಂದುಕೊಂಡಿದ್ದೇನೆ. ಈ ರೀತಿ ಧರ್ಮ ಮತ್ತು ನಿಷ್ಠೆ ಜನಗಳಲ್ಲಿ ಬೆಳೆದು ತನ್ಮೂಲಕ ಈ ರಕ್ಷಣಾ ಕಾರ್ಯಕ್ಕೆ ಏನೇನು ವ್ಯವಸ್ಥೆಗಳನ್ನು ಮಾಡಬೇಕು, ಯಾವ್ಯಾವ ರೀತಿ ಯುದ್ಧಸಾಮಗ್ರಿಗಳನ್ನು ಪಡೆದು ಯುದ್ಧ ಮಾಡಬಹುದು, ಯಾವ್ಯಾವ ರೀತಿಯಲ್ಲಿ ಜನಗಳನ್ನು ಸಂಘಟಿಸಬೇಕು, ಜನಗಳಲ್ಲಿ ಶ್ರದ್ಧೆ ಮತ್ತು ಒಕ್ಕೂಟವನ್ನುಂಟುಮಾಡಬೇಕೆಂಬುದು ಬಹಳ ಮುಖ್ಯವಾದುದು. ಇವುಗಳನ್ನೆಲ್ಲಾ ಆಲೋಚನೆ ಮಾಡುವ ಜವಾಬ್ದಾರಿ ನಮ್ಮ ಪಾಲಿಗೂ ಬಂದಿದೆ ಮತ್ತು ಸರ್ಕಾರದ ಪಾಲಿಗೂ ಬಂದಿದೆ. ನಮಗೆ ಜಯಗಳಿಸುತ್ತೇವೆಂಬ ನಂಬಿಕೆಯೂ ಇದೆ. ಬಹು ಜಾಗರೂಕತೆಯಿಂದ ತಮ್ಮ ದಾರಿಯನ್ನು ಅವರು ಹಿಡಿಯುತ್ತಿದ್ದಾರೆ. ಆದ್ದರಿಂದ ಈ ಸಮಯದಲ್ಲಿ ನನ್ನ ಪೂರ್ಣ ಭರವಸೆ ಎಂದರೆ ಎಲ್ಲಾ ಜನಾಂಗದವರ ಮತ್ತು ಎಲ್ಲಾ ದೇಶಗಳ ಸಹಕಾರ ಮತ್ತು ಸಹಾನುಭೂತಿ ಖಂಡಿತವಾಗಿ ಪೂರ್ಣವಾಗಿ ಸಿಕ್ಕುತ್ತದೆಂದು ಹೇಳಿ, ನನಗೆ ಇಷ್ಟು ಹೊತ್ತು ಈ ಸಭೆಯಲ್ಲಿ ಮಾತನಾಡಲಿಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಂಥ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†Sri L B. EIRJE (Khanapur).—[Spoke in Marathi].

[Mr. Speaker in the Chair]

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮಾನ್ಯ ಸಭಾಪತಿಗಳೇ, ಈಗಾಗಲೇ ನಮ್ಮ ಭೂಮಿಯಮೇಲೆ ಪರಕೀಯರು ನಡೆಸಿರುವ ಧಾಳಿಯ ವಿಚಾರವಾಗಿ ತಾವೂ ಮಾನ್ಯ ಮುಖ್ಯ ಮಂತ್ರಿಗಳೂ ಈ ಮಾನ್ಯ ಸಭೆಯ ಅನೇಕ ಮಾನ್ಯ ಸದಸ್ಯರೂ ಮಾತನಾಡುತ್ತಾ ಎಲ್ಲರೂ ಸರ್ವ ತ್ಯಾಗಕ್ಕೂ ಸಿದ್ಧರಾಗಿರಬೇಕು, ಈ ದೇಶದ ಮಾನಕ್ಕಾಗಿ, ಈ ದೇಶದ ಗೌರವಕ್ಕಾಗಿ ಈ ಭೂಮಿಗೆ ಬಂದಿರತಕ್ಕ ಕಳಂಕವನ್ನು ಕೊಡೆದುಹಾಕುವುದಕ್ಕೆ ನಾವೆಲ್ಲರೂ ಸರ್ವ ಸಿದ್ಧತೆಗಳನ್ನು ಮಾಡಬೇಕು ಎಂದು ಹೇಳಿದ್ದಾರೆ. ಈ ಸಭೆಯಲ್ಲಿ ಭಿನ್ನಾಭಿಪ್ರಾಯ ಇದ್ದರೆ ಒಂದೆರಡು ವಿಚಾರಗಳಲ್ಲಿ ಇರಬಹುದು. ಈ ಸಭೆಯಲ್ಲಿರತಕ್ಕ ಎಲ್ಲಾ ಮಾನ್ಯ ಸದಸ್ಯರ ಮನಸ್ಸಿನಲ್ಲಿಯೂ ಈ ಭೂಮಿಗೆ ಒದಗಿರತಕ್ಕ ಆಪತ್ತನ್ನು ದೂರಮಾಡಬೇಕು ಎನ್ನುವುದೊಂದೇ ಮಂತ್ರ. ಈ ದುರ್ಭರ ಸಮಯದಲ್ಲಿ ಇವೊತ್ತಿನ ದಿವಸ ಈ ಸಭೆ ಸೇರಿದೆ. ಯಾವ ಭೂಮಿ, ಯಾವ ರಾಜ್ಯ, ಯಾವ ದೇಶ ಬಹಳ ವರ್ಷಗಳ ಕಾಲ ಪರಕೀಯರ ಕೈಯ್ಯಲ್ಲಿದ್ದು ಮಹಾತ್ಮ ಗಾಂಧಿಯವರ ಶಾಂತಿ ಸಂಗ್ರಾಮದಲ್ಲಿ ಜಯವನ್ನು ಪಡೆಯಿತೋ, ಸ್ವಾತಂತ್ರ್ಯವನ್ನು ಪಡೆಯಿತೋ ಆ ದೇಶವನ್ನು ಸ್ವಾತಂತ್ರ್ಯವನ್ನು ಪಡೆದ 15 ವರ್ಷಗಳೊಳಗೇ ಮತ್ತೇ ಉತ್ತರದ ಗಡಿಯಲ್ಲಿ ಅಪಹರಣ ಮಾಡಬೇಕು, ಏನಾದರೂ ಮಾಡಿ ಇವರನ್ನು ತಮ್ಮ ಅಧೀನದಲ್ಲಿಟ್ಟುಕೊಳ್ಳಬೇಕು, ತಮ್ಮದೇ ಆದ ಒಂದು ರಾಷ್ಟ್ರವನ್ನು ಕಟ್ಟಬೇಕು ಎಂದು ಹೊರಟಿರತಕ್ಕ ಈ ಹಳದಿ ಬಣ್ಣದ ಜನ ಪವಿತ್ರವಾದ ಭಾರತ ಭೂಮಿಯ ಮೇಲೆ ಆಕ್ರಮಣಮಾಡಿ ಇವೊತ್ತಿನ ದಿವಸ 44 ಕೋಟಿ ಜನರನ್ನು ಹೊಡೆದೆಬ್ಬಿಸಿದ್ದಾರೆ.

5-00 P. M.

ಈ ದಿವಸ ನಮ್ಮ ದೇಶದ ಮೇಲೆ ದುರಾಕ್ರಮಣ ಮಾಡಿರುವವರಿಗೆ ನಾವು ಸರಿಯಾದ ಪಾಠ ಕಲಿಸಬೇಕಾದರೆ ಭಾಷಣಗಳು, ಸಭೆಗಳು, ಮೆರವಣಿಗೆಗಳು ಮುಂತಾದುವುಗಳನ್ನು ಮಾಡಿದರೆ ಸಾಲದು, ನಾವೆಲ್ಲರೂ ಕಾರ್ಯ ತತ್ಪರರಾಗಬೇಕು, ಯಾರ ಯಾರು ಯಾವ ಯಾವ ರಂಗಗಳಲ್ಲಿ ಎಷ್ಟೆಷ್ಟು ಕೆಲಸ ಮಾಡಬೇಕು ಎಂಬುದನ್ನರಿತು ಕಾರ್ಯೋನ್ಮುಖರಾಗಬೇಕು. ಇದನ್ನರಿತು ಶಿಸ್ತಿನಿಂದ ಕಾರ್ಯ ತತ್ಪರರಾದರೆ ಈಗ ನಮ್ಮ ದೇಶಕ್ಕೆ ಬಂದಿರುವ ಕುತ್ತು ದೂರವಾದೀತು. ನಮ್ಮ ಮಾನ್ಯ ಸ್ನೇಹಿತರು ಹೇಳಿದ ಹಾಗೆ ಭೂಮಿಯಲ್ಲಿ ಕೆಲಸ ಮಾಡುವ ರೈತ ಯೋಧರು, ಕಾರ್ಖಾನೆಗಳಲ್ಲಿ ಕೆಲಸಮಾಡುವ ಕಾರ್ಮಿಕ ಯೋಧರು ಮುಂತಾದವರು ದೇಶದ ಗೌರವ, ಹಿತ ಕಾಪಾಡಲು ಬಂದೂಕ ಹಿಡಿದು ಹಿಮಾಲಯದ ತಪ್ಪಲಲ್ಲಿ ಯುದ್ಧ ಮಾಡುತ್ತಿರುವ ಯೋಧರ ರಕ್ಷಣೆಗೆ, ಜೀವನಕ್ಕೆ ಬೇಕಾದ ಸಾಮಗ್ರಿಗಳನ್ನು ಒದಗಿಸಲು ಏನೇನ ಕೆಲಸ ಮಾಡಬೇಕೆಂಬುದನ್ನು ಅರಿತು ಅದರಂತೆ ಮಾಡಿದರೆ ಒಳಿತಾದೀತು. ಭಾಷಣಕ್ಕಿಂತ ಯುದ್ಧದಲ್ಲಿ ತೊಡಗಿರುವ ಜವಾನರ ಮತ್ತು ಅವರ ಹೆಂಡತಿ ಮಕ್ಕಳ ರಕ್ಷಣೆಗಾಗಿ ನಾವು ಮಾಡಬೇಕಾದ ಕೆಲಸವೇನೆಂಬುದನ್ನರಿತು ಅದರಂತೆ ಮಾಡುವುದು ಉತ್ತಮ. ಇವೊತ್ತಿನ ದಿವಸ ಅಂತರರಾಷ್ಟ್ರೀಯ ರಾಜಕೀಯದಲ್ಲೇನು ನಡೆಯುತ್ತಿದೆಯೆಂದು ಚರ್ಚೆ ಮಾಡುವುದಕ್ಕೆ ಅಧಿಕಾರವಿಲ್ಲ, ಮಾಡುವುದು ಸರಿಯಲ್ಲವೆಂದು ಅಧ್ಯಕ್ಷರು ಅಪ್ಪಣೆ ಕೊಡಿಸಿದ್ದನ್ನು ನಾನು ಒಪ್ಪುತ್ತೇನೆ. ಈಗ ನಮ್ಮ ದೇಶದ ಮಾನ ಮರ್ಯಾದೆ ಉಳಿಯಬೇಕು. ಅದಕ್ಕೆ ತಕ್ಕಂತೆ ರಕ್ಷಣಾ ಕಾರ್ಯದಲ್ಲಿ ಎಲ್ಲರೂ ಸಹಕರಿಸಬೇಕು. ಹಾಗೆ ಮಾಡದಿದ್ದರೆ ಈಗ ನಮಗೊದಗಿರುವ ಕಷ್ಟ ದೂರವಾಗುವುದಿಲ್ಲ ಎಂಬುದು ಖಚಿತ. ಚೀಣೀಯರ ದುರಾಕ್ರಮಣವನ್ನು ತಡೆಗಟ್ಟುವವರೆಗೂ ನಮಗೆ ತೊಂದರೆ ತಪ್ಪುವುದಿಲ್ಲ, ನಮ್ಮ ಆಸ್ತಿಪಾಸ್ತಿ, ಅಧಿಕಾರ ಯಾವುದೂ ಉಳಿಯುವುದಿಲ್ಲ. ಈ ದಿವಸ ಉತ್ತರದ ಗಡಿಯಲ್ಲಿ ಧಾಳಿ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಮಾಡುತ್ತಿರುವ ಶತ್ರುಗಳು ನಮ್ಮ ದೇಶಕ್ಕೆ ಬಂದರೆ ನಮ್ಮ ಸ್ಥಿತಿಗತಿ ಏನಾಗಬಹುದು, ಧನಕನಕಾದಿ ವಸ್ತುಗಳು, ವಾಹನಗಳ ಗತಿಯೇನಾಗಬಹುದು ಎಂದು ಸ್ವಲ್ಪ ದೀರ್ಘವಾಗಿ ಯೋಚನೆ ಮಾಡಬೇಕು. ಬಚ್ಚಿಟ್ಟಿರುವವರು ಈಗೇನು ಕೊಡುತ್ತಿದ್ದಾರೆಂಬುದನ್ನು ಗಮನಿಸಿದರೆ ಸಾವಿರ ರೂಪಾಯಿಗಳನ್ನು ಕೊಡಲು ಶಕ್ತಿಯಿರುವವರು ಕೇವಲ ಕೆಲವು ನೂರು ರೂಪಾಯಿಗಳನ್ನು ಕೊಡುತ್ತಿದ್ದಾರೆ, ಅಲ್ಪಸ್ವಲ್ಪ ಬಂಗಾರವನ್ನು ಮಾತ್ರ ಪಾವತಿಮಾಡುತ್ತಿದ್ದಾರೆ ಎಂದರೆ ಅವರಿಗಿಂತ ದೇಶದ್ರೋಹಿಗಳು ಬೇರೆ ಇಲ್ಲ. ಹೆಚ್ಚು ಹಣವಿರುವ ಶ್ರೀಮಂತರು ದೇಶ ರಕ್ಷಣೆಗಾಗಿ ಅಲ್ಪಸ್ವಲ್ಪ ಹಣ ಮಾತ್ರ ನೀಡುತ್ತಿದ್ದಾರೆ. ಬಡವರು ತ್ಯಾಗಮಾಡಿ ಬಲದಾನದಿಂದ ಶಕ್ತಿ ಮೀರಿ ಸಹಾಯ ನೀಡುತ್ತಿರುವಾಗ, ಮುಂದೆ ಒಂದು ಉತ್ತೇಜನ ಕೊಡುತ್ತಿರುವಾಗ ಶ್ರೀಮಂತರು ಒಂದು ವೇಳೆ ಧಾರಾಳವಾಗಿ ತಮ್ಮ ಶಕ್ತಿಗೆ ತಕ್ಕಂತೆ ಸಹಾಯ ಮಾಡದಿದ್ದರೆ ಅವರಲ್ಲಿರುವ ಹಣವನ್ನು ಕಿತ್ತುಕೊಳ್ಳಲು ಅಂತರ್ಯುದ್ಧ ನಡೆಯಬೇಕಾದ ಕಾಲ ಬಂದೀತು ಎಂಬುದು ಸ್ಪಷ್ಟವಾಗಿದೆ. ಏಕೆಂದರೆ ಈ ದಿವಸ ಉದಾರವಾಗಿ ಧನ ಸಹಾಯ ವಗೈರೆ ಸುಲಲಿತವಾಗಿ ಬಾರದಿದ್ದರೆ, ಶ್ರೀಮಂತರಲ್ಲಿರುವ ಹಣ, ಬಂಗಾರ ಮುಂತಾದ ಯುದ್ಧಕ್ಕೆ ಬೇಕಾದ ವಸ್ತುಗಳನ್ನು ಅವರಿಂದ ಬಲಾತ್ಕಾರವಾಗಿ ವಸೂಲು ಮಾಡಬೇಕಾದ ಕಾಲ ಬಂದೀತು ಎಂದು ಒಂದು ದಿನ ಮುಖ್ಯ ಮಂತ್ರಿಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಈ ವಿಷಯವನ್ನು ನಾನಾದರೂ ಒಪ್ಪುತ್ತಿದ್ದೇನೆ. ಅಲ್ಲೊಬ್ಬರು ಇಲ್ಲೊಬ್ಬರು ಶ್ರೀಮಂತರು ನಮ್ಮ ದೇಶದಲ್ಲಿ ಹಣ ಕೊಟ್ಟಿರಬಹುದು; ಬಡವರೇ ಹೆಚ್ಚಾಗಿ ಕೊಟ್ಟತಕ್ಕವರು ಎಂದು ಶ್ರೀಮಾನ್ ಅಪ್ಪಣ್ಣನವರು ಹೇಳಿದರು. ಶ್ರೀಮಂತರು ಮುಂದೆ ಬರಬೇಕು; ಇಲ್ಲದಿದ್ದರೆ, ಇದೇ ರೀತಿ ಅವರು ಮುಂದುವರೆದರೆ ಅವರ ಆಸ್ತಿಪಾಸ್ತಿ, ಹಣ ಇವೆಲ್ಲಕ್ಕೂ ಕೂಡ ವಿಪತ್ತು ಬರುತ್ತದೆ. ಅದಕ್ಕಾಗಿ ಈ ದೇಶದಲ್ಲಿರುವ ಶ್ರೀಮಂತರು ಅವರ ವ್ಯವಹಾರ ನಡೆಸಲು ಎಷ್ಟು ಬೇಕೋ ಅಷ್ಟನ್ನು ಮಾತ್ರ ಉಳಿಸಿಕೊಂಡು ಉಳಿದ ಹಣವನ್ನು ಯಾವುದಾದರೂ ರೂಪದಲ್ಲಿ ಸರ್ಕಾರಿ ಖಜಾನೆಗೆ ತುಂಬಬೇಕು ಎಂದು ತಮ್ಮ ಮೂಲಕ ಅವರಲ್ಲಿ ಸವಿನಯ ಪ್ರಾರ್ಥನೆ ಮಾಡುತ್ತೇನೆ. ದೇಶದ ಮಾನ ಮರ್ಯಾದೆಯನ್ನುಳಿಸಲೋಸುಗ ಹೋರಾಡುತ್ತಿರುವ ಹಿಂದೂಸ್ಥಾನದ ಪ್ರಧಾನಿ ಜವಾಹರಲಾಲ್ ನೆಹ್ರೂರವರಿಗೆ ಎಲ್ಲ ಸಹಕಾರವನ್ನೂ ಕೊಡಬೇಕೆಂದು ಈ ದೇಶದ ಜನರಲ್ಲಿ ವಿನಂತಿ ಮಾಡುತ್ತೇನೆ.

ಎಲ್ಲರೂ ಮಿತವ್ಯಯ. ಮಾಡಬೇಕು, ಉಳಿತಾಯ ಮಾಡಬೇಕು ಎಂದು ಹೇಳುವುದನ್ನು ನಾವೆಲ್ಲಾ ಭಾಷಣಗಳಲ್ಲಿ ಕೇಳುತ್ತಿದ್ದೇವೆ, ಪತ್ರಿಕೆಗಳಲ್ಲಿ ಓದುತ್ತಿದ್ದೇವೆ. ಈ ಸಂಬಂಧದಲ್ಲಿ ನಾನು ಸರ್ಕಾರದಲ್ಲಿ ವಿನಯವಾಗಿ ಪ್ರಾರ್ಥನೆ ಒಂದನ್ನು ಸಲ್ಲಿಸುತ್ತಿದ್ದೇನೆ. ನಮ್ಮ ದೇಶದ ಮಂತ್ರಿ ಮಂಡಲ ಇಷ್ಟು ದೊಡ್ಡದು ಬೇಡ, ಕೆಲವರು ರಾಜೀನಾಮೆ ಕೊಡಬೇಕು ಎಂದು ನಾನು ಹೇಳುವುದಿಲ್ಲ. ದೇಶ ಪ್ರೇಮ ಮತ್ತು ತ್ಯಾಗವನ್ನು ತೋರಿಸಲು ಈಗ ಸಕಾಲ ಒದಗಿದೆ, ಹಣ ಉಳಿಸಿ ದೇಶದ ರಕ್ಷಣಾಕಾರ್ಯಕ್ಕೆ ಅದನ್ನು ಒದಗಿಸಬೇಕಾಗಿದೆ. 25 ಜನ ಮಂತ್ರಿಮಂಡಲವಿದೆ, ದೊಡ್ಡದು, ಕೆಲವರು ರಾಜೀನಾಮೆ ಕೊಡಬೇಕು ಎಂದು ಹೇಳಿದರೆ, ಯಾರಿಗೆ ರಾಜೀನಾಮೆ ಕೊಡಬೇಕೆಂದು ಹೇಳಬೇಕು ಎಂಬ ವಿಚಾರದಲ್ಲಿ ಮುಖ್ಯ ಮಂತ್ರಿಗಳಿಗೆ ಸಂಶಯ ಬರುತ್ತದೆ. ಆದುದರಿಂದ ಮಂತ್ರಿಗಳು ತಾವಾಗಿಯೇ ಮುಂದೆ ಬಂದು ಖರ್ಚನ್ನುಳಿಸಲು ನಾನು ಮಂತ್ರಿಪದವಿ ಬಿಟ್ಟು ಕೊಡುತ್ತೇನೆ ಎಂದು ಹೇಳಿದರೆ ಒಂದು ದೊಡ್ಡ ತ್ಯಾಗ ಮಾಡಿದಂತಾಗಿ ದೇಶಕ್ಕೆ ಮಾರ್ಗದರ್ಶನ ಮಾಡಿದಂತಾಗುತ್ತದೆ. ಇಡೀ ದೇಶವೇ ಮೆಚ್ಚುತ್ತದೆ. ಹೀಗೆ ಮಾಡುವುದು ಯೋಗ್ಯ. ಹೀಗೆ ಮಾಡಿದರೆ ಉಳಿತಾಯದ ದೃಷ್ಟಿಯಿಂದ ಒಳ್ಳೆಯದಾಗಬಹುದೆಂಬ ದೃಷ್ಟಿಯಿಂದ ನಾನು ಇದನ್ನು ಹೇಳುತ್ತಿದ್ದೇನೆ.

ಶ್ರೀ ಮಾದೇಗೌಡರು ಹೇಳಿದ ಹಾಗೆ ನಮ್ಮಲ್ಲಿ ದೇಶದ್ರೋಹಿಗಳಿದ್ದಾರೆ, ಮೀರ್ ಸಾದಕ್‌ರಂಥವರಿದ್ದಾರೆ. ಟಿಪ್ಪುಸುಲ್ತಾನರ ಕಾಲದಲ್ಲಿ ದ್ರೋಹವೆಸಗಿದಂಥ ಮೀರ್ ಸಾದಕ್‌ನಂತೆ ಕೆಲ ದ್ರೋಹಿಗಳಿದ್ದಾರೆ. ಅವರನ್ನು ಕೇಂದ್ರ ಸರ್ಕಾರದವರು ಮತ್ತು ರಾಜ್ಯ ಸರ್ಕಾರದವರು ಬುದ್ಧಿವಂತಿಕೆಯಿಂದ ಈಗಾಗಲೆ ಬಂಧಿಸುತ್ತಿದ್ದಾರೆ. ಇದು ಸ್ವಾಗತಾರ್ಹವಾದುದು. ಅಂಥವರನ್ನು ಹಿಡಿದು ಬಂದೀಖಾನೆಗಳಲ್ಲಿಡದಿದ್ದರೆ ದೇಶದಲ್ಲಿ ಪ್ರಾಪ್ತವಾಗಿರುವ ಕುತ್ತು ದೊಡ್ಡದಾಗುತ್ತದೆ. ದೇಶದ್ರೋಹಿಗಳು ಯಾರೇ ಆಗಿರಲಿ, ಎಷ್ಟೇ ದೊಡ್ಡವರಾಗಲಿ ಅವರನ್ನು ಹಿಡಿದು ಬಂದೀಖಾನೆಗಳಲ್ಲಿಡಬೇಕು. ಬೇವಿನ ಚಕ್ಕೆಯ ವಿಷ ಏನು ಮಾಡಿದರೂ ಹೋಗುವುದಿಲ್ಲ. ದ್ರೋಹಿಗಳನ್ನಡಗಿಸದಿದ್ದರೆ ಅವರಿಂದ ದೇಶಕ್ಕೆ ತೊಂದರೆಯಾಗಬಹುದು. ಅವರನ್ನು ಮೊದಲೇ ದೂರವಿಟ್ಟಿದ್ದರೆ ಚೆನ್ನಾಗಿತ್ತು. ಈಗಲಾದರೂ ಗಮನಿಸಿ ಸೂಕ್ತಕ್ರಮ ಕೈಕೊಂಡಿರುವುದು ಸರಿಯಾದ ಮಾರ್ಗವಾಗಿದೆ. ಇಂದು ಭಾರತ ಮಾತೆಯ 44 ಕೋಟಿ ಜನರು ಎಚ್ಚೆತ್ತಿದ್ದಾರೆ. ಚೀಣೀಯರು ಅಧಿಕ ಸಂಖ್ಯೆಯಲ್ಲಿದ್ದರೂ ಸಹ ಅವರು ಬೀದಿ ಬಿಕಾರಿಗಳಂತಿದ್ದಾರೆ. ಅವರಿಗೆ ತಿನ್ನುವುದಕ್ಕೆ ಅನ್ನವಿಲ್ಲ. ಒಂದು ಊಟಕ್ಕೆ ಅವರು 4-5 ಡಾಲರ್ ಸಂಪಾದನೆ ಮಾಡಬೇಕಾಗಿದೆ. ಇಡೀ ಹಿಂದೂಸ್ಥಾನದಲ್ಲಿರುವ 44 ಕೋಟಿ ಜನತೆಗೆ ಅವರು ಸರಿಸಮರಲ್ಲ.

[MR. DEPUTY SPEAKER in the Chair]

ಯಾರು ನಮಗಾಗಿ ಪ್ರಾಣಾರ್ಪಣೆ ಮಾಡಿದ್ದಾರೋ ಅಂಥವರ ಹೆಂಡತಿ ಮಕ್ಕಳಿಗೆ ಸಹಾಯ ಮಾಡದೆ ಅವರನ್ನು ಕಾಡುಪಾಲುಮಾಡಿದರೆ, ಅವರಲ್ಲಿ ಕನಿಕರವಿಲ್ಲವೆಂದು ಹೇಳಿದರೆ, ಅಂಥವರೂ ಕೂಡ ಕಾಡುಪಾಲಾಗುತ್ತಾರೆ. ಅಲ್ಲದೆ ನಮ್ಮ ಪುಣ್ಯ ಭೂಮಿಯ ಹೆಸರಿಗೂ ಕಳಂಕ ಬರುತ್ತದೆ ಆದುದರಿಂದ ಅಧ್ಯಕ್ಷರ ಮೂಲಕ ದೇಶದ ಜನತೆ ಮತ್ತು ಮಾನ್ಯ ಸದಸ್ಯರಲ್ಲಿ ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಈ ಸಂಬಂಧವಾಗಿ ರಾಜ್ಯ ಸರ್ಕಾರ ಏನೇನು ಕಾರ್ಯಕ್ರಮ ಕೈಗೊಳ್ಳಬೇಕೋ ಎಲ್ಲವನ್ನೂ ಕೈಕೊಳ್ಳಲಿ, ದೇಶವನ್ನು ರಕ್ಷಣೆ ಮಾಡತಕ್ಕ ವಿಷಯದಲ್ಲಿ ಕಾರ್ಯಕ್ರಮ ಕೈಕೊಳ್ಳುವುದರಲ್ಲಿ ಸರ್ಕಾರ ಸ್ವಲ್ಪ ಎಡವಿರಬಹುದು, ತಪ್ಪಿರಬಹುದು, ಆದರೆ ಏನನ್ನೂ ಮಾಡಿಲ್ಲವೆಂದು ನಾನು ಹೇಳುವುದಿಲ್ಲ. ವಿರೋಧಪಕ್ಷದ ನಾಯಕರು ಏನು ಹೇಳಿದರೋ ಅದೇರೀತಿ ರಾಷ್ಟ್ರ ರಕ್ಷಣೆಗೆ ಸರ್ಕಾರದೊಡನೆ ನಾವೆಲ್ಲರೂ ಸಹಕರಿಸುತ್ತೇವೆ. ರಾತ್ರಿ ಹಗಲು ದುಡಿಮೆ ಮಾಡುವುದಕ್ಕೆ ಸಿದ್ಧರಾಗಿದ್ದೇವೆ. ಸುಮ್ಮನೆ ಮಾತನಾಡುವುದಲ್ಲ, ನಾವು ರಣರಂಗಕ್ಕೆ ಹೋಗಿ ಪ್ರಾಣಾರ್ಪಣೆ ಮಾಡಬೇಕೆಂದರೂ ಅದನ್ನು ಮಾಡುತ್ತೇವೆ. ಈ ದೇಶದ ರಕ್ಷಣೆ, ಈ ದೇಶದ ಮಾನರಕ್ಷಣೆಗಾಗಿ ತ್ಯಾಗ ಹಾಗೂ

ಬಲಿದಾನಮಾಡಿ ಸ್ವಾತಂತ್ರ್ಯಪಡೆದು, ಹದಿನೈದು ವರ್ಷಗಳಿಂದ ಸ್ವಾತಂತ್ರ್ಯವನ್ನನುಭವಿಸಿದೆವು. ಗೌರಿ ಶಂಕರ ಶಿಖರದಮೇಲೆ ಹಾರಾಡುವ ತ್ರಿವರ್ಣಧ್ವಜ ಇಳಿದರೆ, 44 ಕೋಟಿ ಜನ ಭಾರತೀಯರಿದ್ದೇನು ಪ್ರಯೋಜನ ? ಧನಕನಕ ವೆಷ್ಟಿದ್ದರೇನು ಪ್ರಯೋಜನ ? ಯಾವ ಪುಣ್ಯ ಭೂಮಿಯಲ್ಲಿ ರಾಮ, ಬುದ್ಧ, ಬಸವಣ್ಣ, ಮಹಾತ್ಮಾ ಗಾಂಧಿ ಜನಿಸಿದರೋ ಆ ನಮ್ಮ ಪುಣ್ಯ ಭೂಮಿಯಲ್ಲಿ ವೀರ ಯೋಧರಂತೆ, ಶಾಂತಿ ದೂತರಂತೆ ಕೆಲಸ ಮಾಡೋಣ. ಆದರೆ ಸಮಯ ಬಂದರೆ ರಾಮ ರಾವಣನೊಡನೆ ಯುದ್ಧಮಾಡಿದಂತೆ ಚೀಣೀಯರೊಡನೆ ಅವರ ವಿರುದ್ಧ ಯುದ್ಧಮಾಡಿ, ಗೆಲ್ಲೋಣ. ಇಂಥ ಸಮಯದಲ್ಲಿ ನಮ್ಮೂರಿಗೆ ಸಬ್ ಓವರ್ಸಿಯರಿಲ್ಲ, ದೀಪ ಇಲ್ಲ, ರಸ್ತೆ ಇಲ್ಲ ಎಂದು ಹೇಳಬಾರದು. ಹದಿನೈದು ದೀಪವಿರಬೇಕಾದ ಕಡೆ ಏಳೇ ಸಾಕು, ನಾಲ್ಕು ಕಾರಿಲ್ಲದಿದ್ದರೆ ಎರಡೇ ಸಾಕು. ಯುದ್ಧ ಸಿದ್ಧತೆಗೆ ಆಹಾರ, ರೈಲುಮಾರ್ಗ, ಕಾರು ಜೀಪುಗಳು ಮುಂತಾದುವು ಅಗತ್ಯ. ಈ ಎಲ್ಲವನ್ನೂ ಸರ್ಕಾರ ಕೊಟ್ಟು ಯುದ್ಧವನ್ನು ಗೆಲ್ಲುವಷ್ಟು ಹಣ ಶೇಖರಣೆಯಾಗದೇಯಿರುವುದರಿಂದ, ನಾವೆಲ್ಲರೂ ತ್ಯಾಗ ಮಾಡಬೇಕು. ಮನೆ ಮನೆಗೂ ನಾವು ಹೋಗಿ ಯುದ್ಧಕ್ಕಾಗಿ ನಿಧಿಯನ್ನು ಶೇಖರಿಸಬೇಕು. ಕೆಲವರು ಹಣ ಶೇಖರಣೆ ಮಾಡಿ ತಮ್ಮ ಬೊಕ್ಕಸಕ್ಕೆ ಹಾಕಿದ್ದಾರೆ ಎಂದು ಹೇಳಿದರು. ಇದು ನಿಜವಿರಬಹುದು. ಹೀಗೆ ಬರುವವರಿಗೆಲ್ಲ ಜನರು ಹಣ ಕೊಡಬಾರದು, ರಶೀದಿ ತೆಗೆದುಕೊಂಡು ಹಣ ಕೊಡಬೇಕು ಎಂದು ಜನರಿಗೆ ಸರ್ಕಾರದವರು ಎಚ್ಚರಿಕೆ ಕೊಟ್ಟಿದ್ದಾರೆ. ಆದುದರಿಂದ ಸರ್ಕಾರವನ್ನು ಈ ಸಂದರ್ಭದಲ್ಲಿ ನಿಂದನೆ ಮಾಡುವ ಅಗತ್ಯವಿಲ್ಲ. ರಾಷ್ಟ್ರ ರಕ್ಷಣೆಯ ವಿಷಯದಲ್ಲಿ ಈ ಮಾತನ್ನು ಹೇಳುತ್ತಿದ್ದೇನೆ. ಭಾರತ ಸರ್ಕಾರದವರು ಈ ಸಂಬಂಧದಲ್ಲಿ ಏನು ಮಾಡಿದ್ದಾರೆಂಬುದನ್ನು ಪತ್ರಿಕೆಗಳಲ್ಲಿ ನೋಡುತ್ತಿದ್ದೇವೆ. ರಕ್ಷಣಾ ಕಾರ್ಯದಲ್ಲಿ ಭಾರತ ಸರ್ಕಾರ ತಪ್ಪುಮಾಡಿದ್ದರೆ, ಈ ಕಾರ್ಯದಲ್ಲಿ ಅವರು ವಿಮುಖರಾಗಿದ್ದರೆ, ಶತ್ರುಗಳು ಅಸ್ಸಾಮಿನ ಎಣ್ಣೆಯ ಗಣಿಗಳ ಮೂಲಕ ದೆಹಲಿಗೆ ಬಂದುಬಿಡುತ್ತಿದ್ದರು. ಆದರೆ ನಮ್ಮ ಭಾರತ ಸರ್ಕಾರದ ಕಾರ್ಯಕ್ರಮಗಳ ಫಲವಾಗಿ ಈ ಹೊತ್ತು ನಮ್ಮ ಶತ್ರುಗಳು ಮೋಸದ ಜಾಡು ಹಿಡಿದು ತಾವು ವಾಪಸು ಹೋಗುತ್ತೇವೆಂದು ಹೇಳಿದ್ದಾರೆ. ಯಾರೂ ಕಂಡಿಲ್ಲದ, ಯಾರಿಗೂ ತಿಳಿಯದೇಯಿರುವ ಗೆರೆಯನ್ನು ನೀವು ಹುಡುಕಿ ಎಂದು ಹೇಳುತ್ತಿದ್ದಾರೆ. ಈ ಮೋಸದ ಮಾತಿಗೆ ಉತ್ತರವಾಗಿ ದಿಟ್ಟತನದ ಹೇಳಿಕೆಯನ್ನು ನಮ್ಮ ಪ್ರಧಾನಿ ನೆಹರೂ ಅವರು ಕೊಟ್ಟಿದ್ದಾರೆ. ಅವರ ಬೆದರಿಕೆಗೆ ನಾವು ಮಣಿಯುವುದಿಲ್ಲ, ಅವರು ಹೇಳುವುದಕ್ಕೆ ನಾವು ಒಪ್ಪುವುದಿಲ್ಲ ಎಂದು ಹೇಳಿದ್ದಾರೆ. ಭಾರತ ಸರ್ಕಾರವನ್ನು ಟೀಕೆ ಮಾಡಬೇಕಾದರೆ ಬೇರೆ ಮಾರ್ಗವಿದೆ, ಅದು ಈ ಸಂದರ್ಭದಲ್ಲಲ್ಲ. ಅವರು ಸೂಕ್ತ ಕ್ರಮವನ್ನು ಕೈಕೊಳ್ಳದಿದ್ದರೆ, ಯಾರಕೈಲಿ ರಕ್ಷಣಾ ಖಾತೆ ಇತ್ತೋ ಅವರಿಂದ ಅದನ್ನು ತೆಗೆಯುತ್ತಿರಲಿಲ್ಲ, ಕಮಾಂಡರ್ ಇನ್ ಚೀಫ್ ಕೈಲಿದ್ದ ರಕ್ಷಣೆಯನ್ನು ಅವರಿಂದ ತೆಗೆಯುತ್ತಿರಲಿಲ್ಲ. ದೇಶದ ಮಾನ ಮತ್ತು ಗೌರವವನುಳಿಸಬೇಕೆಂದು ಬಹಳ ಬುದ್ಧಿವಂತಿಕೆಯ ತೀರ್ಮಾನ ಮಾಡಿದ್ದಾರೆ. ಅವರು ತಮ್ಮ ಪಕ್ಷದ ಜನರಿಗೆ ರಕ್ಷಣೆ ಕೊಟ್ಟಿರಬಹುದು, ಆದರೆ ದೇಶವನ್ನು ಕಾಪಾಡುವುದರಲ್ಲಿ ಎಲ್ಲಕ್ಕಿಂತ ಮುಂದಿದ್ದಾರೆ. ಮೈಸೂರು ದೇಶದ ಎರಡೂಕಾಲು ಕೋಟಿ ಜನರು ಪ್ರಧಾನ ಮಂತ್ರಿ ನೆಹರೂ ಅವರ ಹಿಂದಿದ್ದಾರೆ. ಮೈಸೂರು ಸರ್ಕಾರ ಇನ್ನೂ ಯೋಚನೆ ಮಾಡಬೇಕಾದದ್ದಿದೆಯೆಂದು ನನಗನಿಸುತ್ತದೆ. ಪ್ರಪಂಚದ ರಾಜಕೀಯ ದೃಷ್ಟಿಯಿಂದ ಯೋಚನೆ ಮಾಡುವುದು ದೆಹಲಿ ಸರ್ಕಾರ ಒಂದೇ ಅಲ್ಲ, ಮೈಸೂರು ಸರ್ಕಾರವೂ ಯೋಚನೆಮಾಡಿ, ದೆಹಲಿ ಸರ್ಕಾರಕ್ಕೆ ಸಲಹೆಮಾಡಲು ಅವಕಾಶವಿದೆ. ಒಂದುಕಡೆ ಪ್ರಜಾಪ್ರಭುತ್ವವಿರಬೇಕು, ಜನರು ಹೇಳಿದಂತೆ ರಾಜ್ಯವನ್ನಾಳಬೇಕೆಂದು ಇಚ್ಛಿಸುವ ಪಕ್ಷವಿದೆ. ಇನ್ನೊಂದುಕಡೆ, ರಾಕ್ಷಸೀಕೃತ್ಯದಿಂದ ತಾವು ದಶಕಂಠ ರಾವಣನಂತೆ, ಶತಕಂಠ ರಾವಣನಂತೆ ರಾಜ್ಯವನ್ನಾಳಬೇಕೆಂದು ಬಯಸುವ ಕಮ್ಯುನಿಸ್ಟ್ ಪಕ್ಷವಿದೆ. ಇದನ್ನು ಅರಿವು ಮಾಡಿಕೊಳ್ಳುವ ಶಕ್ತಿ ರಾಜ್ಯಸರ್ಕಾರಕ್ಕಿದೆ. ಇದನ್ನು ಕೇಂದ್ರಕ್ಕೆ ತಿಳಿಸಲು ನಮ್ಮ ರಾಜ್ಯದ ಪ್ರತಿನಿಧಿಗಳು ನ್ಯಾಷನಲ್ ಡಿಫೆನ್ಸ್ ಕೌನ್ಸಿಲ್‌ನಲ್ಲಿದ್ದಾರೆ, ಅವರು ತಿಳಿಸಬಹುದು. ಆದುದರಿಂದ ಅಲಕ್ಷ್ಯದಿಂದ ಭಾರತ ಸರ್ಕಾರವನ್ನು ಟೀಕೆ ಮಾಡುವುದು ಸಾಧುವಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಈ ಸಂದರ್ಭದಲ್ಲಿ ಜೈಲಿಗೆ ಹೋಗುವ ಸಂಭವವಿಲ್ಲವೆಂದು ಶ್ರೀಮಾನ್ ಅಪ್ಪಣ್ಣನವರು ಹೇಳಿದರು. ಜೈಲಿಗೆ ಹೋಗುವವರು ದೇಶದ್ರೋಹಿಗಳು, ಮಾತೃದ್ರೋಹಿಗಳು, ಕಮ್ಯುನಿಸ್ಟರನ್ನು ಕಳುಹಿಸಬೇಕು. ಮಿಕ್ಕವರು ಯುದ್ಧ ಮಾಡುವವರಿಗೆ ರಕ್ಷಣೆ ಕೊಡುವುದಕ್ಕೆ ಹೋಗಬೇಕು. ಆದುದರಿಂದ ಅವರು ಹೇಳಿದದರಲ್ಲಿ ನಾನು ಸಂಪೂರ್ಣ ಭಾಗಿಯಾಗಿದ್ದೇನೆ.

ಅಮೆರಿಕ ಮತ್ತು ಬ್ರಿಟನ್ ಜನರು ಏನೇ ವ್ಯಾಪಾರಸ್ಥರಿರಲಿ, ಅವರಲ್ಲೇನೆ ಕುಟಿಲವಿರಲಿ, ಈಗ ನಮಗೆ ಬಂದಿರತಕ್ಕ ಕಷ್ಟವನ್ನು ನೋಡಿ, ಭಾರತಕ್ಕೆ ಕಷ್ಟ ಬಂದಿದೆ, ಭಾರತೀಯರು ಯೋಗ್ಯರು, ಉತ್ತಮರು, ಪ್ರಪಂಚದಲ್ಲಿ ಈ ಜನಾಂಗ ಇರಬೇಕು ಎಂದು ಹೇಳಿ, ಈ ದಿವಸ ನಾವೇನು ಕೇಳಿದರೂ, ಎಷ್ಟು ಸಹಾಯ ಕೇಳಿದರೂ ಕೊಡುತ್ತೇವೆ ಎಂದು ಮುಂದೆ ಬಂದಿದ್ದಾರೆ. ನಿಜವಾಗಿಯೂ ಅಮೆರಿಕ ಮತ್ತು ಗ್ರೇಟ್‌ಬ್ರಿಟನ್ ಮತ್ತಿತರ ರಾಷ್ಟ್ರಗಳ ಈ ಔದಾರ್ಯವನ್ನು ನಾವು ಮರೆಯುವುದಕ್ಕಾಗುವುದಿಲ್ಲ. ಒಂದು ಕಾಲದಲ್ಲಿ ಬ್ರಿಟಿಷರು ನಮ್ಮ ದೇಶವನ್ನು ತಮ್ಮ ಕೈಲಿಟ್ಟುಕೊಂಡಿದ್ದರು. ಆಗ ಅವರ ಫೋಟೋಗಳನ್ನು ಸುಟ್ಟೆವು, ಅವರ ವಿರುದ್ಧ ಹೋರಾಡಿದೆವು. ಆದರೂ ಯಾವ ದೇಶವನ್ನು ಅವರು ಬಿಟ್ಟು ಹೋದರೋ ಅಂಥ ದೇಶದ ಮೇಲೆ ಪ್ರೇಮವನ್ನಿಟ್ಟು ಅದಕ್ಕೆ ಸಹಾಯವನ್ನೊದಗಿಸಲು ಮುಂದೆ ಬಂದಿದ್ದಾರೆ, ಈ ಸಭೆ ಅವರಿಗೆ ಕೃತಜ್ಞತೆಯನ್ನರ್ಪಿಸಬೇಕು. ಭಾರತದ ಜನರು ಅವರ ವಿಷಯದಲ್ಲಿ ಅಪಾರ ಅಭಿಮಾನದಿಂದಿರಬೇಕೆಂದು ನಾನು ತಿಳಿದುಕೊಂಡಿದ್ದೇನೆ. ನನ್ನ ಸ್ನೇಹಿತರು ನಮ್ಮ ದೇಶದ ಮುಖ್ಯ ಮಂತ್ರಿಗಳು ರಷ್ಯಾ ದೇಶದವರ ಒಂದು ಕತೆ ಹೇಳಿದರು. ಆ ದೇಶದ ವಿಷಯದಲ್ಲಿ ನನಗೆ ನಂಬಿಕೆ ಸಾಲದು. ಏಕೆಂದರೆ, ಈಚೆಗೆ ಒಂದು ವಿಷಯದಲ್ಲಿ ಅವರು ನಮ್ಮ ನಂಬಿಕೆಯನ್ನು ಕಳೆದುಕೊಂಡಿದ್ದಾರೆ. ಭಾರತದ ಪ್ರಧಾನಿಗಳು ಅವರಲ್ಲೇನು ನಂಬಿಕೆಯಿಟ್ಟಿದ್ದರೋ ಅದನ್ನು ಅವರು ಕಳೆದುಕೊಂಡಿದ್ದಾರೆ. ಎಂ. ಐ. ಜಿ. ಪ್ಲೇನ್‌ಗಳನ್ನು ಕೊಡುತ್ತೇವೆಂದು ಹೇಳಿ, ಈ ಹೊತ್ತು ಅವು ನಮಗೆ ಸಿಕ್ಕುವುದಿಲ್ಲವೆಂಬ ಸಮಾಚಾರವನ್ನು ಪತ್ರಿಕೆಗಳಲ್ಲಿ ನೋಡಿದರೆ, ಅವರು ನಮ್ಮ ದೇಶದ ವಿಷಯದಲ್ಲಿ ಎಷ್ಟು ಸಹಾನುಭೂತಿಯಿಂದಿದ್ದಾರೆ ಎನ್ನುವುದು ಗೊತ್ತಾಗುತ್ತದೆ. ಚೀಣಾ ಕಮ್ಯುನಿಸ್ಟರು ಮತ್ತು ರಷ್ಯಾ ಕಮ್ಯುನಿಸ್ಟರು ಬೇರೆಬೇರೆ ಎಂಬ ಭಾವನೆ ನನ್ನಲ್ಲಿಲ್ಲ, ಈಗತಾನೆ ಮಾರ್ಷಲ್ ಟಿಟೋ ಅವರು ಅಲ್ಲಿಗೆ ಹೋಗಿದ್ದಾರೆ, ಅವರು ಪ್ರಭಾವ ಬೀರಬಹುದು. ಡಾಂಗೆ ಅವರೂ ಮಾಸ್ಕೋಗೆ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಹೋಗುವವರಾಗಿದ್ದಾರೆ. "ನಾವು ಮೀರ್‌ಸಾದಕ್‌ನ ಹಾಗಿದ್ದೆವು, ಆದರೂ ನಮ್ಮ ದೇಶಕ್ಕೆ ಈಗ ಕಷ್ಟ ಬಂದಿದೆ, ಸಹಾಯ ಮಾಡಿ" ಎಂದು ಹೇಳಿದರೆ, ಏನಾದರೂ ಕೊಡುತ್ತಾರೋ ಏನೋ ನೋಡಬೇಕು. ಆದರೂ ಭಾರತದ 44 ಕೋಟಿ ಜನರಿಗೆ ಕೊಟ್ಟಿದ್ದ ಮಾತನ್ನು ರಷ್ಯಾದವರು ಮುರಿದಿದ್ದಾರೆ. ಆದುದರಿಂದ, ಅವರಿಂದ ನಮಗೆ ಸಹಾಯ ಬರುತ್ತದೆಯೋ ಇಲ್ಲವೋ ಗೊತ್ತಿಲ್ಲ. ರಷ್ಯಾ ಚೀಣಾ ಸೇರಬೇಕೆಂಬ ಭಾವನೆಯನ್ನು ಇಟ್ಟುಕೊಂಡು ಅವರ ಕಡೆಯೇ ಸೇರಬಹುದು. ಆದುದರಿಂದ ನಾವು ಸರ್ವ ಸಿದ್ಧತೆಯಿಂದಿರಬೇಕು.

ಸ್ವಾಮಿ, ಈ ಸಂದರ್ಭದಲ್ಲಿ ಹೆಚ್ಚು ಆಹಾರೋತ್ಪಾದನೆ, ಹೆಚ್ಚುಕಾಲ ಕೆಲಸಮಾಡುವುದು, ಹೆಚ್ಚು ಮಿತವ್ಯಯ ಮಾಡುವುದು—ಇವೆಲ್ಲಾ ಆಗಬೇಕು. ಹೆಚ್ಚು ಆಹಾರ ಬೆಳೆಯಲಿಕ್ಕೆ ಶ್ರೀಮಾನ್ ನಿಜಲಿಂಗಪ್ಪನವರು ಹೇಳಿದ ಹಾಗೆ ಮೈನರ್ ಇರ್ರಿಗೇಷನ್ ಟೆಂಪೊ ಒಂದು ಬರುತ್ತದೆ ನಮ್ಮಲ್ಲಿರುವ ಹಣ ವಿಶೇಷವಾಗಿ ವೆಚ್ಚವಾಗಕೂಡದು. ರಸ್ತೆಗಳು ಮತ್ತು ಕಟ್ಟಡಗಳ ರಚನೆಯನ್ನು ಈ ಸದ್ಯಕ್ಕೆ ನಿಲ್ಲಿಸಿ ಬರೀ ಆಹಾರ ಬೆಳೆಯಲಿಕ್ಕೆ ಮತ್ತು ಯುದ್ಧ ಸಿದ್ಧತೆಗೋಸ್ಕರ ಮಾಡಬೇಕಾದ ಕೆಲಸಕಾರ್ಯಗಳನ್ನು ಕೈಗೊಳ್ಳುತ್ತೇವೆಂದು ಅವರು ಹೇಳಿರುವುದು ಸಾಧುವಾದುದಾಗಿದೆ. ಈ ವರ್ಷದ ಕೊನೆಯೊಳಗೆ ಇನ್ನೂ ಹೆಚ್ಚಿನ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುತ್ತೇವೆಂದು ಹೇಳಿದ್ದಾರೆ. ಅದು ಪ್ರಶಂಸನೀಯವಾದುದಾಗಿದೆ. ಹೆಚ್ಚು ಆಹಾರ ಬೆಳೆಯಲಿಕ್ಕೆ ಕಾರ್ಖಾನೆಗಳಲ್ಲಿ ಮತ್ತಷ್ಟು ಕಾಲ ಹೆಚ್ಚಿಗೆ ಕೆಲಸಮಾಡಲು ತ್ವರಿತವಾದ ಕ್ರಮಗಳನ್ನು ಈಗಾಗಲೇ ಕೈಗೊಳ್ಳುವುದನ್ನು ನೋಡಿದರೆ ಇಂಥಾದ್ದನ್ನು ಯಾರು ಮೆಚ್ಚುವುದಿಲ್ಲವೆಂದು ನಾನು ಪ್ರಶ್ನೆ ಮಾಡುತ್ತೇನೆ. ಆದರೆ ಈ ಸಂದರ್ಭದಲ್ಲಿ ಇಲ್ಲಿ ಮುಖ್ಯ ಮಂತ್ರಿಗಳಿಲ್ಲ. ಅದಕ್ಕೋಸ್ಕರ ನಾನು ಸರ್ಕಾರಕ್ಕೆ ಒಂದು ಪ್ರಾರ್ಥನೆಯನ್ನು ಮಾಡುತ್ತೇನೆ. ಮುಖ್ಯ ಮಂತ್ರಿಗಳೇ ಈ ದೇಶದ ರಕ್ಷಣಾ ಕೆಲಸವನ್ನು ಮಾಡಬೇಕು ಅವರಿಗೆ ಇನ್ನು ಯಾವ ಗೋಜೂ ಇರಬಾರದು ಜಿ. ಎ. ಡಿ. ಮತ್ತೊಂದು ಮಗದೊಂದು, ಸೂಪರ್ ವಿಷನ್, ದೆಹಲಿಗೆ ಹೋಗಬೇಕು, ಎಲೆಕ್ಟ್ರಿಸಿಟಿ ನೋಡಬೇಕು, ಮೈನರ್ ಇರ್ರಿಗೇಷನ್ ನೋಡಬೇಕು-ಇವೆಲ್ಲಾ ಅವರಿಗೆ ಬೇಡ. ಅವರೇ ನಿನ್ನೆ ದಿನ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ ಖಾತೆಗಳ ಪುನರ್ಹಂಚಿಕೆ ಮಾಡುತ್ತೇನೆಂದು. ಆದರೆ ಅವರಲ್ಲಿ ನನ್ನ ಒಂದು ಪ್ರಾರ್ಥನೆ ಏನೆಂದರೆ ಅವರಿಗಿರತಕ್ಕ ಮೈನರ್ ಇರ್ರಿಗೇಷನ್ನನ್ನು ಬೇರೆಯವರಿಗೆ ಕೊಡಲಿ. ಪಿ.ಡಬ್ಲ್ಯೂ.ಡಿ. ಅವರಿಗೆ ಈಗೇನೂ ಬಿಲ್ಡಿಂಗ್ಸ್, ರೋಡ್ಸ್ ಕೆಲಸ ಏನೇನೂ ಇಲ್ಲ. ಪಿ. ಡಬ್ಲ್ಯೂ. ಡಿ. ಅವರಿಗೆ ಮೈನರ್ ಇರ್ರಿಗೇಷನ್ ಕೆಲಸಗಳನ್ನು ಒಪ್ಪಿಸಿದರೆ ಆಗೇನಾದರೂ ಒಂದು ಟೆಂಪೊ ಬರಬಹುದು. ದೇಶದ ರಕ್ಷಣೆಯ ಕಡೆ ಮಾನ್ಯ ಮುಖ್ಯ ಮಂತ್ರಿಗಳು ಹೆಚ್ಚು ಗಮನ ಕೊಡಬೇಕು. ಯಾವ ಕೆರೆ ಕಟ್ಟಬಹುದು, ಯಾವ ಪಿಕಪ್ ಮಾಡಬಹುದು ಎಂಬ ಬಗ್ಗೆ ಪಿ. ಡಬ್ಲ್ಯೂ. ಡಿ. ಮಿನಿಸ್ಟರ್ ಹೆಚ್ಚು ಗಮನಕೊಡಬೇಕಾಗಿದೆ ಎಂಬುದಾಗಿ ನನ್ನ ಅಭಿಪ್ರಾಯ. ಆದರೆ ಖಾತೆಗಳ ಪುನರ್ಹಂಚಿಕೆಯಾಗುವಾಗ ದೇಶಕ್ಕೆ ಮುಖ್ಯವಾದ ರಕ್ಷಣಾ ಖಾತೆಯನ್ನು ಅವರು ಇಟ್ಟುಕೊಂಡು ಮಿಕ್ಕಿದ್ದನ್ನು ಬೇರೆಯವರಿಗೆ ಕೊಡುವುದು ಉಚಿತ. Save more ಎಂದು ಹೇಳುವಾಗ ಅದನ್ನು ಹೇಗೆ ಮಾಡುತ್ತೀರಿ ? ಎನ್. ಇ. ಎಸ್. ಮತ್ತು ಸಿ. ಡಿ. ಬ್ಲಾಕುಗಳನ್ನು ಮೊದಲು ನಿಲ್ಲಿಸಿ. ಇದರಷ್ಟು ದುರ್ವ್ಯಯ ಮತ್ತೊಂದು ಇಲ್ಲ. ರಾಷ್ಟ್ರ ರಕ್ಷಣೆ ಇಂಡಿಯಾ ಸರ್ಕಾರಕ್ಕೆ ಮಾತ್ರ ಬೇಕು, ಆದರೆ ಮೈಸೂರು ರಾಜ್ಯಕ್ಕೆ ಬೇಡ ಎಂದು ಹೇಳುವುದಕ್ಕಾಗುವುದಿಲ್ಲ. ಹೆಂಗಸರು ಒಲೆ ಹೇಗೆ ಇಡಬೇಕು, ತರಕಾರಿ ಹೇಗೆ ಹಚ್ಚಬೇಕು ಎಂಬ ಕ್ರಮಗಳು ಹಿಂದಿನ ರೀತಿಯಲ್ಲಿಯೇ ನಡೆದುಕೊಂಡು ಹೋದರೂ ಚಿಂತೆಇಲ್ಲ. ದೇಶಕ್ಕೆ ಬಂದಿರತಕ್ಕ ಸ್ವಾತಂತ್ರ್ಯ ಮತ್ತೆ ಅಪಹರಣವಾಗದ ರೀತಿಯಲ್ಲಿ ವ್ಯವಸ್ಥೆಗೊಳಿಸಬೇಕು. ಅಂದ ಮೇಲೆ ಈಗ ಎನ್. ಇ. ಎಸ್. ಮತ್ತು ಸಿ. ಡಿ. ಬ್ಲಾಕುಗಳ ಅತ್ಯಗತ್ಯವೇನೂ ಇಲ್ಲ. ರಕ್ಷಣಾ ಕೆಲಸ ಕಾರ್ಯಗಳಿಗೆ ಹೆಚ್ಚು ಹಣಕೊಡಿ. ಆ ಬ್ಲಾಕುಗಳಲ್ಲಿರತಕ್ಕ ಜೀಪುಗಳಲ್ಲಿ ಎರಡು-ಮೂರನ್ನಾದರೂ ವಾಪಸ್ಸು ತೆಗೆದುಕೊಳ್ಳಿ. ತಮಗೆ ಏನಾದರೂ ಅತಿ ಮುಖ್ಯವಾದಂಥ ಕೆಲಸಗಳೆಂದು ಕಂಡುಬಂದಲ್ಲಿ ಅಂತಹುಗಳಿಗೆ ಮಾತ್ರ ಜೀಪುಗಳನ್ನು ಕೊಡಿ. ಅನೇಕ ಇಲಾಖೆಗಳಲ್ಲಿ ಮತ್ತು ಆಫೀಸುಗಳಲ್ಲಿ ಇರತಕ್ಕ ವ್ಯಾನುಗಳನ್ನು ಮತ್ತು ಜೀಪುಗಳನ್ನು ವಿತ್‌ಡ್ರಾಮಾಡಿ, ಎಷ್ಟು ಅವು ಅಗತ್ಯತೆಯೋ ಅಷ್ಟನ್ನು ಉಪಯೋಗಿಸುವಂತೆ ವ್ಯವಸ್ಥೆಮಾಡಿ. ಯಾವ ಕಾಲದಿಂದರೋ ಹಲವು ಅಧಿಕಾರಿಗಳಿಗೆ ಏನೇನು ಸೌಲತ್ತುಗಳನ್ನು ಒದಗಿಸಿದ್ದರೋ ಅವನ್ನೆಲ್ಲಾ ಸ್ವಲ್ಪಮಟ್ಟಿಗೆ ಕಡಿಮೆಮಾಡಿ. ಅಗ್ರಿಕಲ್ಚರಲ್ ಮತ್ತು ಪಿ. ಡಬ್ಲ್ಯೂ. ಡಿ. ಇಲಾಖೆಯವರ ಕಡೆ ಹೆಚ್ಚು ಗಮನಕೊಟ್ಟರೆ ಆಹಾರೋತ್ಪಾದನೆ ಹೆಚ್ಚಾಗುತ್ತದೆ. ಇದನ್ನು ಸರ್ಕಾರದವರು ಗಮನದಲ್ಲಿಟ್ಟುಕೊಂಡು ಎಲ್ಲೆಲ್ಲಿ ಖೋತಾಮಾಡಬೇಕೋ ಅಲ್ಲೆಲ್ಲಾ ಆದಷ್ಟು ಮಟ್ಟಿಗೆ ಕಟ್‌ಮಾಡುತ್ತಾರೆಂದು ನಾನು ಸಂಪೂರ್ಣವಾಗಿ ತಿಳಿದಿದ್ದೇನೆ.

ಇನ್ನೊಂದು ವಿಷಯ. ಆಯುಧಗಳನ್ನು ಕೊಳ್ಳಲಿಕ್ಕೆ ಆಭರಣಗಳನ್ನ ಕೊಡಿ ಎಂದು ಅನೇಕರು ಎಷ್ಟೋ ಭಾಷಣಗಳನ್ನು ಮಾಡಿದ್ದಾರೆ. ಈಗ ನಮ್ಮ ದೇಶದಲ್ಲಿ ಬಂದಿರತಕ್ಕ ಹಣವೆಷ್ಟು ಎಂಬುದನ್ನು ಯೋಚಿಸಬೇಕು. ಈಗಿನ ಟೆಂಪೊ ಏನೇನೂ ಸಾಲದು. ಯಾವ ವೇಗದಲ್ಲಿ ಹಣವನ್ನು ಶೇಖರಣೆ ಮಾಡುತ್ತಿದ್ದೀರಿ, ಅದಕ್ಕೆ ಯಾವ ದಾರಿಯನ್ನು ಹಿಡಿದಿದ್ದೀರೋ ಅದು ಏನೇನೂ ಸಾಲದು. ಏಕೆಂದರೆ ಕೇವಲ 77 ಲಕ್ಷ ರೂಪಾಯಿಗಳ ಚಿಲ್ಲರೆ ಮಾತ್ರ ಬಂದಿದೆ. ಒಟ್ಟು ಐದು ಕೋಟಿ ರೂಪಾಯಿಗಳನ್ನು ನಾವು ಶೇಖರಣೆ ಮಾಡಬೇಕಾಗಿದೆ. ಉತ್ತರದ ಗಡಿಯಲ್ಲಿರತಕ್ಕ ಚೀಣೀಯರು ನಮ್ಮ ಜನಗಳ ಇಂತಹ ಉದಾರ ಬುದ್ಧಿಯನ್ನು ಕೇಳಿದರೆ ಏನಂದಾರು ಎಂಬುದನ್ನು ನಾವು ಯೋಚಿಸಬೇಕು. ಸಂಬಳದಲ್ಲಿ ಕೇವಲ ಐದು ರೂಪಾಯಿ ಅಥವಾ ಎರಡು ರೂಪಾಯಿಗಳು, ತನ್ನ ಉತ್ಪತ್ತಿಯಲ್ಲಿ ಒಂದು ರೂಪಾಯಿ ಹೀಗೆ ನಮ್ಮ ಜನಗಳು ಕೊಡುತ್ತಾ ಬಂದರೆ ಇನ್ನೆಷ್ಟು ವರ್ಷಗಳಿಗೆ ಐದು ಕೋಟಿ ರೂಪಾಯಿಗಳನ್ನು ಕಲೆಕ್ಟ್ ಮಾಡುವುದೆಂಬುದನ್ನು ಸರ್ಕಾರದವರು ಯೋಚನೆಮಾಡಬೇಕು. ಏನೇ ಆಗಲಿ ಸರ್ಕಾರದವರು ಈ ಐದು ಕೋಟಿ ರೂಪಾಯಿಗಳನ್ನು ಕೇವಲ ಮೂರು ತಿಂಗಳುಗಳಲ್ಲಿಯೇ ವಸೂಲು ಮಾಡಬೇಕು. ಅಂತಹ ಸ್ಕೀಮನ್ನು ಹಾಕಿಕೊಳ್ಳಬೇಕು. ಕೆಲವು ತಿಂಗಳುಗಳ ಕಾಲ ಸರ್ಕಾರದವರು ಇತರ ಎಲ್ಲಾ ಕೆಲಸಗಳನ್ನು ನಿಲ್ಲಿಸಿದರೆ ಬಹಳ ಒಳ್ಳೆಯದು. ಪುಂಡುಪೋಕರನ್ನು ಸಜ್ಜನರನ್ನಾಗಿ ಮಾಡುವುದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಬೇಕು. ಏಕೆಂದರೆ ಪುಂಡುಪೋಕರಿಂದಲೇ ಸಜ್ಜನರಿಗೆ ತೊಂದರೆ. ನಾವೇನು ನಿಮ್ಮನ್ನು ಫೇವರ್ಸ್‌ಗಳನ್ನೇನೂ ಕೇಳಲಿಲ್ಲ. ನಮಗೆ ಅವುಗಳ ಕಡೆ ಸ್ವಲ್ಪವೂ

ಇಚ್ಛೆಯಿಲ್ಲ. ದೇಶವೆಲ್ಲಾ ಕೊಳ್ಳೆಯಾದಮೇಲೆ ಅವನ್ನೆಲ್ಲಾ ಸುಡಬೇಕು ಅಷ್ಟೆ. ದೇಶದ ಕೆಲಸಗಳಿಗಿಂತ ರಾಷ್ಟ್ರದ ರಕ್ಷಣೆ ಕೆಲಸ ಅತಿ ಮುಖ್ಯವಾದುದೆಂಬುದನ್ನು ಸರ್ಕಾರ ಈಗ ಮನಗಾಣಬೇಕು. ಆ ಕಡೆಗೆ ತಮ್ಮ ಗಮನ ಹೋಗಬೇಕು ಎಂಬುದಾಗಿ ನಾನು ಸರ್ಕಾರದವರಲ್ಲಿ ಪ್ರಾರ್ಥನೆಮಾಡುತ್ತೇನೆ. ಆಫೀಸರುಗಳಿಗೆ ಮೂರ್ನಾಲ್ಕು ಸಾವಿರ ರೂಪಾಯಿಗಳ ಸಂಬಳವಿದ್ದಾಗ ಎರಡನೆಯ ಮಹಾ ಯುದ್ಧದಲ್ಲಿ ಶೇ. 25 ರಷ್ಟು ಕಡಮೆಮಾಡಿದ್ದರು. ಆದರೆ ಈಗ ಮೈಸೂರು ಸರ್ಕಾರ ಶೇ. 10 ರಷ್ಟನ್ನು ಅಧಿಕಾರಿಗಳ ಸಂಬಳದಲ್ಲಿಯೂ ಮತ್ತು ನೌಕರರ ಒಂದು ದಿನದ ಸಂಬಳವನ್ನು ರಕ್ಷಣಾ ನಿಧಿಗೆ ಕೊಡಬೇಕೆಂದು ಹೇಳುತ್ತಿರುವುದು ನಿಜವಾಗಿ ಅದು ಏನೇನೂ ಸಾಲದು. ಅಂತಹ ಅಧಿಕಾರಿಗಳು ಒಂದು ತಿಂಗಳ ಸಂಬಳ ಕೊಡಲಿಕ್ಕೆ ಇನ್ನೂ ಮುಂದೆ ಬಂದಿಲ್ಲ. 300 ರೂಪಾಯಿಗಳಿಂದ 500 ರೂಪಾಯಿಗಳವರೆಗೆ ಪ್ರತಿಯೊಬ್ಬ ಅಧಿಕಾರಿಯ ಸಂಬಳದಲ್ಲಿ ಶೇ. 25 ರಷ್ಟನ್ನಾದರೂ ಖೋತಾಮಾಡಬೇಕು. ಅವರಿಗೆ ಕೊಡುತ್ತಿರುವ ಟಿ. ಎ. ಮತ್ತು ಡಿ. ಎ. ಗಳನ್ನೂ ಸಹ ಖೋತಾ ಮಾಡಬೇಕು ಎಂಬುದಾಗಿ ನಾನು ಸರ್ಕಾರದವರಲ್ಲಿ ವಿನಂತಿಮಾಡುತ್ತೇನೆ. ಮೂರು ಸಾವಿರ ಅಥವಾ ನಾಲ್ಕು ಸಾವಿರ ಸಂಬಳವಿರುವವರು ಕೇವಲ 50-100 ರೂಪಾಯಿಗಳನ್ನು ಕೊಟ್ಟರೆ ಏನಾದೀತು ? ಕಡುಬಡವರಾದವರು ತಮ್ಮ ಹೆಂಡತಿ ಮಾಂಗಲ್ಯವನ್ನು ಮಾರಿ ಈ ರಕ್ಷಣಾ ನಿಧಿಗೆ ಕೊಡುತ್ತಿದ್ದಾರೆ. ಅಂದಮೇಲೆ ದೊಡ್ಡ ದೊಡ್ಡ ಸರ್ಕಾರೀ ಅಧಿಕಾರಿಗಳು ಹೆಚ್ಚು ಹೆಚ್ಚಾಗಿ ತಮ್ಮ ಸಂಬಳದ ಭಾಗವನ್ನು ಕೊಡಬೇಕು. ಅನೇಕ ಜನ ಬಡವರು ಹಣವನ್ನು ಶೇಖರಿಸುವ ಮೂಲಕ ದೇಶದ ರಕ್ಷಣಾ ಸೇವೆಯನ್ನು ಕೈಗೊಳ್ಳುತ್ತಿದ್ದಾರೆ. ಆದ್ದರಿಂದ ಎಲ್ಲರೂ ದೇಶದ ರಕ್ಷಣೆಗಾಗಿ ಹಣವನ್ನು ಯಥೇಚ್ಛವಾಗಿ ಕೊಡಬೇಕು. ಮೂರ್ನಾಲ್ಕು ಸಾವಿರ ಸಂಬಳವಿರುವವರು ಒಂದು ತಿಂಗಳ ಸಂಬಳವನ್ನು ಕೊಡುತ್ತೇವೆಂಬುದಾಗಿ ಮುಂದೆ ಇನ್ನೂ ಬಾರದೇಇರುವುದು ತುಂಬಾ ವಿಷಾದನೀಯವಾಗಿದೆ. ಆದರೆ ನಾನು ಒಂದು ಪ್ರಶ್ನೆ ಕೇಳುತ್ತೇನೆ. ಇಂತಹ ಸಂದರ್ಭದಲ್ಲಿ ಮೊದಲು ತಾವು ಮಂತ್ರಿಗಳಾಗಿರುವವರು ಮಾರ್ಗದರ್ಶಕರಾಗಬೇಕು. ಒಂದೊಂದು ತಿಂಗಳ ಭತ್ಯವನ್ನು ಮೊದಲು ಕೊಡಬೇಕು. ಮಾನ್ಯ ಸದಸ್ಯರೆಲ್ಲರೂ ಒಂದೊಂದು ತಿಂಗಳ ಸಂಬಳವನ್ನು ಕೊಡುವುದಕ್ಕೆ ಸಿದ್ಧರಾಗಿದ್ದೇವೆಂದು ನಾನು ಹೇಳುತ್ತೇನೆ. ಇಂತಹ ಸಂದರ್ಭದಲ್ಲಿ ಯಾರೊಬ್ಬರಿಗೂ ದೇಶಾಭಿಮಾನವಿಲ್ಲವೆಂದು ನಾನು ಹೇಳುವುದಿಲ್ಲ. ದೇಶ ವಿಪತ್ತಿನಲ್ಲಿರುವಾಗ ಯಾವ ಅಧಿಕಾರಿಯೂ ಮುಂದೆ ಬಂದು ಸಹಾಯ ಮಾಡುವುದಿಲ್ಲ ಎಂದು ಹೇಳುವುದಿಲ್ಲ. ಅಂತಹ ಅಧಿಕಾರಿ ನಮ್ಮ ದೇಶದಲ್ಲಿ ಯಾರೂ ಇಲ್ಲವೆಂದು ನಾನು ಹೇಳಬಹುದು. ನಾನು ನಮ್ಮ ರಾಜ್ಯದ ಎಲ್ಲಾ ಅಧಿಕಾರಿಗಳಲ್ಲಿ ಒಂದು ಮಾತ್ರ ವಿನಂತಿ ಮಾಡುತ್ತೇನೆ; ಮತ್ತು ಬಹಳ ವಿನಯದಿಂದ ಕೇಳಿಕೊಳ್ಳುವುದಿಷ್ಟೆ. 500 ರೂಪಾಯಿಗಳ ಸಂಬಳ ಬರುವ ಪ್ರತಿಯೊಬ್ಬ ಅಧಿಕಾರಿಯೂ ಶೇ. 25 ರಷ್ಟನ್ನು ತನ್ನ ಸಂಬಳದಲ್ಲಿ ಖೋತಾಮಾಡಿಕೊಳ್ಳಬೇಕೆಂದು ಹೇಳುತ್ತೇನೆ. ನಾವೆಲ್ಲರೂ ಅದಷ್ಟು ಮಟ್ಟಿಗೆ ಸರ್ವತ್ಯಾಗಮಾಡಲು ಸಿದ್ಧರಾಗಿರಬೇಕು. ನನ್ನ ಸ್ನೇಹಿತರಾದಂಥ ಶ್ರೀಮಾನ್ ಮಾದಯ್ಯಗೌಡರು ರಾಮನಗರದಲ್ಲಿ ರಸ್ತೆಗಳನ್ನು ಮತ್ತು ಸೇತುವೆಗಳನ್ನು ಕಟ್ಟಲಿಕ್ಕೆ ಸಾಕಷ್ಟು ಸಿಬ್ಬಂದಿಇಲ್ಲ. ಸಬ್‌ಓವರ್‌ಸಿಯರ್ ಇಲ್ಲ, ಅಸಿಸ್ಟೆಂಟ್ ಇಂಜಿನಿಯರ್ ಇಲ್ಲ, ಬಿಲ್ಡಿಂಗ್ ಡಿವಿಜನ್ ಸೂಪರ್‌ವೈಜರ್, ಇನ್‌ಸ್ಪೆಕ್ಟರ್ಸ್ ಇಲ್ಲವೆಂದು ಹೇಳಿದರು. ಅಂತಹ ಸಂದರ್ಭಗಳಲ್ಲಿ ಇಲ್ಲಿನ ಸ್ಟಾಫನ್ನು ಅಲ್ಲಿಗೆ ಟ್ರಾನ್ಸ್‌ಫರ್‌ಮಾಡಿ, ಅವರು ಇನ್ನೂ ಚೆನ್ನಾಗಿ ಕೆಲಸ ಮಾಡುತ್ತಾರೆ. ಅದಕ್ಕೋಸ್ಕರ ಪ್ರತ್ಯೇಕವಾಗಿ ನೇಮಕಗಳನ್ನು ಮಾಡುವುದು, ಪ್ರೊಬೇಷನರ್ಸ್ ಎಂದು ತೆಗೆದುಕೊಳ್ಳುವುದು. ಇಂಥಾದ್ದನ್ನೆಲ್ಲಾ ಕೂಡಲೇ ನಿಲ್ಲಿಸಬೇಕು. ಇವತ್ತಿನ ದಿವಸ ನಮ್ಮ ಗಡಿ ಸಂರಕ್ಷಣೆಯನ್ನು ಖಂಡಿತವಾಗಿ ಮಾಡಬೇಕೆಂಬ ಇಚ್ಛೆ ಇದ್ದರೆ, ಮತ್ತು ರಾಜ್ಯಾಡಳಿತವನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗಬೇಕೆಂಬ ಇಚ್ಛೆ ಇದ್ದರೆ ಸರ್ಕಾರದ ಮಟ್ಟದಲ್ಲಿ ಮೊದಲು ಸರಿಹೊಗಬೇಕು ಆ ಬಗ್ಗೆ ಸರ್ಕಾರ ಒಂದು ಮಾರ್ಗದರ್ಶಕವಾಗಿದ್ದೇ ಆದರೆ ಆಗ ಇದು ಸಾಧ್ಯವೆಂದು ನನ್ನ ಅಭಿಪ್ರಾಯವಾಗಿದೆ. ನಾವು ಇಲ್ಲಿ ಹೇಳುವುದೆಲ್ಲಾ ಸುಮ್ಮನೆ ಭಾಷಣವಾಗಿಯೇ ಇರಬಾರದು. ಸರ್ಕಾರದವರು ಈ ವಿಷಯಗಳ ಕಡೆ ಹೆಚ್ಚು ಜಾಗರೂಕತೆಯಿಂದ ಗಮನಕೊಡಬೇಕು. ನಿಮಗೆ ಹಣಬೇಕು ಎಂದು ಕೇಳುತ್ತೀರಿ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುತ್ತೇನೆ. ಈ ದೇಶದಲ್ಲಿ 87 ಸಾರಿ ಹೆಂಡಕುಡಿಯಬೇಡಿ ಎಂದು ಸಾರುತ್ತಾ, ಮಹಾತ್ಮ ಗಾಂಧಿಯವರ ಈ ಒಂದು ವಾದವನ್ನು ಎತ್ತಿ ಹಿಡಿಯುತ್ತಾ, ಅನೇಕ ಭಾಷಣಗಳನ್ನು ಮಾಡಿ, ಪಿಕೆಟಿಂಗ್ ಆಗಿ, ದಸ್ತಗಿರಿಯಾಗಿ, ಅನೇಕರು ಜೈಲಿಗೆ ಹೋಗಿರತಕ್ಕ ನಿದರ್ಶನಗಳನ್ನು ನೋಡಿದ್ದೇವೆ. ಹೆಂಡ ಕುಡಿಯುವುದು ದೋಷವಲ್ಲವೆಂದು ಯಾವ ರಾಜ್ಯದಲ್ಲೂ ಯಾರೂ ಹೇಳುವುದಿಲ್ಲ. ಈ ಬಗ್ಗೆ ಯಾವುದೇ ಸರ್ಕಾರವಾಗಲಿ ಒಂದು ಕಾನೂನನ್ನು ದೇಶದಲ್ಲಿ ಇಟ್ಟಾಗಲೂ ಕೂಡ ಆ ದೇಶದಲ್ಲಿರತಕ್ಕ ಜನ ಸರ್ಕಾರ ಮಾಡಿದಂತಹ ಕಾನೂನು, ಕಾಯಿದೆಗಳಿಗೆ ಗೌರವ ಕೊಡದೇ ಹೋದರೆ ಅಂತಹ ಕಾನೂನನ್ನು ಇಟ್ಟುಕೊಂಡು ಏನು ಪ್ರಯೋಜನವೆಂದು ನಾನು ಕೇಳುತ್ತೇನೆ. ಯಾರು ಕುಡಿಯುತ್ತಾರೋ ಅಂತಹವರಿಗೆ ಇಂಡಿಯನ್ ಪೀನಲ್‌ಕೋಡ್ 302 ನೇ ಸೆಕ್ಷನ್ ಪ್ರಕಾರ ಕಠಿಣ ಶಿಕ್ಷೆಯನ್ನು ವಿಧಿಸಬೇಕು ಮರ್ಡರ್ ಮಾಡುವಂತಹವರಿಗೂ ಆ ರೀತಿಯಾಗಿ ಶಿಕ್ಷೆ ಕೊಡಬೇಕು. ದೇಶದಲ್ಲಿ ಕುಡಿಯುವುದು ತಪ್ಪು ಎಂಬುದಾಗಿ ಒಂದು ಕಾನೂನನ್ನು ಆ ದೇಶದ ಸರ್ಕಾರ ಮಾಡಿದ ಮೇಲೆ ಆ ಕಾನೂನಿಗೆ ಪ್ರತಿಯೊಬ್ಬ ಪ್ರಜೆಯೂ ಗೌರವ ಕೊಡದೇ ಹೋದಮೇಲೆ ಈ 25 ಜನ ಮಂತ್ರಿಗಳು, ಉಪಮಂತ್ರಿಗಳು, ಈ 208 ಜನ ಸದಸ್ಯರಾಗಿರತಕ್ಕ ಈ ಸಭೆ, ಇಷ್ಟು ದೊಡ್ಡ ಸರ್ಕಾರ ಇದ್ದು ಏನು ಪ್ರಯೋಜನವೆಂದು ನಾನು ಈ ಸಂದಭರದಲ್ಲಿ ಕೇಳಬೇಕಾಗಿದೆ. ಜನ ಈ ಸರ್ಕಾರ ಮಾಡಿದಂಥ ಈ ಪಾನನಿರೋಧ ಕಾನೂನನ್ನು ನಿಜವಾಗಿ ಅಲ್ಲಗಳೆದು ಅದಕ್ಕೆ ಅವಮರ್ಯಾದೆಯನ್ನುಂಟುಮಾಡಿ ಈ ಬಗ್ಗೆ ಏನೂ ಪ್ರಯೋಜನವಾಗದಂತಹ ಕಾನೂನುಗಳನ್ನು ಈ ದೇಶದಲ್ಲಿಟ್ಟುಕೊಂಡಿರುವುದಕ್ಕಿಂತ ಅವನ್ನು ಕಾನೂನುಗಳ ಕಡಿತದಿಂದ ಮೊದಲು ಕಿತ್ತುಹಾಕುವುದು ಲೇಸು ಎಂದು ನಾನು ಹೇಳಬೇಕಾಗಿದೆ. ಈ ಬಗ್ಗೆ ಸರ್ಕಾರ ಯಾರ ಮಾತನ್ನೂ ಕೇಳಬೇಕಾಗಿಲ್ಲ. ಯು. ಪಿ. ಯಲ್ಲಿ ಕಾಂಗ್ರೆಸ್ ಸರ್ಕಾರವೇ ಇದೆ. ಇದು ಅಲ್ಲಿ ಯಾವ ರೀತಿ ಜಯಪ್ರದವಾಗಿಯಾಗಿದೆ ಎಂಬುದನ್ನು ತಿಳಿಯಬೇಕು. ನಿಮಗೇನೂ ಕೇಂದ್ರ ಸರ್ಕಾರ ಈ ವಿಷಯದಲ್ಲಿ ಅಡ್ಡಿ ಬರುತ್ತಿಲ್ಲ. There is a directive from Delhi not to scrap prohibition. ಇದು ನನಗೆ ಅರ್ಥವಾಗಲಿಲ್ಲ. ಅದ್ಯ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ನಿಜವೋ ಸುಳ್ಳೋ ಗೊತ್ತಿಲ್ಲ. ಬಂಗಾರದ ಬಾಂಡು ಗಳನ್ನು ಜನರು ಕೊಳ್ಳಬೇಕು ಎಂದು ಕೇಂದ್ರ ಸರ್ಕಾರದ ಮಂತ್ರಿಗಳಲ್ಲೊಬ್ಬರಾದ ಶ್ರೀಮಾನ್ ಮೊರಾರ್ಜಿ ಯವರು ಹೇಳುವಾಗ ಇಲ್ಲಿ ಅದನ್ನು ಕೇಳಿ ಏನೋ ಆಟ ಆಡುತ್ತಿದ್ದ ಹಾಗೆ ಸಾಮಾನ್ಯವಾದುದೆಂದು ಅನೇಕರು ತಿಳಿಯುತ್ತಿದ್ದಾರೆ. ಅದು ತಪ್ಪು ಭಾವನೆ. ನೀವು ಇಷ್ಟು ಜನ ಮಂತ್ರಿಗಳು ಇದ್ದೀರಿ, ಉಪಮಂತ್ರಿ ಗಳಿದ್ದೀರಿ. ಎಲ್ಲರೂ ಕ್ಯಾಬಿನೆಟ್ಟಿಗೆ ಬರುತ್ತಾರೋ ಇಲ್ಲವೋ ಗೊತ್ತಿಲ್ಲ. ಆದರೂ ಈ ವಿಷಯದಲ್ಲಿ ಹೆಚ್ಚಿಗೆ ಗಮನಕೊಟ್ಟು ಕೂಡಲೇ ಮದ್ಯಪಾನವನ್ನು ನಿಲ್ಲಿಸುವ ಪ್ರಯತ್ನ ಮಾಡಬೇಕು. ಏಕೆಂದರೆ ಇತ್ತೀಚೆಗೆ ನಮ್ಮ ಮುಂದೆಯೇ ಅನೇಕರು ಕುಡಿಯದೆ ಇದ್ದವರು ಜೇಬಿನಲ್ಲಿ, ಹಿಪ್‌ಪಾಕೆಟ್ಟಿನಲ್ಲಿ, ಬೂಟ್ಸಿನಲ್ಲಿ ಮತ್ತು ಟೈರುಗಳಲ್ಲಿ ಹೆಂಡವನ್ನು ತುಂಬಿಕೊಂಡು ಹೋಗಿ ಕುಡಿಯುತ್ತಿದ್ದಾರೆ. ಹೀಗೆ ಮಾಡುವುದರಿಂದ ಹಣ ಸರ್ಕಾರಕ್ಕೆ ಎಲ್ಲಿಂದ ಬರಬೇಕು ಎಂದು ನಾನು ಈಗ ಕೇಳಬೇಕಾಗಿದೆ. ನನ್ನ ಸ್ನೇಹಿತರಾದ ಶ್ರೀಮಾನ್ ಅಪ್ಪಣ್ಣನವರು ಮಾತನಾಡುತ್ತಾ ಕೊಡಗಿನಲ್ಲಿ ಶೇಕಡ 25ರಷ್ಟು ರಿಕ್ರೂಟ್‌ಗಳು ರಿಜೆಕ್ಟ್ ಆಗುತ್ತಿದ್ದಾರೆ, ಇದಕ್ಕೆ ಕಾರಣ ಪಾನನಿರೋಧ ಕಾನೂನು ಮತ್ತು ಇಲ್ಲಿಸಿಟ್ ಡಿಸ್ಟಿಲೇಷನ್ನಿನ ದುಷ್ಪರಿಣಾಮವೆಂದು ಹೇಳಿದರು. ಅದರಿಂದಾದರೂ ನಾವು ಈ ಪಾನನಿರೋಧದ ಕಾನೂನನ್ನು ಎಷ್ಟರಮಟ್ಟಿಗೆ ಜನ ಗೌರವಿಸುತ್ತಿದ್ದಾರೆಂಬುದನ್ನು ಈ ಸಂದರ್ಭದಲ್ಲಿ ನಾವು ಅರ್ಥಮಾಡಿಕೊಳ್ಳಬೇಕು.

5-30 P.M.

ಈ ದೇಶಕ್ಕೆ ಮಹಾತ್ಮಾ ಗಾಂಧಿಯವರ ರಾಜಮಾರ್ಗ, ಅವರ ತತ್ವಬೋಧನೆ, ಅವರು ಅನುಸರಿಸಿದಂಥಾ ನೀತಿ ಅದೆಲ್ಲಾ ಸರಿಯೇ. ಅದರಲ್ಲಿ ಕುಂದಕ ಇದೆ ಎಂದು ಹೇಳುತ್ತಾ ಇಲ್ಲ. ಪ್ರಾಣಹಾನಿ ಇಲ್ಲದೇ ಶಾಂತಯುದ್ಧ ಮಾಡಿ 44 ಕೋಟಿ ಮಕ್ಕಳನ್ನು ಸ್ವತಂತ್ರರನ್ನಾಗಿ ಮಾಡಿದರು. ಇವತ್ತಿನ ದಿವಸ ಆ ಸ್ವಾತಂತ್ರ್ಯ ಒಂದು ಹಗರಣವಾಗಿ ಅಪಹರಣವಾಗತಕ್ಕ ಪರಿಸ್ಥಿತಿ ಬಂದಿದೆ. ಬರೀ ಕೈಯಲ್ಲಿ ಸ್ವಾತಂತ್ರ್ಯ ರಕ್ಷಣೆ ಮಾಡುವುದಕ್ಕೆ ಆಗುವುದಿಲ್ಲ. ನಮ್ಮ ಹತ್ತಿರ ಗುಂಡು ಇಲ್ಲ, ಮದ್ದು ಇಲ್ಲ. 25 ಕೋಟಿ ರೂಪಾಯಿ ವರಮಾನ ಬರುತ್ತಿದ್ದ ಬಾಬು ಹೋಯಿತು. ಪ್ರೊಹಿಬಿಷನ್ ಬೇರೆ ಮಾಡಿದಿರಿ ಕುಡಿದುಕೊಂಡು ಹೋಗಲಿ ಬಿಡಿ. ಅವರ ಮೇಲೆ ಇವರ ಮೇಲೆ ಟ್ಯಾಕ್ಸ್ ಹಾಕುವುದಕ್ಕೆ ಹೋಗಬೇಡಿ. ಹಣಕಾಸಿನ ಮಂತ್ರಿಗಳು ಸ್ವಲ್ಪ ಕೂಲಂಕಷವಾಗಿ ವಿಮರ್ಶೆ ಮಾಡಿದರೆ ಇವತ್ತಿನ ದಿವಸ ಬರತಕ್ಕ ವರಮಾನದ 10 ರಷ್ಟು ಕೊನೇ ಪಕ್ಷ 8 ರಷ್ಟು ಹಣವಾದರೂ ಆ ಬಾಬಿನಿಂದ ಖಜಾನೆಗೆ ಬರುತ್ತದೆ. ನೀವು ಹೇಳಿದಿರಿ ಪಾನ ನಿರೋಧ ಮಾಡುತ್ತೇವೆ ಅದರಿಂದ ಜನರಿಗೆ ಒಳ್ಳೆಯದಾಗುತ್ತದೆ ಎಂದು. ಆಗಲಿ ಎಂದು ಹೇಳಿದವು. ದೇಶಕ್ಕೆ ಕಲ್ಯಾಣ ವಾಗುತ್ತದೆ ಎಂದು ನೀವು ಹೇಳಿದ ಮಾತು ಏನಾಯಿತು ? ಬಡವರು ಬದುಕಲಿ ಎಂದು ಹೇಳಿದಿರಿ. ಮನೆ ಕಟ್ಟಿಕೊಳ್ಳಲಿ ಎಂದು ಹೇಳಿದಿರಿ. ಅವರು ಮಾಡಿದ್ದಾದರೂ ಏನು ? ನಿಮ್ಮ ಮಾತನ್ನು ಅವರು ಕೇಳಲಿಲ್ಲ. ನೀವು ಹೇಳಿದ್ದನ್ನು ಕೇಳದೇ ಇರುವವರಿಗೆ ನೀವು ಏನು ಮಾಡುತ್ತೀರಿ ಎಂಬುದು ಅರ್ಥವಾಗುವುದಿಲ್ಲ. ಮಾತು ಕೇಳುವವರಿಗೆ ಹೇಳುವುದು ನ್ಯಾಯ. ಎಷ್ಟು ಹೇಳಿದರೂ ಆಯಿತು ಅಂತ ಮಾಡುವ ಕೆಲಸ ಬಿಡದಿದ್ದರೆ ಏನು ಪ್ರಯೋಜನ? ಅದಕ್ಕೇ ಪ್ರೊಹಿಬಿಷನ್ ಸ್ಕ್ರ್ಯಾಪ್ ಮಾಡಿ. ಇಲ್ಲದೇ ಇದ್ದರೆ ಯಾರೋ 40-50 ಜನರನ್ನು ಹಿಡಿದುಕೊಂಡು ಬಂದು ಅವರ ಮೇಲೆ ಕೇಸ್ ಹಾಕಿ ಕೋರ್ಟಿಗೆ ಕರೆದುಕೊಂಡು ಹೋಗಿ ಶಿಕ್ಷೆ ವಿಧಿಸಿದರೆ ನಾವು ಪ್ರಶ್ನೆ ಕೇಳುತ್ತೇವೆ ಆನಂದವಾಗಿ ನೀವು ಉತ್ತರ ಕೊಡುತ್ತೀರಿ. ಇವತ್ತಿನ ಪರಿಸ್ಥಿತಿಯಲ್ಲಿ ಆನಂದ, ತಮಾಷೆ ಒಂದಕ್ಕೂ ಅವಕಾಶವಿಲ್ಲ. ಇದಕ್ಕೆ ಬಹಳ ತೀವ್ರವಾಗಿ ಮನಸ್ಸನ್ನು ಕೊಟ್ಟು ಬಹಳ ವೇಗವಾದ ರೀತಿಯಲ್ಲಿ ನಿರ್ಧಾರವನ್ನು ತೆಗೆದುಕೊಳ್ಳಬೇಕು. ಮಂದ ಗಮನೆ ಆನೆ ಹೋಗುವ ರೀತಿಯಲ್ಲಿ ಹೋದರೆ ಆಗುವುದಿಲ್ಲ. Scraping of Prohibition ವಿಷಯ ತೀವ್ರವಾಗಿ ಆಲೋಚನೆಮಾಡಿ ಯು. ಪಿ. ನ. ಸಿ. ಬಿ. ಗುಪ್ತ ಅವರು ಎಷ್ಟು ಧೈರ್ಯದಿಂದ ಮಾಡಿದರೋ ಅದೇ ಮಾರ್ಗವನ್ನು ಅನುಸರಿಸಿ ಅವರು ಪರ್ಮಿಟ್ ಸಿಸ್ಟಂ ಏನು ಇಟ್ಟಿದ್ದಾರೋ ಅದೇ ರೀತಿ ಮಾಡಿ. ನಮ್ಮ ದೇಶಕ್ಕೆ ಈಗ ಹಣ ಬೇಕು. ಇವತ್ತು ನಮ್ಮ ಆಪತ್ತು ಬಂದಿದೆ. ಈ ಹಳದಿ ಬಣ್ಣದ ಕೋತಿಗಳನ್ನು ಹೊಡೆದಟ್ಟಬೇಕಾಗಿದ್ದರೆ ಇನ್ನು ಎಷ್ಟು ವರ್ಷ ಆಗುತ್ತದೆಯೋ ಏನೋ ? Let us re-build the Nation. ಈ ವಿಷಯದಲ್ಲಿ ನಾವು ಹಿಂದಾಗಬಾರದು ಎಂದು ಬಹಳ ವಿನಯದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಈಗ ಗ್ರೇಟ್ ಬ್ರಿಟನ್, ಅಮೆರಿಕಾ ದೇಶಗಳವರು ನಮಗೆ ಸಹಾಯ ಮಾಡುತ್ತಿದ್ದಾರೆ. ಅದಲ್ಲದೆ ಅನೇಕ ಜನ ಮುಂದೆ ಬಂದು ಹಣ ಕೊಡುತ್ತಿದ್ದಾರೆ. ಈ ರೀತಿ ಹಣ ಕೊಡತಕ್ಕವರ ವಿಷಯದಲ್ಲಿ ನೀವು ಬಹಳ ಎಚ್ಚರಿಕೆಯಿಂದ ಇರಿ. ಏಕೆಂದರೆ ಈಗ ಕೊಟ್ಟರೆ ಮುಂದೆ ಏನಾದರೂ ಒಂದು ಅನುಕೂಲವಾಗುತ್ತದೆ ಎಂಬ ದೃಷ್ಟಿಯನ್ನಿಟ್ಟುಕೊಂಡು ಅರ್ಧ ತೊಲದ ಸರ ತೆಗೆದುಕೊಂಡು ಬಂದು ಇದು ನನ್ನ ಮಗಳ ಅರ್ಧ ತೊಲ ಬಂಗಾರ ದಾನ ಮಾಡಿದ್ದೇನೆ, ನನ್ನ ಮೂರು ವರ್ಷದ ಮಗು ದಾನ ಮಾಡಿತು' ಎಂದು ಕೆಲವರು ಕೊಟ್ಟಿದ್ದಾರೆ. ಇದಕ್ಕೆ ಕಾರಣ ಮುಂದೆ ಏನಾದರು ಸಹಾಯ ಪಡೆಯಬಹುದು ಎಂದಿರುತ್ತದೆ. ನಾನು ಹೇಳುತ್ತಿರುವುದನ್ನು ತಪ್ಪು ಎಂದು ತಿಳಿದುಕೊಳ್ಳಬೇಡಿ. ಜತ್ತಿಯವರು ಬಂದರೇ ಹಣ ಕೊಡುತ್ತಾರೆ. ಡಿ. ಸಿ. ಅವರಿಗೆ ಕೊಡುವುದಿಲ್ಲ. ಜತ್ತಿಯವರ ಕೈಯಲ್ಲಿ 2000 ರೂಪಾಯಿ ಕೊಟ್ಟರೆ ಆ ಮೇಲೆ ಅವರ ಹತ್ತಿರ ಹೋಗಿ ಏನು ಸ್ವಾಮಿ, ನಾನು ನಿಮ್ಮ ಸಮಕ್ಷಮದಲ್ಲೇ ಹಣಕೊಟ್ಟೇ ಈಗೇನಾದರೂ ಸಹಾಯ ಮಾಡಿ ಎಂದರೆ ಅವರು 'ಹೌದು ಸಹಾಯ ಮಾಡಿದ್ದಾರೆ. ಏನಾದರೂ ಮಾಡೋಣ' ಅಂತ ಹೇಳುತ್ತಾರೆ. ಅದೇ ಡಿ. ಸಿ. ಅವರಿಗೆ ಕೊಟ್ಟರೆ, ಅವರು ತಯಾರುಮಾಡಿದ ಪಟ್ಟಿಯನ್ನು ಜತ್ತಿಯವರು ನೋಡುವುದಿಲ್ಲ. ಆದ್ದರಿಂದ ಈ ವಿಷಯದಲ್ಲಿ ಸರ್ಕಾರದವರು ಎಚ್ಚರಿಕೆಯಿಂದ ಇರಬೇಕು. ಈ ವಿಷಯವನ್ನು ಸರ್ಕಾರದವರ ಪರ್ಯಾಲೋಚನೆಗೆ ಬಿಡುತ್ತೇನೆ. ಹೋರ್ಡ್ ಮಾಡುವವರಿಗೆ, ಧಾನ್ಯ ಸಂಗ್ರಹ ಮಾಡುವವರಿಗೆ, ಬ್ಲಾಕ್ ಮಾರ್ಕೆಟ್ ಮಾಡುವವರಿಗೆ ಬಹಳ ಕಠಿಣವಾದ ಶಿಕ್ಷೆ ಮಾಡುತ್ತೇವೆ ಎಂದು ತಾವು ಹೇಳಿದಿರಿ. ಎಷ್ಟೇ ಕಠಿಣವಾದ ಕಾನೂನು ಮಾಡಲಿ ಯಾವುದಾದರೂ ಒಂದು ವೀಕ್ ಲಿಂಕ್ ಇದ್ದೇ ಇರುತ್ತದೆ. 'ಅಯ್ಯೋ ಪಾಪ, ಹೋಗಲಿ ಬಿಡಿ' ಎನ್ನುವ ಭಾವನೆ ಬರುತ್ತದೆ. ಇದನ್ನು ಬಂದೋಬಸ್ತು ಮಾಡದಿದ್ದರೆ, ದೇಶದಲ್ಲಿ ಅತ್ಯಾವಶ್ಯಕವಾದ ಪದಾರ್ಥಗಳಾದ ಆಹಾರ ಪದಾರ್ಥ, ಬಟ್ಟೆ, ಕಬ್ಬಿಣ, ಇವುಗಳಾವುವೂ ಸಿಕ್ಕುವು

ದಿಲ್ಲ. ಶ್ರೀಮಾನ್ ಮಾದಯ್ಯ ಗೌಡರು ಸಿಮೆಂಟ್ ಸಿಕ್ಕುವುದಿಲ್ಲ ಎಂದು ಹೇಳಿದರು. ಇದು ಆಶ್ಚರ್ಯಕರ. ಇವತ್ತು 500 ಎಕರೆ ಹೊಸ ಭೂಮಿ ಅಚ್ಚುಕಟ್ಟಿಗೆ ಬರಬೇಕಾದರೆ 200 ಮೂಟೆ ಸಿಮೆಂಟ್ ಖರ್ಚಾಗಬಹುದು. 400 ಮೂಟೆ ಖರ್ಚಾಗಬಹುದು. ನಿನ್ನೆ ಪೇಪರ್‌ನಲ್ಲಿ ನೋಡಿದೆ. ಸಿಮೆಂಟ್ ವಿಷಯದಲ್ಲಿ ಸರಕಾರದವರು ಬಹಳ ಎಚ್ಚರಿಕೆಯಿಂದ ಇದ್ದಾರೆ ಎಂಬುದನ್ನು ತಿಳಿದು ಬಹಳ ಆನಂದವಾಗುತ್ತದೆ. ಆದ್ದರಿಂದ ಸಿಮೆಂಟಿಗೆ ಅಭಾವವಿಲ್ಲ. ಅದಕ್ಕೇ ಸಿಮೆಂಟ್ ಕಾರ್ಖಾನೆಯಲ್ಲಿರತಕ್ಕ ಕೂಲಿಯವನು ಎಷ್ಟು ದೇಶಾಭಿಮಾನದಿಂದ ಇದ್ದಾನೆಯೋ ಮಾರಾಟ ಮಾಡುವವನೂ ಕೂಡ ಅಷ್ಟೇ ದೇಶಾಭಿಮಾನದಿಂದ ಇರಬೇಕು. ಎಷ್ಟನ್ನು ಉತ್ಪನ್ನ ಮಾಡಬೇಕೋ ಅದಕ್ಕಿಂತಲೂ ಹೆಚ್ಚಾಗಿ ಉತ್ಪನ್ನ ಮಾಡಿದರೂ, ಅದನ್ನು ಕಳ್ಳ ಸಂತೆಯಲ್ಲಿ ಮಾರಾಟ ಮಾಡುವವರಿಗೆ ಗುಂಡು ಇಡಬೇಕು. ಅದು ಅವರಿಗೆ ತಿಳಿಯುವಂತೆ ಮಾಡಿದರೆ ತಾಪತ್ರಯವಿರುವುದಿಲ್ಲ.

ಒಂದೊಂದು ತಾಲ್ಲೂಕಿನಲ್ಲಿ 500 ಅಥವಾ 5,000 ಪಲ್ಲ ದವಸ ಸಂಗ್ರಹ ಮಾಡಿದರೆ ಎಷ್ಟೋ ಆಗುತ್ತದೆ ಎಂದು ಹೇಳಿದರು. ವ್ಯವಸಾಯದ ಖಾತೆ ಮಲಗಿಕೊಂಡು ನಿದ್ದೆ ಹೋಗುತ್ತಾ ಇದೆ. ಮಾನ್ಯ ಮಂತ್ರಿಗಳು ಬಂದು 5-6 ತಿಂಗಳಾಯಿತು. ಎಲ್ಲಿ ಏನಿದೆ ಎಂಬುದು ಸಾರ್ವಜನಿಕರಿಗೆ ಗೊತ್ತಿದೆ. ತಾವು ಈ ದಿವಸ ಅವರ ಜೊತೆಯಲ್ಲಿ ಕುಳಿತುಕೊಳ್ಳಿ, ಅವರನ್ನು ನಿಮ್ಮ ಛೇಂಬರ್‌ಗೆ ಕರೆಯಿರಿ. ಎಕ್ಸ್‌ಟೆನ್‌ಷನ್ ಆಫೀಸರ್ಸ್, ಫುಡ್ ಡೈರೆಕ್ಟರ್ ಅವರನ್ನು ಕರೆಯಿರಿ. ಭೂಮಿಯ ಶಕ್ತಿ ಎಷ್ಟು ಎಷ್ಟು ಬತ್ತ ಬೆಳೆಯಲು ಅವಕಾಶ ಮಾಡಿದ್ದೀರಿ ಎಂಬುದನ್ನೆಲ್ಲಾ ಕೇಳಿ. ಆಹಾರದ ಕೊರತೆ ಈಗಲೇ ನಮಗೆ ಇಲ್ಲ ಎನ್ನುವಾಗ ಮುಂದೆ ಬ್ಲಾಕ್ ಮಾರ್ಕೆಟ್ ಮಾಡಿದರೆ ತೊಂದರೆಯಾಗುತ್ತದೆ. ಅದಕ್ಕೆ ತಾವೂ, ವ್ಯವಸಾಯದ ಖಾತೆಯ ಸಚಿವರೂ ಕುಳಿತುಕೊಂಡು ಹೆಚ್ಚು ಆಹಾರ ಬೆಳೆಯಲು ಯಾವ ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಲು ಮನಸ್ಸು ಮಾಡಿ. ಯುದ್ಧಕಾಲದಲ್ಲಿ 24 ಘಂಟೆಯಲ್ಲಿ 18 ಘಂಟೆ ದುಡಿದರೆ ಸಾಕು, ಫೈನಾನ್ಸ್ ಮಿನಿಸ್ಟರು ಏನೂ ಮಾಡುವುದಕ್ಕಾಗುವುದಿಲ್ಲ. ಜತ್ತಿಯವರ ಕೈಯಲ್ಲಿ ಏನಿದ್ದರು 3×8–24 ಅಂತ ಲೆಕ್ಕಾಚಾರ ಹಾಕುವುದೆಷ್ಟೋ ಅಷ್ಟೆ. ತೆರಿಗೆ ಹಾಕುವಾಗ ಬಡವರ ಮೇಲೆ ಹೊರೆ ಹೊರಿಸಬೇಡಿ ಶ್ರೀಮಂತರ ಮೇಲೆ ಎಷ್ಟು ಹಾಕಿದರೂ ಪರವಾಗಿಲ್ಲ. ಅದರಲ್ಲಿ ಲೋಪದೋಷವಿದ್ದರೆ ಅದನ್ನು ತಿಳಿಯಪಡಿಸುತ್ತೇವೆಯೇ ಹೊರತು ಮತ್ತೇನೂ ಇಲ್ಲ. ತಾವು ಬಡವರ ಗೋಜಿಗೆ ಹೋಗಬೇಡಿ. ಆದ್ದರಿಂದ ವ್ಯವಸಾಯ ಖಾತೆಯ ಮಂತ್ರಿಗಳು ಮನಸ್ಸು ಮಾಡಬೇಕು. ತಾವು 15 ವರ್ಷದಿಂದ ಕೆಲಸ ಮಾಡಿದ್ದೇನು ? ವ್ಯವಸಾಯ ಖಾತೆ ನಿದ್ದೆ ಮಾಡುತ್ತಾ ಇದೆ. ಕುಂಭಕರ್ಣನ ನಿದ್ದೆ. ಯಾವಾಗ ಅರಿವು ಆಗುತ್ತದೆಯೋ ಗೊತ್ತಿಲ್ಲ. ಅದನ್ನು ರೀ ಓರಿಯಂಟ್ ಮಾಡಬೇಕು. ಈಗ ಅದು ಚಿಕ್ಕಬಳ್ಳಾಪುರದ ರೈಲು ಹೋದ ಹಾಗೆ ಚುಕ್ಕು, ಚುಕ್ಕು ಅಂತ ಹೋಗುತ್ತಾ ಇದೆ. 15 ಮೈಲಿ ವೇಗದಲ್ಲಿ ಹೋಗುತ್ತಾ ಇದೆ. ಆದ್ದರಿಂದ ದೊಡ್ಡ ಮನಸ್ಸು ಮಾಡಿ ರಾಷ್ಟ್ರಕ್ಕೆ ಬಂದಿರುವ ಕುತ್ತನ್ನು ಪರಿಹಾರ ಮಾಡಬೇಕಾದರೆ ಮೊದಲು ಆಹಾರ ಬಹಳ ಮುಖ್ಯವಾದುದು ಎಂದು ಹೇಳುತ್ತೇನೆ.

ಇನ್ನೊಂದು ವಿಷಯವನ್ನು ಹೇಳಿ ಮುಗಿಸುತ್ತೇನೆ. ಬಿಲ್ಡಿಂಗ್‌ಗಳ ವಿಷಯ ಮುಖ್ಯ ಮಂತ್ರಿಗಳು ಹೇಳಿದರು. ವಿದ್ಯಾ ಮಂತ್ರಿಗಳೂ ಹೇಳಿದ್ದಾರೆ. ಬಿಲ್ಡಿಂಗ್ ಕಟ್ಟಿಸುವ ಗೋಜಿಗೆ ಹೋಗಬೇಡಿ ಎಂದು. ಹಿಂದೆ ಲವ, ಕುಶ, ರಾಮ, ಲಕ್ಷ್ಮಣ ಇವರೆಲ್ಲರೂ ವಿದ್ಯಾಭ್ಯಾಸ ಮಾಡಿದ್ದು ಪರ್ಣ ಕುಟಿಯಲ್ಲಿ. ಅದೇ ರೀತಿ ಎಷ್ಟೋ ಲಕ್ಷಾಂತರ ಜನರು ಮರಗಳ ನೆರಳಿನಲ್ಲಿ ವಿದ್ಯಾಭ್ಯಾಸ ಮಾಡಿದ್ದಾರೆ. ದೊಡ್ಡ ಬಿಲ್ಡಿಂಗ್‌ಗಳಲ್ಲಿ ಓದಿದರೇ ಐ. ಎ. ಎಸ್ ಆಫೀಸರ್ ಆಗುವುದು ಇಲ್ಲದೇ ಇದ್ದರೆ ಇಲ್ಲ ಅಂತ ಅಲ್ಲ. ಹಿಂದೆ ಒಂದು ಪ್ರಶ್ನೆಗೆ ಉತ್ತರವಾಗಿ ಹೇಳಿದ್ದರು. ಅದನ್ನೇ ಮುಖ್ಯ ಮಂತ್ರಿಗಳು ಬಹಳ ವಿವರವಾಗಿ ಹೇಳಿದರು. ರೂರಲ್ ಕಮ್ಯೂನಿಕೇಷನ್‌ಗೆ ವಿಶೇಷವಾಗಿ ಹಣ ಹಾಕಿ ಅವುಗಳೆಲ್ಲಾ ಹಾಳಾಗಿ ಹೋಗಿವೆ. ಇವತ್ತಿನ ದಿವಸ ಕಲ್ಲು ಮುಳ್ಳಿನಲ್ಲಿ ನಡೆದರೂ ಚಿಂತೆ ಇಲ್ಲ ರಾಷ್ಟ್ರಕ್ಕೆ ಬಂದಿರುವ ಕುತ್ತು ದೂರವಾಗಬೇಕಾದರೆ ಅದನ್ನು ನಿಲ್ಲಿಸಿ. ಜನರು ಬಹಳ ಸೋಮಾರಿಗಳಾಗಿದ್ದಾರೆ. ಹಳ್ಳಿಯವರೇ ಹಿಂದೆ ಎಲ್ಲಾ ಕೆಲಸಗಳನ್ನೂ ಮಾಡುತ್ತಾ ಇದ್ದರು. ಈಗ ಪ್ರತಿಯೊಂದಕ್ಕೂ ಸರ್ಕಾರದವರೇ ಮುಂದೆ ಬರಬೇಕು, ರೂರಲ್ ಡೆವಲಪ್‌ಮೆಂಟ್ ಕಮಿಟಿ, ಸಿ. ಡಿ. ಬ್ಲಾಕು ಇವುಗಳನ್ನೆಲ್ಲಾ ನಿಲ್ಲಿಸಿ.

ಇನ್ನೊಂದು ವಿಷಯವನ್ನು ಹೇಳುತ್ತೇನೆ. ಶ್ರೀಮಾನ್ ಅಪ್ಪಣ್ಣನವರೂ ಈ ವಿಷಯವನ್ನು ಹೇಳಿದರು. ತಾಲ್ಲೂಕು ಬೋರ್ಡಿನವರು 10 ಸಾವಿರ, 22 ಸಾವಿರ ರೂಪಾಯಿಗಳನ್ನು ರಾಷ್ಟ್ರೀಯ ರಕ್ಷಣಾ ನಿಧಿಗೆ ಕೊಡುತ್ತಿದ್ದಾರೆ. ತಾಲ್ಲೂಕು ಬೋರ್ಡಿನವರು ಮನೆ ಮನೆಗೆ ಹೋಗಿ ಹಣವನ್ನು ಕಲೆಕ್ಟ್ ಮಾಡಿ ರಾಷ್ಟ್ರೀಯ ರಕ್ಷಣಾ ನಿಧಿಗೆ ಕೊಟ್ಟಿದ್ದರೆ ಆಗ ಅವರಲ್ಲಿ ಅಘಾಧವಾದ ದೇಶ ಪ್ರೇಮ ಇದೆಯೆಂಬುದು ಅರ್ಥವಾಗುತ್ತಿತ್ತು. ತಾಲ್ಲೂಕು ಬೋರ್ಡುಗಳಿಗೆ ಸರ್ಕಾರದವರು 25 ಪರ್ಸೆಂಟ್ ಕಂದಾಯವನ್ನು ಬೇರೆ ಕೊಡುತ್ತಿದ್ದಾರೆ. ಇಂಥಾದ್ದರಲ್ಲಿ 22 ಸಾವಿರ ರೂಪಾಯಿಗಳನ್ನು ರಾಷ್ಟ್ರೀಯ ರಕ್ಷಣಾ ನಿಧಿಗೆ ಕೊಡಲು ಸರ್ವಾನುಮತದಿಂದ ತೀರ್ಮಾನಿಸಲಾಯಿತು ಎಂದು ಹೇಳಿದರೆ ಅದು ಯಾರ ದುಡ್ಡು ? ನಾನು ಅದಕ್ಕೆ ವಿರೋಧ ಇದ್ದೇನೆ. ಮುನಿಸಿಪಾಲಿಟಿಗಳಾದರೂ ಅಕ್ರ್ಯೂಯ್ ಬಂದದ್ದರಲ್ಲಿ ಕೊಡುತ್ತಾರೆ. ಇವರು ಏನೂ ಇಲ್ಲ ಬ್ಯಾಲೆನ್ಸಿಂಗ್ ಏಜೆಂಟ್ ಇದ್ದ ಹಾಗೆ. ತಾಲ್ಲೂಕು ಬೋರ್ಡಿನವರು ಡೆವಲಪ್ ಮೆಂಟ್ ಕಮಿಟಿಯವರೂ ಸರ್ಕಾರದಿಂದ ಬರುವ ಹಣವನ್ನು ಎಲ್ಲಿ ಯಾವ ರೀತಿ ಖರ್ಚು ಮಾಡಬೇಕೆಂದು ನಿರ್ಧಾರಮಾಡತಕ್ಕ ಬ್ಯಾಲೆಂನ್ಸಿಂಗ್ ಏಜೆಂಟ್ಸ್. ಅವರು ಒಂದೇ ಕಡೆ ಹಣವನ್ನು ಖರ್ಚು ಮಾಡಿದರೆ ಬಿ. ಡಿ. ಓ ಮತ್ತು ವಿಲೇಜ್ ವರ್ಕರ್ಸ್ ಏನು ಮಾಡುತ್ತಾರೆ? ಅವಕ್ಕೋಸ್ಕರ ಶ್ರೀಮಾನ್ ಅಪ್ಪಣ್ಣನವರು ಹೇಳಿದ ಮಾತನ್ನು ಗಮನದಲ್ಲಿಡಬೇಕು. ಮಧುರೇ ಮುನಿಸಿಪಾಲಿಟಿಯವರು ಒಂದು ಲಕ್ಷ ರೂಪಾಯಿಗಳನ್ನು ರಾಷ್ಟ್ರೀಯ ರಕ್ಷಣಾ ನಿಧಿಗೆ ಕೊಡಬೇಕೆಂದು ತೀರ್ಮಾನ ಮಾಡಿದಾಗ ಮದ್ರಾಸ್ ಸರ್ಕಾರದವರು ಅದನ್ನು ಟರ್ನ್ ಡೌನ್ ಮಾಡಿದರು. ಮಧುರೇ ಮುನಿಸಿಪಾಲಿಟಿಯವರು ಅನಕ್ಕೋಸ್ಕರ ಖರ್ಚು ಮಾಡುವುದು ಬೇಡ ಎಂದು ಹೇಳಿದರು. ನಿಜ ದೇಶ ಹೋಗುವಾಗ ಮಧುರೆ ಮುನಿಸಿಪಾಲಿಟಿಯಿಂದಲೂ ಹಣವನ್ನು ತೆಗೆದುಕೊಳ್ಳುತ್ತಾರೆ. ಟ್ರೆಜರಿಯಲ್ಲಿರುವ ಹಣವನ್ನೂ ಖರ್ಚು ಮಾಡುತ್ತಾರೆ. ಬ್ಯಾಂಕಿನಲ್ಲಿಯೂ ತೆಗೆದುಕೊಳ್ಳುತ್ತಾರೆ. ಎಲ್ಲಾ ಮನೆಗಳಲ್ಲಿಯೂ ದುಡ್ಡನ್ನು ತೆಗೆದುಕೊಳ್ಳುತ್ತಾರೆ. ಹಸಿರು ಚಪ್ಪರ ಹಾಕಿ, ಹೂವಿನ ಹಾರ ಹಾಕಿ ಕ್ಯಾಮರಾದಿಂದ ಫೋಟೋ ತೆಗೆಸಿಕೊಳ್ಳುವುದು ಇವೆಲ್ಲಾ ಬೇಡಿ. ಹೂವಿನ ಹಾರ ಬೇಡಿ. ಚಪ್ಪರ ಬೇಡಿ. ನಮಗೇ ಬೇಕಾಗಿರುವುದು ದೇಶಾಭಿಮಾನ ಒಂದೇ. ಮುನಿಸಿ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಪಾಲಿಟಿಗಳು ಮತ್ತು ತಾಲ್ಲೂಕು ಬೋರ್ಡ್‌ಗಳು ಈ ರೀತಿ ಮಾಡಬಾರದು. ಮುನಿಸಿಪಾಲಿಟಿಯ ಮತ್ತು ತಾಲ್ಲೂಕು ಬೋರ್ಡ್ ಮೆಂಬರುಗಳು ಹಳ್ಳಿ, ಹಳ್ಳಿಗೆ, ಊರು ಊರಿಗೆ ಹೋಗಿ ಹಣವನ್ನು ಕಲೆಕ್ಟ್ ಮಾಡಲಿ. ಕಂಬಳಿಗಳನ್ನು ಕಲೆಕ್ಟ್ ಮಾಡಲಿ. ಧಾನ್ಯವನ್ನು ಕಲೆಕ್ಟ್ ಮಾಡಲಿ, ಬಂಗಾರವನ್ನು ಕಲೆಕ್ಟ್ ಮಾಡಲಿ. ಅದನ್ನು ಬಿಟ್ಟು ತಾಲ್ಲೂಕು ಬೋರ್ಡಿನಲ್ಲಿ ಒಂದು ರೆಸುಲ್ಯೂಷನ್ ಮಾಡಿ Subject to the approval of the Government ಎಂದು ಹೇಳಿ ಚೆಕ್ ಕಳುಹಿಸಿರುವುದಕ್ಕೆ ನಾನು ತೀವ್ರ ವಿರೋಧ ಇದ್ದೇನೆ. ಜನತೆಯ ದುಡ್ಡು ದೇಶದ ದುಡ್ಡು. ದೇಶಕ್ಕೆ ಹಣ ಬೇಕಾದರೆ ತೆಗೆದುಕೊಳ್ಳುತ್ತಾರೆ. ಮೈಸೂರು ಬ್ಯಾಂಕಿನಲ್ಲಿರುವ ದುಡ್ಡು, ಇಂಡಿಯನ್ ಬ್ಯಾಂಕಿನಲ್ಲಿರುವ ದುಡ್ಡನ್ನು ತೆಗೆದುಕೊಳ್ಳುತ್ತಾರೆ. ಅದಕ್ಕೋಸ್ಕರ ವ್ಯಥೆ ಪಡಬೇಕಾಗಿಲ್ಲ. ಅದಕ್ಕೋಸ್ಕರ ಅವರಿಗೆ ಸ್ವಲ್ಪ ಡೈರೆಕ್ಷನ್ ಕೊಡಬೇಕು. ತಾಲ್ಲೂಕು ಬೋರ್ಡಿನವರು ಟೋಕನ್ ಗ್ರ್ಯಾಂಟ್ ಒಂದು ಸಾವಿರ, ಎರಡು ಸಾವಿರದ ಐದುನೂರು ರೂಪಾಯಿಗಳನ್ನು ಕೊಡುತ್ತಾರೆ.

ಶ್ರೀ ಬಿ. ಡಿ. ಜತ್ತಿ.—ಅವಕಾಶ ಕೊಟ್ಟರೆ ಇನ್ನೂ ಹೆಚ್ಚು ಕೊಡುತ್ತಾರೆ. ಆದರೆ ನಾವು ಬೇಡ ಎಂದು ಹೇಳಿದ್ದೇವೆ. The Government is not in favour of taking money either from Taluk Boards or any Local Governing institution. The Government have not at all issued circulars that they should pay.

Sri H. R. KESHAVA MURTHY (Gandasi).—In some places the Deputy Commissioners are forcing them.

Sri B. D. JATTI.—When I am speaking on behalf of Government, it is better that you should accept it. If a particular Tahsildar has done it, it is not correct

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಲ್ಲಿರುವ ಹಣವನ್ನು ತೆಗೆದುಕೊಂಡು ಕೊಡುವುದು ದೇಶ ಪ್ರೇಮದ ಕುರುಹಲ್ಲ. ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿನಲ್ಲಿ ತೆಂಗಿನಕಾಯಿ, ಎಳನೀರನ್ನು ತರತಕ್ಕ ಪೀಪನ್ನು ರಾಷ್ಟ್ರೀಯ ರಕ್ಷಣಾ ನಿಧಿಯನ್ನು ಕಲೆಕ್ಟ್ ಮಾಡಲು ಬಳಸಲಿ. ಬೇಕಾದರೆ ಅದರಲ್ಲಿ ಹೋಗಿ 200 ರೂಪಾಯಿಗಳನ್ನು ಕಲೆಕ್ಟ್ ಮಾಡಿಕೊಂಡು ಬರಲಿ. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರಿಂದಲಾದರೂ ಸ್ವಲ್ಪ ಸೇವೆಯನ್ನು ಸಲ್ಲಿಸಿದಂತೆ ಯೋಚನೆ ಮಾಡಬಹುದು. ಈಗತಾನೆ ಮಂತ್ರಿಗಳು ಕೆಲವರು ಮಾತನಾಡುತ್ತಾ ನಾವು ಈಗಾಗಲೇ ರಾಜೀನಾಮೆಯನ್ನು ಕೊಟ್ಟಿದ್ದೇವೆ. ಅದನ್ನು ಮುಖ್ಯ ಮಂತ್ರಿಗಳು ಒಪ್ಪಿಕೊಂಡಿಲ್ಲ ಎಂದು ಹೇಳಿದರು.

ಒಬ್ಬ ಮಾನ್ಯ ಸದಸ್ಯರು.—ಯಾವ ಮಂತ್ರಿಗಳು ರಾಜೀನಾಮೆಯನ್ನು ಕೊಟ್ಟಿದ್ದಾರೆಂಬುದನ್ನು ಹೇಳಿದರೆ ಒಳ್ಳೆಯದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಪಬ್ಲಿಕ್ ವರ್ಕ್ಸ್ ಇಲಾಖೆಯ ಮಂತ್ರಿಗಳು ರಾಜೀನಾಮೆಯನ್ನು ಬರೆದು ಕೊಟ್ಟಿದ್ದಾರೆಂದು ಹೇಳಿದರು. ಕಾಂಗ್ರೆಸ್ಸಿನವರಲ್ಲಿ ದೇಶಪ್ರೇಮ ಇದೆ. ಅದು ಇಲ್ಲ ಎಂದು ನಾನು ಹೇಳುವುದಿಲ್ಲ. ನಿಮ್ಮನ್ನು ನಾವು ಕಂಪೇರ್ ಮಾಡುವುದಿಲ್ಲ. ನೀವೇ ವಾಲಂಟಿಯರ್ ಆಗಿ ಈಚೆಗೆ ಬಂದರೆ, ನೀವೆಲ್ಲಾ ಮನಃಪೂರ್ವಕವಾಗಿ ಈಚೆಗೆ ಬಂದರೆ, ಈ ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ನೀವೇ ಮುಖ್ಯ ಮಂತ್ರಿಗಳಾಗಬಹುದು. ನಮ್ಮ ಸ್ನೇಹಿತರಾದಂಥ ಶ್ರೀ ಪುಟ್ಟಸ್ವಾಮಿಯವರು ಮುಖ್ಯ ಮಂತ್ರಿಗಳಾಗಬಹುದು. ಶ್ರೀ ವೀರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಬಹುದು. ಇಲ್ಲಿ ಬೇಡ ಎಂದರೆ ಡೆಲ್ಲಿ ಸರ್ಕಾರಕ್ಕಾದರೂ ಹೋಗಬಹುದು. ಅದಕ್ಕೋಸ್ಕರ ತ್ಯಾಗ ಮಾಡುವ ಕಾಲ ಈಗ ಬಂದಿದೆ. ತ್ಯಾಗ ಬುದ್ಧಿಯನ್ನು ತೋರಿಸುವ ಕಾಲ ಬಂದಿದೆ. ಅದನ್ನು ನಿಮಗೆ ಬಿಟ್ಟಿದ್ದೇನೆ. ನಾನು ಯಾರನ್ನೂ ಒತ್ತಾಯ ಮಾಡುವುದಿಲ್ಲ. ಶ್ರೀಮಾನ್ ನಿಜಲಿಂಗಪ್ಪನವರ ಮಂತ್ರಿಮಂಡಲದಲ್ಲಿ 25 ಜನ ಇರುವುದು ಜಾಸ್ತಿಯೆಂದು ಸಾಧಾರಣ ದಿನಗಳಲ್ಲೇ ಹೇಳುತ್ತಿದ್ದರು. ಅದಕ್ಕೋಸ್ಕರ ನಿಮ್ಮ ನಿಮ್ಮ ತೀರ್ಮಾನವನ್ನು ನೀವೇ ಮಾಡಿಕೊಳ್ಳಬೇಕು. ಸರ್ಕಾರ ಏನು ಕೆಲಸ ಮಾಡಿದರೂ ಅದಕ್ಕೆ ನನ್ನ ಸಹಕಾರವನ್ನು ಕೊಡುವುದಕ್ಕೆ ನಾನು ಸಿದ್ಧನಾಗಿದ್ದೇನೆ. ನಾನು ಚುನಾವಣೆಯಾಗಿ ಬಂದಿರತಕ್ಕ ಕ್ಷೇತ್ರದಲ್ಲಿ ನನ್ನಿಂದ ಯಾವ ಕೆಲಸ ಬೇಕಾದರೂ ಅದನ್ನು ಮಾಡುವುದಕ್ಕೆ ನಾನು ತಯಾರಾಗಿದ್ದೇನೆ. ಅಥವಾ ಈ ದೇಶದ ಯಾವ ಮೂಲೆಯಲ್ಲಿ ಬೇಕಾದರೂ ನನ್ನಿಂದ ಆಗಬೇಕಾದ ಕೆಲಸವನ್ನು ಮಾಡುವುದಕ್ಕೆ ನಾನು ತಯಾರಿದ್ದೇನೆಂದು ನಾನು ಭರವಸೆಯನ್ನು ಕೊಡುತ್ತೇನೆ. ಒಂದು ಪಕ್ಷ ನಾನೂ ಅಲ್ಲಿಗೆ ಹೊರಡಬೇಕು ಬೋಲೋ ಭಾರತ ಮಾತಾಕೀ ಜೈ ಎಂದು, ಗೌರಿಶಂಕರ ಶಿಖರದಲ್ಲಿ ತ್ರಿವರ್ಣಧ್ವಜವನ್ನು ಹಾರಿಸಬೇಕೆಂದರೆ ಅದಕ್ಕೂ ಸಿದ್ಧ. ವಿರಾಟರಾಯನ ಮಗನಾದ ಉತ್ತರ ಕುಮಾರನು ನಾನು ಕಾಣದ ಅರ್ಜುನನಲ್ಲ, ನಾನು ಕಾಣದ ಭೀಷ್ಮನಲ್ಲ, ನಾನು ಕಾಣದ ಭೀಮನಲ್ಲ, ಎಂದು ಹೇಳಿದ ಹಾಗೆ ನಾನು ಹೇಳುವುದಕ್ಕೆ ತಯಾರಿಲ್ಲ. ಅಳಿಯಬೇಕು. ಇಲ್ಲದಿದ್ದರೆ, ಉಳಿಯಬೇಕು. ಮುಂದಿನ ಪೀಳಿಗೆಗೆ ಸುಭದ್ರವಾದ ಬುನಾದಿಯ ಮೇಲೆ ಕಟ್ಟಿದ ಪುಣ್ಯ ಭೂಮಿಯ ಮೇಲೆ ಈ ಸಂದರ್ಭದಲ್ಲಿ ಬಂದಿರತಕ್ಕ ಕಳಂಕವನ್ನು ತೊಡೆದುಹಾಕುವುದಕ್ಕೆ ನಮ್ಮ ಕೆಲಸವೇನು ಎಂದು ತಿಳಿದು ವಿರೋಧ ಪಕ್ಷದವರು ಮತ್ತು ಆಡಳಿತ ಪಕ್ಷದವರು ಒಟ್ಟಾಗಿ ಸೇರಿ ದೇಶವನ್ನು ರಕ್ಷಣೆ ಮಾಡೋಣ. ನಾವೆಲ್ಲರೂ ಒಟ್ಟಾಗಿ ವಿಜಯವನ್ನು ಸಾಧನೆ ಮಾಡೋಣ. ನಮ್ಮ ಮತ್ತು ನಿಮ್ಮ ಅಭಿಪ್ರಾಯ ಏನೇ ಇರಲಿ, ದೇಶದಲ್ಲಿರತಕ್ಕ ಮೀರ್ ಸಾಧಕರನ್ನು, ಎಂದರೆ ಈಗ ನಮ್ಮ ದೇಶದ ಮೇಲೆ ಆಕ್ರಮಣವನ್ನು ಮಾಡಿರತಕ್ಕ ಕಮ್ಯುನಿಸ್ಟ್ ಏನಿದ್ದಾರೆ ಅವರ ವಂಶ ನಿರ್ವಂಶವಾಗುವವರೆವಿಗೂ ನಾವು ಏಕ ಕಂಠದಿಂದ ದುಡಿದರೆ ನಮ್ಮ ದೇಶಕ್ಕೆ ಕಲ್ಯಾಣವಾಗುತ್ತದೆ. ನಮ್ಮ ರಾಜ್ಯಕ್ಕೆ ಬಂದಿರುವ ಕುತ್ತು ದೂರವಾಗುತ್ತದೆ. ನಾವೆಲ್ಲಾ ಒಟ್ಟಾಗಿ ಸೇರಿ ದುಡಿದು ವಿಜಯವನ್ನು ಸಾಧನೆ ಮಾಡುವುದಕ್ಕೆ ಪ್ರಯತ್ನ ಮಾಡೋಣ. ನಾವು ವಿಜಯಶಾಲಿಗಳಾಗಿ ಆನಂದವನ್ನು ಪಡೆಯುವ ಕಾಲ ಅತಿ ಶೀಘ್ರವಾಗಿ ನಮಗೆ ಬರಲಿ. ಈ ಯುದ್ಧ ಐದು ವರ್ಷಗಳ ಕಾಲ ನಡೆಯುತ್ತದೆಂದು ಮಾನ್ಯ ಮುಖ್ಯ ಮಂತ್ರಿಗಳಾದ ಶ್ರೀ ನಿಜಲಿಂಗಪ್ಪನವರು ಹೇಳಿದರು. ಅದನ್ನು ನಾವು ಒಂದು ವರ್ಷಕ್ಕೇ ಮುಗಿಸೋಣ. ಅದಕ್ಕಾಗಿ 22 ಕೋಟಿ ಜನಗಳ ಆಹುತಿಯಾಗಲಿ. ನಾವು ಯಾವ ರಾಜ್ಯದ ಮೇಲೂ ಆಕ್ರಮಣ ಮಾಡಿಲ್ಲ. ಭಾರತ ಭೂಮಿಯ ಮಕ್ಕಳು ಭಾರತವನ್ನು ವಿಶಾಲ

ಮಾಡಬೇಕೆಂದು ಹೊರಟಿಲ್ಲ. ಈಗ ನಮ್ಮ ದೇಶದ ಮೇಲೆ ಆಕ್ರಮಣ ನಡೆಸಿರುವ ಚೀಣೀಯರ ಮೇಲೆ ನಾವು ಧರ್ಮ ಯುದ್ಧವನ್ನು ಮಾಡುತ್ತಿದ್ದೇವೆ. ದೂರದಲ್ಲಿರತಕ್ಕ ಪರದೇಶಗಳವರು. ನಮ್ಮ ಸಹಕಾರ ನಿಮಗೆ, ನಮ್ಮ ಸಹಕಾರ ನಿಮಗೆ ಎಂದು ಹೇಳತಕ್ಕ ವಿಷಯ ಎಲ್ಲರಿಗೂ ಗೊತ್ತಿದೆ. ಹಿಮಾಲಯದ ತಪ್ಪಲಿನಲ್ಲಿ ಬಂದು ಗುಂಡು ಹಾರಿಸುತ್ತಿರುವ ಹಳದಿ ಬಣ್ಣದ ಕುತ್ತು ಏನಿದೆ, ಜನ ಏನಿದೆ ಅವರ ಮರ್ಧನ ಆಗಬೇಕು. ಶತ್ರುಗಳು ಬಲಿ ಆಗಬೇಕು. ಭಾರತ ಭೂಮಿಗೆ ಜಯ ಆಗಬೇಕು. ಅದಕ್ಕಾಗಿ ನಾವೆಲ್ಲರೂ ಮಡಿಯೋಣ ಎಂದು ಪ್ರಾರ್ಥನೆ ಮಾಡಿಕೊಂಡು ಇಷ್ಟು ಮಾತನಾಡಲು ನನಗೆ ಕಾಲಾವಕಾಶವನ್ನು ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜೆ. ದೇವಯ್ಯ (ಮಂಡ್ಯ).—ಮಾನ್ಯ ಅಧ್ಯಕ್ಷರೇ ಈ ದಿವಸ ನಮ್ಮ ನಾಯಕರಾಗಿರತಕ್ಕವರು ಈ ಸಭೆಯಲ್ಲಿ ಈ ನಿರ್ಣಯವನ್ನು ತಂದಿರುವುದಕ್ಕಾಗಿ ನಾನು ಅವರನ್ನು ಹೃತ್ಪೂರ್ವಕವಾಗಿ ವಂದಿಸುತ್ತಾ ಒಂದೆರಡು ವಿಷಯಗಳನ್ನು ತಮ್ಮ ಗಮನಕ್ಕೆ ತರಬೇಕೆಂದು ಎದ್ದು ನಿಂತಿದ್ದೇನೆ. 1952ನೇ ಇಸವಿಯಿಂದ ಒಟ್ಟು ಗೂಡಿ ಅನೇಕ ಚರ್ಚೆಗಳು ಆಗಿವೆ. ಆದರೆ ಈ ದಿವಸದ ಚರ್ಚೆ ಬಹಳ ಮುಖ್ಯವಾದ ಚರ್ಚೆಯೆಂದು ನನಗೆ ತಿಳಿಯುತ್ತದೆ. ಇದನ್ನು ಯಾರೂ ಬದರಾಯಿಸಿ ಮಾತನಾಡುವವರಿಲ್ಲ. ಇದು ಹೆಮ್ಮೆಯ ವಿಷಯ. ಭಾರತ ಯಾವ ರೀತಿ ಇದೆ. ಭಾರತ ಯಾರಿಗೆ ಸೇರಿದ್ದು ಎಂಬುದು ಹಿಂದೆ ಜನಗಳಿಗೆ ಗೊತ್ತಿರಲಿಲ್ಲ. ಈಚೆಗೆ ಸ್ವರಾಜ್ಯ ಬಂದಮೇಲೆ ಭಾರತ ನಮ್ಮದು ಎಂದು ಹಳ್ಳಿಗಳಲ್ಲಿರತಕ್ಕ ರೈತ ಬಾಂಧವರೆಲ್ಲರೂ ತಿಳಿದುಕೊಂಡು ಅದಕ್ಕೋಸ್ಕರ ತ್ಯಾಗ ಮಾಡಲು ಸಿದ್ಧರಾಗಿದ್ದಾರೆ. ನಮ್ಮ ಸ್ನೇಹಿತರಾದಂಥ ಶ್ರೀ ಮಾದಯ್ಯ ಗೌಡರು ಅದನ್ನು ವಿವರಿಸಿ ಹೇಳಿದ್ದಾರೆ. ರೈತರು ಮುಂದೆ ಬರುವ ವಿಷಯದಲ್ಲಿ ಯಾರೂ ಕೂಡ ಹಿಂತೆಗೆಯುವುದಿಲ್ಲ. ಇದಕ್ಕೋಸ್ಕರ ಪ್ರಾಣದಾನ ಆದಿಯಾಗಿ ಎಲ್ಲವನ್ನೂ ತ್ಯಾಗ ಮಾಡಲು ಜನ ಸಿದ್ಧರಾಗಿದ್ದಾರೆ. ನಿಸ್ಪೃಹತೆಯಿಂದ ಒಬ್ಬರಿಗೊಬ್ಬರಿಗೆ ಇರತಕ್ಕ ವೈಷಮ್ಯವನ್ನು ತ್ಯಜಿಸಿ ಹಳ್ಳಿಗಾಡುಗಳಲ್ಲಿ ಮತ್ತು ಪಟ್ಟಣಗಳಲ್ಲಿ ಇರತಕ್ಕ ಸಂಸ್ಥೆಗಳಲ್ಲಿ ಮುಖಂಡರುಗಳು ಒಮ್ಮತದಿಂದ ಕೆಲಸ ಮಾಡಿದರೆ ಭಾರತ ಸರ್ಕಾರಕ್ಕೆ ಏನು ಬೇಕಾದರೂ ಸಹಾಯ ಮಾಡಬಹುದು. ಪ್ರಧಾನಿಗಳಾಗಿರತಕ್ಕ ಪಂಡಿತ್ ನೆಹರೂ ಅವರಿಗೆ ಏನು ಬೇಕಾದರೂ ಸಹಾಯ ಮಾಡಲು ಮೈಸೂರು ಸಂಸ್ಥಾನದಲ್ಲಿರತಕ್ಕ ಜನ ಸಿದ್ಧವಾಗಿದ್ದಾರೆ. ಜನರು ಸೇವೆಗೆ ಸಿದ್ಧವಾಗಿದ್ದಾರೆ. ಅವರಿಗೆ ನಮ್ಮ ಮುಖಂಡರ ಮಾತಿನಲ್ಲಿ ನಂಬಿಕೆಯೂ ಇದೆ. ಕೊಡಗಿನ ಮಾನ್ಯ ಸದಸ್ಯರು ಪಾನನಿರೋಧದ ವಿಚಾರದಲ್ಲಿ ಸ್ವಲ್ಪ ಮಾತನಾಡಿದರು. ಅದನ್ನು ಸರಕಾರದವರು ಬಹಳ ಮುಖ್ಯವಾಗಿ ಗಮನಿಸಬೇಕು. ಪಾನನಿರೋಧದಿಂದ ಬಹಳ ಜನ ಬಡವರು ಅವರ ಜೀವನವನ್ನು ಸುಗಮವಾಗಿ ನಡೆಸಿಕೊಂಡು ಹೋಗುತ್ತಿದ್ದಾರೆ. ಯಾವ ದೇಶದಲ್ಲಾಗಲಿ ಬಡವರು ಸರಿಯಾದ ಜೀವನ ಮಾಡಲು ಅವಕಾಶವಿರಬೇಕೆಂಬ ಉದ್ದೇಶದಿಂದ ಪಾನನಿರೋಧ ಜಾರಿಗೆ ತಂದು ಅನುಕೂಲ ಮಾಡಿದ್ದಾರೆ. ಕೆಲವು ದೇಶಗಳಲ್ಲಿ, ಕಾಡು ಪ್ರದೇಶಗಳಲ್ಲಿ ಮತ್ತು ಮೂಲೆಗಳಲ್ಲಿ ಪಾನನಿರೋಧ ಸರಿಯಾಗಿ ಜಾರಿಗೆ ಬಾರದೆ ಕಳ್ಳಬಟ್ಟಿ ತಯಾರಿಸುತ್ತಿರಬಹುದು. ಈ ವಿಚಾರವನ್ನು ಅನೇಕ ಸಲ ಈ ಸಭೆಯಲ್ಲಿ ಹೇಳಿದ್ದಾರೆ. ಅದನ್ನು ಕಷ್ಟಪಟ್ಟು ನಿಲ್ಲಿಸಬೇಕಾದ್ದು ಸರ್ಕಾರದ ಧರ್ಮ. ಪುನಃ ಪಾನನಿರೋಧವನ್ನು ರದ್ದು ಮಾಡಿ ಅದರಿಂದ ಬಂದ ಉತ್ಪತ್ತಿಯನ್ನು ದೇಶ ರಕ್ಷಣೆಗೆ ಹಾಕಬೇಕಾಗಿಲ್ಲ. ಅದರಿಂದ ಸುಮಾರು 10-15 ಕೋಟಿ ರೂಪಾಯಿಗಳು ವರ್ಷಕ್ಕೆ ಬರಬಹುದು. ನಮ್ಮ ದೇಶದಲ್ಲಿ ಎರಡು ಕೋಟಿ ಜನರಿದ್ದಾರೆ. ಆ ಜನರು ಯುದ್ಧ ಮುಗಿಯುವವರೆಗೆ ಪಾನನಿರೋಧದಿಂದ ಬರುವಷ್ಟು ಹಣವನ್ನು ತಲೆಗೆ ಇಷ್ಟು ಎಂದು ಮಾಡಿದರೆ ಒಳ್ಳೆಯದು. ಆದುದರಿಂದ ಖಾಯಂ ಆಗಿ ಪಾನನಿರೋಧವನ್ನು ಜಾರಿಗೆ ತರಬೇಕಾದ್ದು ಅಗತ್ಯ. ಮಾನ್ಯ ಸದಸ್ಯರು ಒಂದು ತಿಂಗಳ ಸಂಬಳ ಕೊಡಲು ಒಪ್ಪಿದ್ದಾರೆ. ನಾನೂ ಸಹ ಸುಮಾರು 15-20 ದಿವಸಗಳ ಕೆಳಗೇ ಒಪ್ಪಿದ್ದೇನೆ, ಕೊಡಲು ಸಿದ್ಧವಾಗಿದ್ದೇನೆ. ಅಲ್ಲದೆ ಮಂಡ್ಯ ಸಕ್ಕರೆ ಕಂಪೆನಿಯಲ್ಲಿ ರೈತರು, ಸಾರ್ವಜನಿಕರು ಟನ್ ಒಂದಕ್ಕೆ ಒಂದು ರೂಪಾಯಿಯಂತೆ ಕೊಡಬೇಕೆಂದು ಮುಖಂಡರು ಹೇಳಿದ್ದನ್ನು ಒಪ್ಪುವುದರಲ್ಲಿದ್ದಾರೆ. ಹಣ ಪಾವತಿ ಮಾಡುವಾಗ ಒಪ್ಪಿಗೆ ಕೊಟ್ಟರೆ ಸುಮಾರು ನಾಲ್ಕೈದು ಲಕ್ಷ ರೂಪಾಯಿಗಳು ದೊರೆಯಬಹುದು. ನಮ್ಮ ಜನರಿಂದಲೂ ಹಣಕಾಸನ್ನು ವಸೂಲು ಮಾಡುತ್ತಿದ್ದಾರೆ. ಇದನ್ನೆಲ್ಲಾ ಗಮನಿಸಿ ಸರ್ಕಾರ ಮಾಡಿರುವ ಕೆಲಸವನ್ನು ಶಾಶ್ವತವಾಗಿ ಮುಂದುವರಿಸಬೇಕು. ಮಹಾತ್ಮ ಗಾಂಧಿಯವರೇ ಪಾನನಿರೋಧದ ವಿಚಾರದಲ್ಲಿ ಒಂದು ತಳಹದಿ ಹಾಕಿರುವಾಗ ಅದನ್ನು ಖಾಯಂ ಆಗಿ ನಡೆಸಬೇಕಾದ್ದು ಆವಶ್ಯಕ. ಈಗ ಎಷ್ಟೋ ಜನರು ಯುದ್ಧಕ್ಕೆ ಹೋಗುತ್ತಿದ್ದಾರೆ. ಕೊಡಗಿನ ಜನರಲ್ ತಿಮ್ಮಯ್ಯನವರು, ಕಾರಿಯಪ್ಪನವರು ಒಳ್ಳೆಹೆಸರು ಪಡೆದಿದ್ದಾರೆ. ಈಗ ಪ್ರಚಾರ ಮಾಡಿದರೆ ಭಾರತ ಸರ್ಕಾರಕ್ಕೆ ಏನು ಬೇಕಾದರೂ ಕೊಡಲು ಎಲ್ಲರೂ ಸಿದ್ಧವಾಗಿದ್ದಾರೆ. ನಾನು ವಯಸ್ಸಾಗಿದ್ದರೂ ಕೈಲಾದ್ದನ್ನು ಮಾಡಲು ಸಿದ್ಧವಾಗಿದ್ದೇನೆ. ಭಾರತದ ಮೇಲೆ ಅಷ್ಟು ಆಸೆಯಿದೆ. ಎಲ್ಲರೂ ಕೂಡ ಸಾಧ್ಯವಾದ ರೀತಿಯಲ್ಲಿ ನೆರವುನೀಡಬೇಕು ಎಂದು ಸೂಚಿಸಿ ಸರ್ಕಾರ ತಂದಿರುವ ನಿರ್ಣಯವನ್ನು ಸಂಪೂರ್ಣವಾಗಿ ಅನುಮೋದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

Mr. DEPUTY SPEAKER.—The House will now adjourn and meet tomorrow at one o' clock.

The House adjourned at Six of the Clock to meet again at One of the Clock on Tuesday, the 4th December 1962.

WD 8837—GPB—900—22-7-63